بِسْمِ اللّٰهِ الرَّحْمٰنِ الرَّحِيْمِ نَحْمَدُهٗ وَنُصَلِّیْ عَلٰی رَسُوْلِهِ الْكَرِيْمِ وَعَلٰی عَبْدِهِ الْمَسِيْحِ الْمَوْعُوْد

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ವರ್ಷ: 01

# ಕನ್ನಡ ಬದರ್ ವಾರ ಪತ್ರಿಕೆ
# WEEKLY BADAR QADIAN KANNADA

ಸಂಚಿಕೆ: 46

ವಾರ್ಷಿಕ ಶುಲ್ಕ ರೂ.500/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

26 ನವೆಂಬರ್ 2020, 26 ನಬುವ್ವತ್ 1399 ಹಿಜರಿ ಶಮ್‌ಸಿ,
10 ರಬಿಉಸ್ಸಾನಿ 1442 ಹಿಜರಿ ಖಮರಿ.

## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

وَالَّذِيْنَ اٰمَنُوْا وَعَمِلُوا الصّٰلِحٰتِ
سَنُدْخِلُهُمْ جَنّٰتٍ تَجْرِيْ مِنْ تَحْتِهَا الْاَنْهٰرُ
خٰلِدِيْنَ فِيْهَاۤ اَبَدًا ؕ وَعْدَ اللّٰهِ حَقًّا ؕ

(*ಅನ್ನಿಸಾಅ್:123*)

ಅಂದರೆ: ವಿಶ್ವಾಸವನ್ನು ಹೊಂದಿ, ಸತ್ಕರ್ಮಗಳನ್ನು ಗೈಯುವವರಾರೋ, ಅವರಿಗೆ ನಾವು ಕೆಳಭಾಗದಲ್ಲಿ ಹೊಳೆಗಳು ಹರಿಯುವ ಆರಾಮ ಧಾಮಗಳಲ್ಲಿ ಪ್ರವೇಶ ನೀಡುವೆವು. ಅವರು ಅಲ್ಲಿ ಶಾಶ್ವತವಾಗಿ ವಾಸಿಸುವರು. (ಇದು) ಅಲ್ಲಾಹನ ನಿಜವಾದ ವಾಗ್ದಾನವಾಗಿದೆ. ಮಾತಿನಲ್ಲಿ ಅಲ್ಲಾಹನಿಗಿಂತ ಸತ್ಯವಂತ ಬೇರೆ ಯಾರು?

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

### ಜುಮುಅ ದಿವಸ ಗುಸುಲ್ (ಸ್ನಾನ) ಮಾಡುವುದು ಎಣ್ಣೆ ಮತ್ತು ಸುಗಂಧ ಹಚ್ಚುವುದು ಮತ್ತು ಮೌನವಾಗಿರುವುದು ಹಾಗೂ ಗಮನವಹಿಸಿ ಖುತುಬ ಕೇಳುವ ಅನುಗ್ರಹಗಳು

* ಹಝ್‌ರತ್ ಸಲ್ಮಾನ್ ಫಾರ್ಸಿ ವರದಿ ಮಾಡುತ್ತಾರೆ ನಬಿ(ಸ) ನುಡಿದರು. ಯಾವ ವ್ಯಕ್ತಿ ಜುಮುಅ ದಿವಸ ಸ್ನಾನ ಮಾಡಿ ಸಾಧ್ಯವಾದಷ್ಟು ಸ್ವಚ್ಛತೆ ಕಾಪಾಡಿ ಎಣ್ಣೆಯನ್ನು ಹಚ್ಚಿ ಅಥವಾ ಸುಗಂಧ ಹಚ್ಚಿಕೊಂಡು ಇಬ್ಬರ ಮಧ್ಯೆ ನುಸುಳಿ ಪ್ರತ್ಯೇಕ ಮಾಡದೆ ನಮಾಝ್ ನಿರ್ವಹಿಸುತ್ತಾನೋ. ಆನಂತರ ಎಷ್ಟು ಸಾಧ್ಯವೋ ಅಷ್ಟು. ಇಮಾಮ್ ಜನರನ್ನು ಸಂಬೋಧಿಸುವಾಗ ಮೌನವಹಿಸುತ್ತಾನೋ ಅವನ ಪಾಪಗಳು ಈ ಜುಮುಅದಿಂದ ಬರುವ ಜುಮುಅದವರೆಗೆ ಕ್ಷಮಿಸಲ್ಪಡುವುದು.

* ಹಝ್‌ರತ್ ಅಬೂ ಹುರೈರ(ರ) ವರದಿ ಮಾಡುತ್ತಾರೆ.

ರಸೂಲುಲ್ಲಾಹ್(ಸ) ಹೇಳಿದರು. ನನಗೆ ನನ್ನ ಸಮುದಾಯ ಕಷ್ಟದಲ್ಲಿ ಸಿಲುಕಬಹುದೆಂಬ ಭಾವನೆ ಬರುತ್ತಿರಲಿಲ್ಲವಾದರೆ ಅಥವಾ ಜನರ ತೊಂದರೆಗಳ ಭಾವನೆ ಇರದಿರುತ್ತಿದ್ದರೆ ನಾನು ಅವಶ್ಯವಾಗಿ ಪ್ರತಿ ನಮಾಝಿನ ಜೊತೆಯಲ್ಲಿ ಮಿಸ್ವಾಕ್ ಮಾಡಲು ಆಜ್ಞಾಪಿಸುತ್ತಿದ್ದೆ.

* ಹಝ್‌ರತ್ ಅನಸ್(ರ) ವರದಿ ಮಾಡುತ್ತಾರೆ. ರಸೂಲುಲಲ್ಲಾಹ್(ಸ) ಹೇಳಿದರು. ನಾನು ಮಿಸ್ವಾಕಿನ ಬಗ್ಗೆ ನಿಮಗೆ ಹಲವು ಸಂದರ್ಭದಲ್ಲಿ ತಾಕೀತು ಮಾಡಿರುತ್ತೇನೆ.

**(ಸಹೀ ಬುಖಾರಿ ಸಂಪುಟ 2, ಕಿತಾಬುಲ್– ಜುಮುಅ, ಮುದ್ರಣ ಖಾದಿಯಾನ್ 2006)**

**ನಮ್ಮ ಜಮಾತಿನವರಿಗೆ ಅತ್ಯಂತ ಅವಶ್ಯವಿರುವುದೇನೆಂದರೆ ಅವರು ತಮ್ಮೊಳಗೆ ಒಂದು ಪವಿತ್ರವಾದ ಬದಲಾವಣೆಯನ್ನು ಮಾಡಿಕೊಳ್ಳಬೇಕು.**

**ಅಲ್ಲಾಹನ ಬಳಿ ಮನುಷ್ಯನ ನಿಜವಾದ ಚರಿತ್ರೆಯಿದೆ. ಅದರಲ್ಲಿ ಏನು ಬರೆಯಲಾಗಿದೆ ಎಂಬುದು ಅವನಿಗೆ ಗೊತ್ತು. ಆದುದರಿಂದ ಮನಸ್ಸನ್ನು ಜಾಗೃತಗೊಳಿಸುವತ್ತ ವಿಚಾರಿಸಿ ಕೊಳ್ಳಬೇಕಾಗುತ್ತದೆ.**

### ಸಯ್ಯದುನಾ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

ನಮ್ಮ ಜಮಾಅತಿಗೆ ಅತ್ಯಂತ ಅವಶ್ಯವಿರುವುದೇನೆಂದರೆ ಅವರು ತಮ್ಮೊಳಗೆ ಪವಿತ್ರವಾದ ಬದಲಾವಣೆಯನ್ನು ಹೊಂದಬೇಕಾಗಿದೆ. ಏಕೆಂದರೆ ಅದರಿಂದ ಅವರಿಗೆ ತಾಜಾ ಜ್ಞಾನ ಲಭಿಸುತ್ತದೆ. ಆಧ್ಯಾತ್ಮಿಕ ಜ್ಞಾನದ ದಾವೆ ಮಾಡಿ ಅದರಂತೆ ನಡೆದುಕೊಳ್ಳದಿದ್ದರೆ ಅದು ಬರೀ ಮಾತಿನ ಕಂತೆ ಆಗಿರುವುದು. ಆದುದರಿಂದ ನಮ್ಮ ಜಮಾಅತ್ ಇತರರಂತೆ ಆಲಸ್ಯ ವಹಿಸಿ ನಿರ್ಲಕ್ಷ್ಯ ತೋರಬಾರದು. ಅವರ ಆಲಸ್ಯ ಕಂಡು ತಾವು ಸಹ ಕಠಿಣ ಹೃದಯಿ ಆಗಬಾರದು.

ಮನುಷ್ಯನು ಬಹಳಷ್ಟು ಆಸೆ ಆಕಾಂಕ್ಷೆಗಳನ್ನು ಇಟ್ಟುಕೊಂಡಿರುತ್ತಾನೆ. ಆದರೆ ಅಗೋಚರ ವಿಧಿ ನಿಯಮಗಳೇನೆಂದು ಯಾರಿಗೆ ಗೊತ್ತು. ಜೀವನವು ನಾವು ಎಣಿಸಿದಂತೆ ಸಾಗುವುದಿಲ್ಲ. ನಾವೊಂದು ಬರೆಯುತ್ತೇನೆ. ವಿಧಿಯೊಂದು ಬರೆದಿರುತ್ತದೆ. ಮತ್ತೆ ಅದೇ ಸತ್ಯವಾಗಿರುತ್ತದೆ. ಅಲ್ಲಾಹನ ಬಳಿ ಮನುಷ್ಯನ ಸತ್ಯವಾದ ಚರಿತ್ರೆಯಿದೆ. ಅದರಲ್ಲಿ ಏನು ಬರೆದಿದೆ, ಅವನಿಗೆ ಗೊತ್ತು. ಆದುದರಿಂದ ಮನಸ್ಸನ್ನು ಜಾಗೃತಗೊಳಿಸುತ್ತ ವಿಚರಿಸಿಕೊಳ್ಳಬೇಕಾಗುತ್ತದೆ.

ಏಕದೇವತ್ವದ ಒಂದು ವಿಧ ಹೀಗೂ ಇದೆ. ಅಲ್ಲಾಹನ ಪ್ರೀತಿಯಲ್ಲಿ ತನ್ನ ಆತ್ಮಾಭಿಲಾಷೆಗಳನ್ನು ಬಿಡಬೇಕಾಗುತ್ತದೆ ಮತ್ತು ತನ್ನನ್ನು ಅವನಲ್ಲಿ ಕಳೆದುಕೊಳ್ಳಬೇಕಾಗುತ್ತದೆ.

ನಿಮಗೆಲ್ಲರಿಗೂ ತಿಳಿದಿರಬಹುದು. ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಮತ್ತು ಹಝ್‌ರತ್ ರಸೂಲುಲ್ಲಾಹ್(ಸ) ಹದೀಸುಗಳಲ್ಲಿ ಹೇಳಿರುವರು. ಒಂದು ಕಾಲ ಹೀಗೂ ಕಳೆದೆವು. ಮನುಷ್ಯ ಕುಲ, ಜಾನುವಾರುಗಳು, ಪಕ್ಷಿಗಳು, ಭೂಮಿ ಆಕಾಶ ಮತ್ತು ಭೂಮ್ಯಾಕಾಶಗಳಲ್ಲಿ ಏನೆಲ್ಲ ಇದೆ. ಅದರ ಗುರುತು ಸಹ ಇರಲಿಲ್ಲ. ಕೇವಲ ಅಲ್ಲಾಹನು ಮಾತ್ರವಿದ್ದನು. ಅದೇ ಇಸ್ಲಾಮಿನ ವಿಶ್ವಾಸವಾಗಿದೆ. "ವಲಂ ಯಕುಮ್ ಮಹು ಶೈಲಿ" ಅಂದರೆ ಅಲ್ಲಾಹನ ಹೊರತು ಯಾವ ವಸ್ತುವು ಇರಲಿಲ್ಲ ನಮಗೆ ಅವನು ಖುರ್‌ಆನ್ ಮತ್ತು ಹದೀಸುಗಳ ಮೂಲಕ ಈ ಸಂದೇಶವನ್ನು ನೀಡಿದ್ದಾನೆ. ಇನ್ನೊಂದು ಕಾಲ ಹೀಗೆ ಬರುವುದು ಆಗ ಅಲ್ಲಾಹನ ಹೊರತು ಏನೂ ಉಳಿಯಲಾರದು. ಆ ಕಾಲ ತುಂಬ ಭಯಾನಕವಾದ ಕಾಲ ಆಗಿರಬಹುದು. ಅದರ ಮೆಲೆ ಪ್ರತಿಯೊಬ್ಬ ಸತ್ಯವಿಶ್ವಾಸಿ ಹಾಗೂ ಮುಸಲ್ಮಾನನಿಗೆ ವಿಶ್ವಾಸ ಹೊಂದುವುದು ಅನಿವಾರ್ಯವಾಗಿದೆ. ಯಾರು ವಿಶ್ವಾಸ ಹೊಂದುವುದಿಲ್ಲವೋ ಅವನು ಮುಸ್ಲಿಮನಲ್ಲ ಮತ್ತು ಅವನು ಅವಿಶ್ವಾಸಿಯಾಗಿರುತ್ತಾನೆ. ಯಾವ ರೀತಿ ಸ್ವರ್ಗ, ನರಕ, ಪ್ರವಾದಿಗಳ ಮೇಲೆ ಮತ್ತು ಅವರ ಗ್ರಂಥಗಳ ಮೇಲೂ ವಿಶ್ವಾಸ ಹೊಂದುವುದು ಅನಿವಾರ್ಯವಾಗಿದೆಯೋ ಅದೇ ರೀತಿ ಅಲ್ಲಾಹನ ಆಜ್ಞೆಯಿಂದ ಪ್ರಲಯ ಬಂದು ಎಲ್ಲವೂ ಸರ್ವನಾಶ ಹೊಂದುವುದು. ಇದು ಅಲ್ಲಾಹನ ವಿಧಿ ನಿಯಮವಾಗಿದೆ.

**(ಮಲ್ಫೂಝೂತ್, ಸಂಪುಟ 1, 222–224, ಮುದ್ರಣ ಖಾದಿಯನ್ 2018)**

**ರಸೂಲ್ ಕರೀಂ(ಸ) ರವರ ಸಂತಾನಕ್ಕಾಗಿ ಸದ್‌ಖಾ (ದಾನ) ಧರ್ಮ ಬದ್ಧವಲ್ಲ (ಜಾಯಿಝ್ ಅಲ್ಲ) ಅದರಲ್ಲಿ ಅಡಗಿರುವ ಜಾಣ್ಮೆ ಏನೆಂದರೆ ಆ ಮಹೋನ್ನತವಾದಿಯ ಸಂತಾನಕ್ಕೆ ಗೌರವ ಸೂಚಿಸುವ ವಿಧಾನವೂ ಖಂಡಿತವಾಗಿಯೂ ದಾನವಾಗಿರಲು ಸಾಧ್ಯವಿಲ್ಲ. ಅದು ಆ ಪರೋಪಕಾರಿಯ ಉಪಕಾರವನ್ನು ಈಡೇರಿಸುವ ಒಂದು ನಿಕೃಷ್ಠ ರೀತಿಯ ಒಂದು ಪ್ರಯತ್ನ ಮಾತ್ರ ಆಗಬಹುದು.**

ಸಯ್ಯದ್‌ನಾ ಹಜ್‌ರತ್ ಮುಸ್ಲಿಹ್ ಮೌಊದ್(ರ) **"ವಮಿಮ್ಮ ರಝ್‌ಖ್‌ನಾಹುಮ್ ಯುನ್‌ಫಿಖೂನ್"** ವ್ಯಾಖ್ಯಾನದಲ್ಲಿ ಹೇಳುತ್ತಾರೆ.

"ಒಂಭತ್ತನೇ ವಿಧಾನ ಖರ್ಚು ಮಾಡುವ ಬಗ್ಗೆ ಪವಿತ್ರ ಖುರ್‌ಆನ್‌ನಿಂದ ಔದಾರ್ಯ ನೀತಿ ಸ್ಪಷ್ಟವಾಗುವುದೇನೆಂದರೆ, ಅದು ತಂದೆ ತಾಯಿಯರ ಸೇವಾಕ್ರಮದಂತಿದೆ. ಈ ವರ್ತನೆಯು ಅವರ ಹಕ್ಕೆಂದು ಹೇಳಬಹುದೇ ಹೊರತು ಉಪಕಾರವಲ್ಲ. ಏಕೆಂದರೆ ಹೆತ್ತವರು ಸೇವೆ ಮಾಡುವುದಿಲ್ಲ. ಬದಲು ಒಂದು ಪ್ರಾಕೃತಿಕ ಉತ್ಸಾಹದಿಂದ ಮಕ್ಕಳನ್ನು

*(ಪುಟ ಸಂಖೆ 11 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ಹೇ ಮುಆಧ್. ನಾನು ನಿನ್ನನ್ನು ತಾಕೀತು ಮಾಡುತ್ತೇನೆ. ನೀನು ಪ್ರತಿ ನಮಾಝಿನ ನಂತರ ಈ ಧ಼ಿಕ್ರ್ ಮಾಡು. ಇದನ್ನು ಎಂದೂ ಮಾಡದೇ ಇರಬೇಡ: ಅಲ್ಲಾಹುಮ್ಮ ಅಇನ್ನಿ ಅಲಾ ಧ಼ಿಕ್ರಿಕ, ವ ಶುಕ್ರಿಕ ವ ಹುಸ್‌ನಿ ಇಬಾದತಿಕ.**

**ಹಝ್ರ್‌ರತ್ ಪೈಗಂಬರ್(ಸ) ಹೇಳಿದರು: ನೀನು ಅಲ್ಲಾಹನಿಗಾಗಿ ಇತರರನ್ನು ಪ್ರೀತಿಸು ಮತ್ತು ಅಲ್ಲಾಹನಿಗಾಗಿ ಮಾತ್ರ ಇತರರನ್ನು ದ್ವೇಷಿಸು. ನೀನು ನಿನ್ನ ನಾಲಗೆಯನ್ನು ಅಲ್ಲಾಹನ ಸ್ಮರಣೆಯಲ್ಲಿ ನಿರತವಾಗಿರಿಸು. ಇದೇ ಶ್ರೇಷ್ಠವಾದ ಈಮಾನ್ ಆಗಿದೆ. ನಾನು ಕೇಳಿದೆ: ಇದಲ್ಲದೆ ಬೇರೇನಿದೆ?. ಹಝ್ರ್‌ರತ್ ಪೈಗಂಬರ್(ಸ) ಹೇಳಿದರು: ನೀನು ನಿನಗೆ ಇಷ್ಟಪಡುವುದನ್ನೇ ಇತರರಿಗಾಗಿ ಇಷ್ಟಪಡು ಮತ್ತು ನಿನಗೆ ಇಷ್ಟಪಡದ ಕಾರ್ಯವನ್ನು ಇತರರ ಪರವಾಗಿಯೂ ಇಷ್ಟಪಡದಿರು.**

**ರಸೂಲುಲ್ಲಾಹ್(ಸ) ರವರ ಪ್ರೀಯ ಬದರಿ ಹಾಗೂ ನಿಷ್ಠಾವಂತ ಸಹಾಬಿ ಹಝ್ರ್‌ರತ್ ಮುಅಧ್ ಬಿನ್ ಜಬಲ್(ರ) ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ**

**ಮೂರು ದಿವಂಗತರಾದ ಮೌಲವಿ ಫರ್ಝ಼ಾನ್ ಖಾನ್ ಸಾಹಿಬ್, ಅಬ್ದುಲ್ಲಾಹ್ ಮೌಸೀಕೋ ಸಾಹಿಬ್, ಅಬ್ದುಲ್‌ವಾಹಿದ್ ಸಾಹಿಬ್‌ರವರ ಜನಾಝ಼ ನಮಾಝ಼್ ನಿರ್ವಹಣೆ ಹಾಗೂ  ಅವರ ಸದ್ಗುಣಗಳ ಪ್ರಸ್ತಾವನೆ.**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರ್‌ರತ್ ಮಿರ್ಝ಼ಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **23–10–2020** ರಂದು ನೀಡಿದ **ಜುಮುಅ ಖುತ್‌ಬ**

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيمِ۔ بِسْمِ اللّٰهِ الرَّحْمٰنِ الرَّحِيمِ

اَلْحَمْدُ لِلّٰهِ رَبِّ الْعَالَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔

اِيَّاكَ نَعْبُدُ وَاِيَّاكَ نَسْتَعِيْنُ۔ اِهْدِنَا الصِّرَاطَ الْمُسْتَقِيْمَ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

ಇಂದು ನಾನು ಪ್ರಸ್ತಾಪಿಸುವ ಸಹಾಬಿಯ ಹೆಸರು ಹಝ್ರ್‌ರತ್ ಮುಆಧ್ ಬಿನ್ ಜಬಲ್ ರಝಿಯಲ್ಲಾಹು ಅನ್‌ಹು ಎಂದಾಗಿದೆ. ಅವರ ಹೆಸರು ಮುಆಧ್ ಎಂದಾಗಿತ್ತು. ಅವರ ತಂದೆಯ ಹೆಸರು ಜಬಲ್ ಬಿನ್ ಅಮರ್ ಮತ್ತು ತಾಯಿಯ ಹೆಸರು ಹಿಂದ್ ಬಿನ್ತ್ ಸಹಲ್ ಎಂದಾಗಿತ್ತು. ಅವರು ಜಹೀನ ಗೋತ್ರದ ಶಾಖೆ ಬನೂ ರಬಾಹ್‌ರವರಾಗಿದ್ದರು. ಹಝ್ರ್‌ರತ್ ಮುಆಧ್ ಬಿನ್ ಜಬಲ್‌ರ(ರ) ಉಪನಾಮ ಅಬ್ದುರ್ರಹ್ಮಾನ್ ಎಂದಾಗಿತ್ತು. ಅವರ ಸಂಬಂಧ ಖಝ್ರ್‌ರಜ್ ಗೋತ್ರದ ಶಾಖೆ ಅದ್ದಿ ಬಿನ್ ಸಅದ್ ಬಿನ್ ಅಲಿಯೊಂದಿಗೆ ಆಗಿತ್ತು. 'ಸೇರ್ ಸಹಾಬ'ಎಂಬ ಗ್ರಂಥದ ಲೇಖಕರು ಬರೆಯುತ್ತಾರೆ: ಸಅದ್ ಬಿನ್ ಅಲಿಯರಿಗೆ ಎರಡು ಗಂಡುಮಕ್ಕಳಿದ್ದರು. ಅವರ ಹೆಸರು ಸಲ್ಮ ಮತ್ತು ಅದ್ದಿ ಎಂದಾಗಿತ್ತು. ಸಲ್ಮಾರ ವಂಶದಿಂದ ಬನೂ ಸಲ್ಮಾ ಇದ್ದರು. ಇಸ್ಲಾಮಿನ ಕಾಲದಲ್ಲಿ ಅದ್ದಿ ಬಿನ್ ಸಅದಿನ ಕುಟುಂಬದಿಂದ ಕೇವಲ ಎರಡು ವ್ಯಕ್ತಿಗಳು ಬಾಕಿಯಿದ್ದರು. ಒಬ್ಬರು ಹಝ್ರ್‌ರತ್ ಮುಆಧ್ ಮತ್ತು ಎರಡನೆಯವರು ಅವರ ಮಗನಾದ ಅಬ್ದುರ್ರಹ್ಮಾನ್. ಬನೂ ಅದ್ದಿಯ ಮನೆಗಳು ಬನೂ ಸಲ್ಮಾದ ಆಸುಪಾಸಿನಲ್ಲಿದ್ದುವು.ಹಝ್ರ್‌ರತ್ ಮುಆಧ್ ಬಿನ್ ಜಬಲ್(ರ) ಬಹಳ ಬಿಳಿಯಾದ ಚರ್ಮಕಾಂತಿ ಮತ್ತು ಸುಂದರವಾದ ಮುಖವನ್ನು ಹೊಂದಿದ್ದರು. ಹೊಳೆಯುವ ಹಲ್ಲುಗಳನ್ನು ಮತ್ತು ಮನೋಹರವಾದ ಕಣ್ಣುಗಳನ್ನು ಹೊಂದಿದ್ದರು. ಅವರು ಅವರ ಸಮುದಾಯದ ಯುವಕರಲ್ಲಿ ಅತ್ಯಂತ ಸುಂದರವಾದ ಯುವಕರಾಗಿದ್ದರು ಮತ್ತು ತುಂಬಾ ಉದಾರಿಯೂ ಆಗಿದ್ದರು. ಅಬೂ ನಈಮ್ ವರದಿ ಮಾಡುತ್ತಾರೆ: ಹಝ್ರ್‌ರತ್ ಮುಆಧ್(ರ) ಅನ್ಸಾರರಲ್ಲಿ ತಾಳ್ಮೆಯುಳ್ಳ, ಲಜ್ಜೆಯುಳ್ಳ ಮತ್ತು ಬಹಳ ಉದಾರಿಯಾದ ಯುವಕರಾಗಿದ್ದರು. ಹಝ್ರ್‌ರತ್ ಮುಆಧ್ ಬಿನ್ ಜಬಲ್(ರ) ಅಖಬದಲ್ಲಿ ನಡೆದ ಎರಡನೇ ಬೈಅತಿನಲ್ಲಿ 70 ಅನ್ಸಾರರೊಂದಿಗೆ ಇದ್ದರು. ಇಸ್ಲಾಂ ಸ್ವೀಕರಿಸುವಾಗ ಅವರಿಗೆ 18 ವರ್ಷ ಪ್ರಾಯವಿದ್ದಿತ್ತು. ಅವರು ಬದ್ರ್, ಉಹದ್, ಖ಼ಂದಕ್ ಮತ್ತು ನಂತರದ ಎಲ್ಲ ಯುದ್ಧಗಳಲ್ಲಿ ಹಝ್ರ್‌ರತ್ ಪೈಗಂಬರರೊಂದಿಗೆ(ಸ) ಭಾಗವಹಿಸಿದ್ದರು. ಅವರು ಬದ್ರ್ ಯುದ್ಧದಲ್ಲಿ ಭಾಗವಹಿಸುವಾಗ ಅವರಿಗೆ ಇಪ್ಪತ್ತು ಅಥವಾ ಇಪತ್ತೊಂದು ವಯಸ್ಸಿತ್ತು. ಅವರ ಅಖ಼್‌ಯಾಫಿ ಸಹೋದರ, ಎಂದರೆ, ಸಹೋದರರ ತಾಯಿ ಒಬ್ಬಳು ತಂದೆ ಬೇರೆ ಬೇರೆಯಾಗಿರುವುದನ್ನು ಹಾಗೆ ಹೇಳಲಾಗುತ್ತದೆ. ಅಂತಹ ಒಬ್ಬ ಸಹೋದರರಾದ ಹಝ್ರ್‌ರತ್ ಅಬ್ದುಲ್ಲಾಹ್ ಬಿನ್ ಜದ್ದ್ ಸಹ ಬದ್ರ್ ಯುದ್ಧದಲ್ಲಿ ಭಾಗವಹಿಸಿದ್ದರು. ಅಸದುಲ್ ಗ಼ಾಬದ ಪ್ರಕಾರ ಅವರ ಅಖ಼್‌ಯಾಫಿ ಸಹೋದರರ ಹೆಸರು ಸೆಹಲ್ ಬಿನ್ ಮುಹಮ್ಮದ್ ಬಿನ್ ಜದ್ದ್ ಎಂದಾಗಿತ್ತು. ಸೆಹಲ್ ಬನೂ ಸಲ್ಮಾದಿಂದಾಗಿದ್ದರು. ಆದ ಕಾರಣ, ಬನೂ ಸಲ್ಮಾ ಅವರನ್ನು ಸಹ ತಮ್ಮ ಗೋತ್ರದಲ್ಲಿ ಒಳಪಡಿಸುತ್ತಿದ್ದರು. ಮುಹಾಜಿರರು ಮಕ್ಕದಿಂದ ವಲಸೆ ಮಾಡಿ ಮದೀನಕ್ಕೆ ಬಂದಾಗ, ಹಝ್ರ್‌ರತ್ ಪೈಗಂಬರರು(ಸ) ಹಝ್ರ್‌ರತ್ ಅಬ್ದುಲ್ಲಾಹ್ ಬಿನ್ ಮಸ್‌ಊದ್‌ರ(ರ) ಸಹೋದರ ಸಂಬಂಧವನ್ನು ಹಝ್ರ್‌ರತ್ ಮುಆಧ್ ಬಿನ್ ಜಬಲ್‌ರೊಂದಿಗೆ(ರ) ಮಾಡಿಸಿದ್ದರು.

ಹಲವು ಚರಿತ್ರೆಯ ಪುಸ್ತಕಗಳಲ್ಲಿ ಇದೇ ಉಲ್ಲೇಖವಿದೆ. ಇಸ್ಲಾಂ ಸ್ವೀಕರಿಸಿದ ನಂತರ ಹಝ್ರ್‌ರತ್ ಮುಆಧ್ ಬಿನ್ ಜಬಲ್‌ರವರು(ರ) ಬನೂ ಸಲ್ಮಾದ ಯುವಕರೊಂದಿಗೆ ಸೇರಿ ಬನೂ ಸಲ್ಮಾದ ವಿಗ್ರಹವನ್ನು ಒಡೆದಿದ್ದರು. (ಅಸದುಲ್‌ಗಾಬ ಫೀ ಮಾರಿಫತಿಸ್ಸಹಾಬ, ಸಂಪುಟ–5, ಪುಟ–187, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ ಬೈರೂತ್ 2003) (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಭಾಗ–3, ಪುಟ–437–438, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 1990) (ಅಲ್‌ಅಸಾಬ ಫೀ ತಮೀಝಿಸ್ಸಹಾಬ, ಸಂಪುಟ–6, ಪುಟ–107–108, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 1995) (ಸೈರುಸ್ಸಹಾಬ ಸಂಪುಟ–3, ಪುಟ–497, ದಾರುಲ್ ಇಶಾಅತ್ ಕರಾಚಿ 2004)

ಒಬ್ಬ ಸಹಾಬಿಯ ಪ್ರಸ್ತಾಪದಲ್ಲಿ, ಯಾವ ರೀತಿಯಲ್ಲಿ ತಮ್ಮ ಕುಟುಂಬದ ಮನೆಗಳ ವಿಗ್ರಹಗಳನ್ನು ಒಡೆಯುತ್ತಿದ್ದರು ಎಂಬುವುದರ ಘಟನೆಯನ್ನು ಮುಂಚೆ ವಿವರಿಸಲಾಗಿತ್ತು. ಇಲ್ಲಿಯೂ ವಿವರಿಸುತ್ತೇನೆ. ಹಝ್ರ್‌ರತ್ ಅಮ್ರ್ ಬಿನ್ ಜಮೂಹ್‌ರವರು ತನ್ನ ಮನೆಯಲ್ಲೇ ಮರದ ಒಂದು ವಿಗ್ರಹವನ್ನು ತಯಾರಿಸಿ ಅದಕ್ಕೆ ಮನಾತ್ ಎಂದು ಹೆಸರಿಟ್ಟಿದ್ದರು ಮತ್ತು ಅದನ್ನು ಬಹಳ ಆದರಭಾವದಿಂದ ನೋಡುತ್ತಿದ್ದರು. ಬೈಅತ್ ಅಖ಼್‌ಬ ಸಾನಿಯ ಸಂದರ್ಭದಲ್ಲಿ ಬನೂ ಸಲ್ಮಾದ ಕೆಲವು ಯುವಕರು ಬೈಅತ್ ಮಾಡಿದರು. ಅವರಲ್ಲಿ ಹಝ್ರ್‌ರತ್ ಮುಆಧ್ ಬಿನ್ ಜಬಲ್(ರ) ಸಹ ಇದ್ದರು. ಅಮ್ರ್‌ರ ಸ್ವಂತ ಮಗನಾದ ಹಝ್ರ್‌ರತ್ ಮುಆಧ್ ಬಿನ್ ಅಮ್ರ್(ರ) ಸಹ ಬೈಅತ್ ಮಾಡಿದ್ದರು. ಹಝ್ರ್‌ರತ್ ಮುಆಧ್(ರ) ತನ್ನ ತಂದೆಯನ್ನು ಇಸ್ಲಾಮಿನ ಕಡೆಗೆ ಆಮಂತ್ರಿಸಲು ಒಂದು ಯೋಜನೆಯನ್ನು ಮಾಡಿದರು. ಅದೇನೆಂದರೆ, ಹಝ್ರ್‌ರತ್ ಅಮ್ರ್ ತನ್ನ ಮನೆಯಲ್ಲಿ ಅಲಂಕರಿಸಿ ಇಟ್ಟಿದ್ದ ವಿಗ್ರಹವನ್ನು ರಾತ್ರಿ ಸಮಯದಲ್ಲಿ ಹಝ್ರ್‌ರತ್ ಮುಆಧ್ ಬಿನ್ ಅಮ್ರ್(ರ) ಅಲ್ಲಿಂದ ತೆಗೆದು ಕಸದ ರಾಶಿಯಲ್ಲಿ ಎಸೆದು ಬರುತ್ತಿದ್ದರು. ಸಹಾಯಕ್ಕಾಗಿ ಕೆಲವು ಹುಡುಗರನ್ನು ಸಹ ಇರಿಸಿದ್ದರು. ಅವರಲ್ಲಿ ಹಝ್ರ್‌ರತ್ ಮುಆಧ್ ಬಿನ್ ಜಬಲ್(ರ) ಸಹ ಇದ್ದರು. ಹೇಗಿದ್ದರೂ ಒಂದು ದಿನ ವಿಗ್ರಹವನ್ನು ತೆಗೆದುಕೊಂಡು ಕಸದ ರಾಶಿಗೆ ಎಸೆದರು. ಅಮ್ರ್ ಅದನ್ನು ಹುಡುಕಿಕೊಂಡು ಮನೆಗೆ ಮರಳಿ ತಂದು ಹೀಗೆ ಹೇಳಿದರು: ನನ್ನ ವಿಗ್ರಹದೊಂದಿಗೆ ಈ ರೀತಿಯಲ್ಲಿ ವರ್ತಿಸುವವನು ಯಾರೆಂದು ಗೊತ್ತಾದರೆ, ನಾನು ಅವನಿಗೆ ಪಾಠ ಕಲಿಸುವಂತಹ ಶಿಕ್ಷೆಯನ್ನು ಕೊಡುವೆನು. ಮುಂದಿನ ದಿನ ಆ ಯುವಕರು ಆ ವಿಗ್ರಹದೊಂದಿಗೆ ಹೀಗೆಯೇ ಮಾಡಿದರು. ಅದು ಕಸದ ಹೊಂಡದಲ್ಲಿ ಬೋರಾಲಾಗಿ ಬಿದ್ದಿತ್ತು. ಅಮ್ರ್ ವಿಗ್ರಹವನ್ನು ಪುನಃ ತೆಗೆದು ಮೂರನೇ ದಿನ ಅದನ್ನು ಸ್ವಚ್ಛಗೊಳಿಸಿ ಅಲಂಕರಿಸಿ ಇಟ್ಟರು. ಅದರೊಂದಿಗೆ ತನ್ನ ಖಡ್ಗವನ್ನು ತೂಗಿಹಾಕಿದರು ಮತ್ತು ವಿಗ್ರಹವನ್ನು ಸಂಬೋಧಿಸಿ ಹೇಳಿದರು: 'ದೇವನಾಣೆ, ನಿನ್ನೊಡನೆ ಯಾರು ಈ ರೀತಿಯಲ್ಲಿ

ವರ್ತಿಸುತ್ತಿದ್ದಾರೆ ಎಂದು ನನಗೆ ಗೊತ್ತಿಲ್ಲ. ಆದರೆ ಈಗ ನಾನು ತಲವಾರನ್ನು ಸಹ ನಿನ್ನ ಬಳಿ ಇರಿಸಿ ಹೋಗುತ್ತಿದ್ದೇನೆ. ನಿನ್ನ ಸಂರಕ್ಷಣೆ ಈಗ ನೀನು ಸ್ವತಃ ಮಾಡು. ಖಡ್ಗ ನಿನ್ನ ಬಳಿಯೇ ಇದೆ.' ಮುಂದಿನ ದಿನ ಆ ವಿಗ್ರಹ ತನ್ನ ಜಾಗದಲ್ಲಿ ಇಲ್ಲದ್ದಾಗಿ ಅಮ್ರ್ ಕಂಡರು. ಅದು ಮೊಹಲ್ಲದ ಅದೇ ಕಸದಹೊಂಡದಲ್ಲಿ ಒಂದು ಸತ್ತ ನಾಯಿಯ ಕುತ್ತಿಗೆಗೆ ಕಟ್ಟಿಹಾಕಿದ ಸ್ಥಿತಿಯಲ್ಲಿ ಇದ್ದದ್ದನ್ನು ಕಂಡರು. ಇದನ್ನು ಕಂಡು ಅವರು ಬಹಳ ಗಾಬರಿ ಮತ್ತು ಅಚ್ಚರಿಗೊಂಡರು. ತುಂಬ ಚಿಂತಿತರಾಗಿ, ಯೋಚಿಸಲು ನಿರ್ಬಂಧಿತರಾದರು. 'ಯಾವ ವಿಗ್ರಹವನ್ನು ನಾನು ದೇವನೆಂದು ಭಾವಿಸಿರುವೆನೋ ಅದಕ್ಕೆ ತನ್ನ ಬಳಿ ಖಡ್ಗವಿದ್ದೂ ತನ್ನನ್ನು ರಕ್ಷಿಸಲು ಸಾಧ್ಯವಾಗುತ್ತಿಲ್ಲ. ಅದು ನನ್ನನ್ನು ಹೇಗೆ ಸಂರಕ್ಷಿಸುವುದು. ಮಾತ್ರವಲ್ಲ, ಒಂದು ಸತ್ತ ಅದರ ಕುತ್ತಿಗೆಯೊಂದಿಗೆ ಕಟ್ಟಿಹಾಕಲಾಗಿದೆ. ಹೀಗಿರುವಾಗ ಇದು ಹೇಗೆ ದೇವನಾಗಲು ಸಾಧ್ಯ?' ಹೇಗಿದ್ದರೂ ಈ ಸಂಗತಿ ಅವರನ್ನು ಇಸ್ಲಾಮಿನ ಕಡೆಗೆ ಆಕರ್ಷಿತವಾಗಲು ಮತ್ತು ಇಸ್ಲಾಂ ಧರ್ಮವನ್ನು ಸ್ವೀಕರಿಸಲು ಕಾರಣವಾಗಿತ್ತು. (ಅದಸುಲ್‌ಗಾಬ, ಸಂಪುಟ-4, ಪುಟ-195, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2003)

ಉಹದ್ ಯುದ್ಧದ ನಂತರ ಹಝ್ರತ್ ಪೈಗಂಬರ್(ಸ) ಮದೀನ ಮರಳಿಬಂದಾಗ, ಅಳು ಮತ್ತು ರೋದನದ ಶಬ್ದ ಗಲ್ಲಿಗಳಿಂದ ಬರುತ್ತಿತ್ತು. ಈ ರೋದನದ ಶಬ್ದಕ್ಕೆ ಕಾರಣವೇನೆಂದು ಹಝ್ರತ್ ಪೈಗಂಬರ್(ಸ) ಕೇಳಿದರು. ಅನ್ಸಾರಿನ ಸ್ತ್ರೀಯರು ಶಹೀದ್ ಆದವರ ದುಃಖದಲ್ಲಿ ಅಳುತ್ತಿದ್ದಾರೆ ಎಂದು ಹೇಳಲಾಯಿತು. ಹಝ್ರತ್ ಹಂಝರಿಗಾಗಿ(ರ) ಅಳುವವರು ಯಾರೂ ಇಲ್ಲವೇ ಎಂದು ಹಝ್ರತ್ ಪೈಗಂಬರ್(ಸ) ಕೇಳಿದರು. ಹಝ್ರತ್ ಪೈಗಂಬರರು(ಸ) ಹಝ್ರತ್ ಹಂಝರಿಗಾಗಿ ಮಗ್‌ಫಿರತಿನ ದುಆ ಮಾಡಿದರು. ಇದನ್ನೆಲ್ಲ ಆಲಿಸಿದ ಹಝ್ರತ್ ಸಅದ್ ಬಿನ್ ಮುಆಧ್(ರ), ಹಝ್ರತ್ ಸಅದ್ ಬಿನ್ ಉಬಾದ(ರ), ಹಝ್ರತ್ ಮುಆಧ್ ಬಿನ್ ಜಬಲ್(ರ) ಮತ್ತು ಹಝ್ರತ್ ಅಬ್ದುಲ್ಲಾಹ್ ಬಿನ್ ರವಾಹ(ರ) ತಮ್ಮ ತಮ್ಮ ಮೊಹಲ್ಲಗಳಿಗೆ ಹೋದರು ಮತ್ತು ಮದೀನದ ರೋದನ ಮಾಡುವ ಮತ್ತು ಶೋಕಾಚರಣೆ ನಡೆಸುವ ಸ್ತ್ರೀಗಳನ್ನು ಒಟ್ಟುಗೂಡಿಸಿದರು. ಹಝ್ರತ್ ಪೈಗಂಬರರ(ಸ) ದೊಡ್ಡಪ್ಪರಿಗಾಗಿ ಯಾರಾದರೂ ಅಳುವ ತನಕ ಯಾರೂ ಶಹೀದರಿಗಾಗಿ ಅಳಬಾರದು ಎಂದು ಹೇಳಿದರು. ಏಕೆಂದರೆ ಮದೀನದಲ್ಲಿ ಹಂಝರಿಗಾಗಿ(ರ) ಅಳುವವರು ಯಾರೂ ಇಲ್ಲವೆಂದು ಹಝ್ರತ್ ಪೈಗಂಬರ್(ಸ) ಹೇಳಿದ್ದರು. ಇದಾಗಿತ್ತು ಅವರಿಗೆ ಹಝ್ರತ್ ಪೈಗಂಬರರೊಂದಿಗೆ(ಸ) ಇದ್ದ ಪ್ರೇಮ. ಹಝ್ರತ್ ಮುಆಧ್ ಬಿನ್ ಜಬಲ್‌ರಿಗೆ(ರ) ಹಝ್ರತ್ ಪೈಗಂಬರರೊಂದಿಗೆ(ಸ) ಇದ್ದ ಪ್ರೀತಿ ಮತ್ತು ನಿಷ್ಠೆಯ ಅಂದಾಜು ಇದರಿಂದ ಆಗುತ್ತದೆ. ಹಝ್ರತ್ ಹಂಝರ(ರ) ಮರಣದಿಂದ ಹಝ್ರತ್ ಪೈಗಂಬರರಿಗೆ(ಸ) ದುಃಖವಾಗಿತ್ತು ಎಂಬುವುದರ ಬಗ್ಗೆ ಅವರು ಚಿಂತಿತರಾಗಿದ್ದರು. ವಿಲಾಪಿಸುವುದು ಮತ್ತು ಶೋಕಾಚರಣೆ ನಡೆಸುವುದು ನಿಷಿದ್ಧವಾಗಿದ್ದರೂ ಇಲ್ಲಿ ಹಝ್ರತ್ ಪೈಗಂಬರ್(ಸ) ಸ್ವಲ್ಪ ಸಮಯಕ್ಕೆ ಅನುಮತಿ ನೀಡಿದ್ದರು. ಅಥವಾ ಜನರು ಶಹೀದಾದ ಹಲವರ ಬಗ್ಗೆ ವಿಕಾರಭರಿತರಾಗಿ ಕಂಡಾಗ, ಯಾರಾದರೂ ಹಝ್ರತ್ ಹಂಝರಿಗಾಗಿಯೂ ವಿಕಾರಗೊಳ್ಳುವವರು ಇದ್ದಿದ್ದರೆ ಎಷ್ಟು ಚೆನ್ನ ಎಂದು ತಮ್ಮ ದುಃಖವನ್ನು ಪ್ರಕಟಿಸಿದ್ದರು. ಹೇಗಿದ್ದರೂ ಸಾಮಾನ್ಯವಾಗಿ ಶೋಕಾಚರಣೆ ನಡೆಸುವುದು ಇಸ್ಲಾಮಿನಲ್ಲಿ ನಿಷಿದ್ಧಮಾಡಲಾದ ಸಂಗತಿಯಾಗಿದೆ. ಹಝ್ರತ್ ಪೈಗಂಬರ್(ಸ) ಸ್ವತಃ ಅದನ್ನು ತಡೆದಿದ್ದರು.

ಮಕ್ಕಾ ವಿಜಯದ ನಂತರ ಹಝ್ರತ್ ಪೈಗಂಬರ್(ಸ) ಹುನೈನಿನ ಕಡೆಗೆ ಹೋದರು. ಹುನೈನ್ ಎಂಬುದು ಮಕ್ಕದ ಪಶ್ಚಿಮದ ಎಡೆಬದಿಯಲ್ಲಿ ತಾಯಿಫಿನ ಸಮೀಪವಿರುವ ಕಣಿವೆಯಾಗಿದೆ. ಹೀಗೆ ಮಕ್ಕಾ ವಿಜಯದ ನಂತರ ಹಝ್ರತ್ ಪೈಗಂಬರ್(ಸ) ಹುನೈನಿನ ಕಡೆಗೆ ಹೋಗಿದ್ದರು. ಆಗ ಪೈಗಂಬರರ ಅನುಪಸ್ಥಿತಿಯಲ್ಲಿ ಮಕ್ಕದ ಜನರಿಗೆ ದೀನನ್ನು ಕಲಿಸಲು ಮತ್ತು ಪವಿತ್ರ ಖುರ್‌ಆನ್ ಕಲಿಸಲು ಹಝ್ರತ್ ಮುಆಧ್ ಬಿನ್ ಜಬಲ್‌ರನ್ನು(ರ) ಹಝ್ರತ್ ಪೈಗಂಬರ್(ಸ) ಮಕ್ಕದಲ್ಲಿ ಬಿಟ್ಟುಹೋಗಿದ್ದರು. (ಅತ್ತಬಖಾತುಲ್ ಕುಬ್ರ, ಸಂಪುಟ-2, ಪುಟ-256, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1990) (ಫರ್‌ಹಂಗ್ ಸೀರತ್, ಪುಟ-109, ಝುವಾರ ಅಕಾಡಮಿ ಪಬ್ಲಿಕೇಶನ್ಸ್)

ಹಝ್ರತ್ ಮುಆಧ್(ರ) ತಬೂಕ್ ಯುದ್ಧದಲ್ಲಿ ಪೂರ್ಣರೂಪದಲ್ಲಿ ಭಾಗವಹಿಸಿದ್ದರು. ಮದೀನದಲ್ಲೇ ಉಳಿದಿದ್ದ ಹಝ್ರತ್ ಕಅಬ್ ಬಿನ್ ಮಾಲಿಕ್‌ರ(ರ) ಬಗ್ಗೆ ಹಝ್ರತ್ ಪೈಗಂಬರ್(ಸ) ಕೇಳಿದಾಗ, ಬನೂ ಸಲ್ಮಾದ ಒಬ್ಬ ವ್ಯಕ್ತಿ ಹಝ್ರತ್ ಪೈಗಂಬರರ(ಸ) ಮುಂದೆ ಅವರ ಬಗ್ಗೆ ಕೆಟ್ಟದಾಗಿ ಹೇಳಿದರು. ಆಗ ಆ ವ್ಯಕ್ತಿಯನ್ನು ಗದರಿಸಿ ಹಝ್ರತ್ ಮುಆಧ್ ಬಿನ್ ಜಬಲ್(ರ) ಹೀಗೆ ಹೇಳಿದರು: 'ಯಾ ರಸೂಲಲ್ಲಾಹ್, ನಾವಂತು ಅವರಲ್ಲಿ ಒಳಿತನ್ನು ಮಾತ್ರವೇ ಕಂಡಿರುವೆವು. ಯಾವುದೇ ಕೆಡುಕನ್ನು ಕಂಡಿಲ್ಲ.' (ಸಹಿಹ್ ಬುಖಾರಿ, ಕಿತಾಬುಲ್ ಮಗಾಝಿ, ಹದೀಸ್-4418)

ಇದಾಗಿದೆ ಉನ್ನತ ಸ್ವಭಾವಗುಣ. ಹಿಂದಿನಿಂದ ಅಥವಾ ವ್ಯಕ್ತಿಯ ಅನುಪಸ್ಥಿತಿಯಲ್ಲಿ ಯಾರ ಬಗ್ಗೆಯೂ ಕೆಟ್ಟದಾಗಿ ಹೇಳಬಾರದು.

ಹಝ್ರತ್ ಅನಸ್(ರ) ಹೇಳಿದ್ದಾಗಿ ನಾನು ಕೇಳಿದ್ದೇನೆ ಎಂದು ಖತಾದ ಹೀಗೆ ಹೇಳುತ್ತಾರೆ: ಹಝ್ರತ್ ಪೈಗಂಬರರ(ಸ) ಕಾಲದಲ್ಲಿ ನಾಲ್ಕು ವ್ಯಕ್ತಿಗಳು ಪವಿತ್ರ ಖುರ್‌ಆನನ್ನು ಸಂಕಲಿಸಿದ್ದರು. ಇವರೆಲ್ಲರೂ ಅನ್ಸಾರಿಗಳಾಗಿದ್ದರು. ಅವರ ಹೆಸರುಗಳು ಹೀಗಿವೆ - ಹಝ್ರತ್ ಮುಆಝ್ ಬಿನ್ ಜಬಲ್(ರ), ಹಝ್ರತ್ ಉಬಯ್ಯ್ ಬಿನ್ ಕಅಬ್(ರ), ಹಝ್ರತ್ ಝೈದ್ ಬಿನ್ ಸಾಬಿತ್(ರ) ಮತ್ತು ಹಝ್ರತ್ ಅಬೂಝೈದ್(ರ). ಹಝ್ರತ್ ಅಬೂಝೈದ್(ರ) ಹಝ್ರತ್ ಅನಸ್‌ರ(ಸ) ಚಿಕ್ಕಪ್ಪರಾಗಿದ್ದರು. (ಸಹೀಹ್ ಮುಸ್ಲಿಮ್, ಕಿತಾಬ್ ಫಝಾಇಲುಸ್ಸಹಾಬ, ಹದೀಸ್-2465)

ಹಝ್ರತ್ ಅಬ್ದುಲ್ಲಾಹ್ ಬಿನ್ ಅಮ್ರ್‌ರಿಂದ(ರ) ಹೀಗೆ ವರದಿಯಾಗಿದೆ: ನಾನು ಹಝ್ರತ್ ಪೈಗಂಬರರು(ಸ) ಹೇಳಿದ್ದಾಗಿ ಕೇಳಿದ್ದೇನೆ: ಈ ನಾಲ್ಕು ಜನರಿಂದ ಪವಿತ್ರ ಖುರ್‌ಆನ್ ಕಲಿಯಿರಿ. ಅವರ ಹೆಸರುಗಳಿ ಹೀಗಿವೆ: ಅಬ್ದುಲ್ಲಾಹ್ ಬಿನ್ ಮಸ್‌ಊದ್(ರ), ಅಬೂಹುದೈಫರ ಗುಲಾಮರಾದ ಸಾಲಿಮ್(ರ), ಉಬಯ್ಯ್ ಬಿನ್ ಕಅ್‌ಬ್(ರ) ಮತ್ತು ಮುಆಧ್ ಇಬ್ನು ಜಬಲ್‌ರಿಂದ(ರ). (ಸಹೀಹ್ ಬುಖಾರಿ, ಹದೀಸ್-3806)

ಇದು ಬುಖಾರಿಯ ವರದಿಯಾಗಿದೆ. ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ) ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ) ಪವಿತ್ರ ಖುರ್‌ಆನ್ ಕಲಿಸಲು ಅಧ್ಯಾಪಕರ ಒಂದು ಸಂಘವನ್ನು ನಿಶ್ಚಯಿಸಿದ್ದರು. ಅವರು ಪೂರ್ತಿ ಪವಿತ್ರ ಖುರ್‌ಆನನ್ನು ಕಂಠಪಾಠಮಾಡಿ ಮುಂದೆ ಜನರಿಗೆ ಕಲಿಸುತ್ತಿದ್ದರು. ಹಝ್ರತ್ ಪೈಗಂಬರರಿಂದ(ಸ) ಪವಿತ್ರ ಖುರ್‌ಆನನ್ನು ಕಲಿತುಕೊಂಡು ಇತರರಿಗೆ ಕಲಿಸುವುದು ನಾಲ್ಕು ಶ್ರೇಷ್ಠ ಅಧ್ಯಾಪಕರನ್ನು ಒಳಗೊಂಡ ಈ ಸಂಘದ ಕೆಲಸವಾಗಿತ್ತು. ಎಂದರೆ ಇವರ ಕೆಳಗೆ ಹಲವು ಸಹಾಬಿಯರು ಇದ್ದರು. ಅವರು ಮುಂದೆ ಜನರಿಗೆ ಕಲಿಸುತ್ತಿದ್ದರು. ಈ ನಾಲ್ಕು ಶ್ರೇಷ್ಠ ಅಧ್ಯಾಪಕರ ಹೆಸರು ಈ ರೀತಿಯಿದೆ: ಅಬ್ದುಲ್ಲಾಹ್ ಬಿನ್ ಮಸ್‌ಊದ್(ರ), ಸಾಲಿಂ ಮೌಲಾ ಅಬೀ ಹುಝೈಫ(ರ), ಮುಆಧ್ ಬಿನ್ ಜಬಲ್(ರ), ಉಬಯ್ಯ್ ಬಿನ್ ಕಅ್‌ಬ್(ರ). ಇವರಲ್ಲಿ ಮೊದಲಿನ ಇಬ್ಬರು ವ್ಯಕ್ತಿಗಳು ಮುಹಾಜಿರ್‌ಗಳಾಗಿದ್ದರು. ನಂತರದ ಇಬ್ಬರು ವ್ಯಕ್ತಿಗಳು ಅನ್ಸಾರ್‌ಗಳಾಗಿದ್ದರು. ಅಬ್ದುಲ್ಲಾಹ್ ಬಿನ್ ಮಸ್‌ಊದ್(ರ) ಒಬ್ಬ ಕಾರ್ಮಿಕರಾಗಿದ್ದರು, ಸಾಲಿಮ್(ರ) ಸ್ವತಂತ್ರಗೊಂಡ ಒಬ್ಬ ಗುಲಾಮರಾಗಿದ್ದರು, ಮುಆಧ್ ಬಿನ್ ಜಬಲ್ ಮತ್ತು ಉಬಯ್ಯ್ ಬಿನ್ ಕಅಬ್ ಮದೀನದ ಸರದಾರರಲ್ಲಿ ಸೇರಿದವರಾಗಿದ್ದರು. ಹೀಗೆ ಹಝ್ರತ್ ಪೈಗಂಬರ್(ಸ) ಹಲವು ಗುಂಪುಗಳನ್ನು ದೃಷ್ಟಿಯಲ್ಲಿರಿಸಿಕೊಂಡು ಖಾರಿಗಳನ್ನು, ಪವಿತ್ರ ಖುರ್‌ಆನ್ ಓದಿಸುವ ಅಧ್ಯಾಪಕರನ್ನು ನಿಶ್ಚಯಿಸಿದ್ದರು. ಹಝ್ರತ್ ಪೈಗಂಬರ್(ಸ) ಹೇಳಿದ್ದಾಗಿ ಹದೀಸಿನಲ್ಲಿ ಹೀಗೆ ಬಂದಿದೆ: **ಖುಧುಲ್ ಖುರ್‌ಆನ ಮಿನ್ ಅರ್‌ಬಅತಿ ಅಬ್ದುಲ್ಲಾಹ್ ಬಿನ್ ಮಸ್‌ಊದ್ ವ ಸಾಲಿಮ್ ವ ಮುಆಧ್ ಇಬ್ನು ಜಬಲ್ ವ ಉಬಯ್ಯ್ ಬಿನ್ ಕಅ್‌ಬ್**. ಪವಿತ್ರ ಖುರ್‌ಆನ್ ಕಲಿಯಲು ಇಚ್ಛಿಸುವವರು ಈ ನಾಲ್ಕು ಜನರಿಂದ ಪವಿತ್ರ ಖುರ್‌ಆನ್ ಕಲಿಯಲಿ. ಅಬ್ದುಲ್ಲಾಹ್ ಬಿನ್ ಮಸ್‌ಊದ್(ರ), ಸಾಲಿಮ್(ರ), ಮುಆಧ್ ಇಬ್ನು ಜಬಲ್(ರ) ಮತ್ತು ಉಬಯ್ಯ್ ಬಿನ್ ಕಅ್‌ಬ್(ರ).

ಸಂಪೂರ್ಣ ಪವಿತ್ರ ಖುರ್‌ಆನನ್ನು ಈ ನಾಲ್ಕು ವ್ಯಕ್ತಿಗಳು ಹಝ್ರತ್ ಪೈಗಂಬರರಿಂದ(ಸ) ಕಲಿತ್ತಿದ್ದರು. ಇವರು ಪೈಗಂಬರಿಗೆ(ಸ) ಅವರು ಕಲಿತ ಭಾಗವನ್ನು ಹೇಳಿಕೊಂಡು ಅದನ್ನು ಸರಿಪಡಿಸುತ್ತಿದ್ದರು. ಇವರಲ್ಲದೆ ಪೈಗಂಬರ್‌ರಿಂದ(ಸ) ಇತರ ಹಲವು ಸಹಾಬಿಯರು ಸಹ ನೇರವಾಗಿ ಪವಿತ್ರ ಖುರ್‌ಆನಿನ ಹಲವು ಭಾಗಗಳನ್ನು ಕಲಿಯುತ್ತಿದ್ದರು. ಒಂದು ವರದಿಯಲ್ಲಿ ಹೀಗೆ ಬಂದಿದೆ: ಅಬ್ದುಲ್ಲಾಹ್ ಬಿನ್ ಮಸ್‌ಊದ್(ರ) ಒಂದು ಪದವನ್ನು ಬೇರೊಂದು ರೀತಿಯಲ್ಲಿ ಓದಿದರು. ಆಗ ಹಝ್ರತ್ ಉಮರ್(ರ) ಅದನ್ನು ತಡೆದರು. ಹಾಗಲ್ಲ, ಹೀಗೆ ಓದಬೇಕೆಂದು ಹೇಳಿದರು. ಆಗ ಹಝ್ರತ್ ಅಬ್ದುಲ್ಲಾಹ್ ಬಿನ್ ಮಸ್‌ಊದ್(ರ) ಹೇಳಿದರು: ಅಲ್ಲ, ನನಗೆ ಹಝ್ರತ್ ಪೈಗಂಬರ್(ಸ) ಹೀಗೆಯೇ ಕಲಿಸಿದ್ದರು. ಹಝ್ರತ್ ಉಮರ್(ರ) ಅವರನ್ನು ಹಿಡಿದುಕೊಂಡು ಹಝ್ರತ್ ಪೈಗಂಬರರ(ಸ) ಬಳಿಗೆ ಕೊಂಡುಹೋದರು. ಇವರು ಪವಿತ್ರ ಖುರ್‌ಆನನ್ನು ತಪ್ಪಾಗಿ ಓದುತ್ತಿದ್ದಾರೆ ಎಂದು ಹೇಳಿದರು. ಹಝ್ರತ್ ಪೈಗಂಬರ್(ಸ) ಹೇಳಿದರು: ಹೇ ಅಬ್ದುಲ್ಲಾಹ್ ಬಿನ್ ಮಸ್‌ಊದ್, ಓದಿ ಹೇಳು. ಅವರು ಪಾರಾಯಣ ಮಾಡಿದಾಗ, ಇದು ಸರಿಯಾಗಿಯೇ ಇದೆ ಎಂದು ಹಝ್ರತ್ ಪೈಗಂಬರ್(ಸ) ಹೇಳಿದರು. ಹಝ್ರತ್ ಉಮರ್(ರ) ಹೇಳಿದರು: ಯಾ ರಸೂಲಲ್ಲಾಹ್, ನನಗೆ ನೀವು ಈ ಪದವನ್ನು ಬೇರೊಂದು ರೀತಿಯಲ್ಲಿ ಕಲಿಸಿದ್ದೀರಿ. ಅದು ಸಹ ಸರಿಯೇ ಆಗಿದೆ ಎಂದು ಹಝ್ರತ್ ಪೈಗಂಬರ್(ಸ) ಹೇಳಿದರು. ಇದರಿಂದ ತಿಳಿದುಬರುವುದೇನೆಂದರೆ, ಕೇವಲ ಮೇಲೆ ಉಲ್ಲೇಖಿಸಿದ ನಾಲ್ಕು ಸಹಾಬಿಯರು ಹಝ್ರತ್

ಪೈಗಂಬರರಿಂದ(ಸ) ಪವಿತ್ರ ಕಲಿಯುತ್ತಿರಲಿಲ್ಲ. ಬದಲಾಗಿ ಇತರ ಜನರು ಸಹ ಕಲಿಯುತ್ತಿದ್ದರು. 'ನನ್ನನ್ನು ನೀವು ಹೀಗೆ ಕಲಿಸಿದ್ದೀರಿ' ಎಂಬ ವಾಕ್ಯದಿಂದ, ಹಝ್ರತ್ ಉಮರ್(ರ) ಸಹ ಹಝ್ರತ್ ಪೈಗಂಬರರಿಂದ(ಸ) ಪವಿತ್ರ ಖುರ್‌ಆನ್ ಕಲಿಯುತ್ತಿದ್ದರು ಎಂದು ತಿಳಿದುಬರುತ್ತದೆ. (ದೀಬಾಚ' ತಫ್‌ಸೀರುಲ್ ಖುರಾನ್, ಅನ್ವಾರುಲ್ ಉಲೂಮ್, ಸಂಪುಟ–20, ಪುಟ–427–428)

ಹಝ್ರತ್ ಅನಸ್ ಬಿನ್ ಮಾಲಿಕ್ ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ) ಹೇಳಿದರು: ನನ್ನ ಉಮ್ಮತ್ತಿನ ಅತ್ಯಂತ ಕರುಣಾಳು ವ್ಯಕ್ತಿ ಹಝ್ರತ್ ಅಬೂಬಕ್ಕರ್ ಆಗಿದ್ದಾರೆ. ಅಲ್ಲಾಹನ ದೀನಿನ ವಿಷಯದಲ್ಲಿ ಅತ್ಯಂತ ಕಠಿಣ, ಹಝ್ರತ್ ಉಮರ್(ರ) ಆಗಿರುವರು. ಎಂದರೆ ಅವರು ಇಸ್ಲಾಮಿನ ತತ್ವಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದರು, ಲಜ್ಜೆಯ ವಿಷಯದಲ್ಲಿ ಅತ್ಯಂತ ಪರಿಪೂರ್ಣತೆ ಹೊಂದಿದ್ದವರು ಹಝ್ರತ್ ಉಸ್ಮಾನ್ ಆಗಿರುವರು. ಎಂದರೆ ಲಜ್ಜೆಯ ಉನ್ನತ ಮಟ್ಟವನ್ನು ಅವರು ತಲುಪಿದ್ದರು. ಅತ್ಯಂತ ಉತ್ತಮ ತೀರ್ಮಾನಗಳನ್ನು ಮಾಡುವವರು ಹಝ್ರತ್ ಅಲಿ ಬಿನ್ ಅಬೀ ತಾಲಿಬ್ ಆಗಿರುವರು. ಪವಿತ್ರ ಖುರ್‌ಆನಿನ ಬಗ್ಗೆ ಅತ್ಯಂತ ಹೆಚ್ಚಾಗಿ ತಿಳಿದ ವ್ಯಕ್ತಿ ಹಝ್ರತ್ ಉಬಯ್ಯ್ ಬಿನ್ ಕಅಬ್ ಆಗಿರುವರು. ಹರಾಂ ಮತ್ತು ಹಲಾಲಿನ ಬಗ್ಗೆ ಅತ್ಯಂತ ಹೆಚ್ಚು ಅರಿತವರು ಹಝ್ರತ್ ಮುಆಧ್ ಬಿನ್ ಜಬಲ್ ಆಗಿರುವರು, ಕಡ್ಡಾಯ ಸಂಗತಿಗಳ ಬಗ್ಗೆ ಅತ್ಯಂತ ಹೆಚ್ಚು ತಿಳಿದವರು ಹಝ್ರತ್ ಝೈದ್ ಬಿನ್ ಸಾಬಿತ್ ಆಗಿರುವರು ಮತ್ತು ಕೇಳಿರಿ, ಪ್ರತಿಯೊಂದು ಉಮ್ಮತಿಗೆ ಒಬ್ಬ ಅಮೀನ್ ಇರುತ್ತಾರೆ, ನನ್ನ ಉಮ್ಮತ್ತಿನ ಅಮೀನ್ ಹಝ್ರತ್ ಅಬೂ ಉಬೈದ ಬಿನ್ ಜರಾಹ್ ಆಗಿರುವರು. ಹೆಚ್ಚು ಕಮ್ಮಿ ಇದೇ ರೀತಿಯಲ್ಲಿ ಈ ವರದಿ ಮುಂಚೆ ಸಹ ಹೇಳಲಾಗಿತ್ತು. (ಸುನನ್ ಇಬ್ನೆ ಮಾಜ, ಬಾಬ್ ಫಝಾಎಲ್ ಖಬಾಬ್, ಹದೀಸ್–154)

ಹಝ್ರತ್ ಅಬೂಹುರೈರ(ರ) ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ) ಹೇಳಿದರು: ಅಬೂಬಕ್ಕರ್ ಎಂತಹ ಉತ್ತಮ ವ್ಯಕ್ತಿಯಾಗಿರುವರು, ಉಮರ್ ಎಂತಹ ಉತ್ತಮ ವ್ಯಕ್ತಿಯಾಗಿರುವರು, ಅಬೂ ಉಬೈದ ಬಿನ್ ಜರಾಹ್ ಎಂತಹ ಉತ್ತಮ ವ್ಯಕ್ತಿಯಾಗಿರುವರು, ಉಸೈದ್ ಬಿನ್ ಹಝೀರ್ ಎಂತಹ ಉತ್ತಮ ವ್ಯಕ್ತಿಯಾಗಿರುವರು, ಸಾಬಿತ್ ಬಿನ್ ಖೈಸ್ ಬಿನ್ ಶುಮಾಸ್ ಎಂತಹ ಉತ್ತಮ ವ್ಯಕ್ತಿಯಾಗಿರುವರು, ಮುಆಧ್ ಬಿನ್ ಜಬಲ್ ಎಂತಹ ಉತ್ತಮ ವ್ಯಕ್ತಿಯಾಗಿರುವರು, ಮುಆಧ್ ಬಿನ್ ಅಮ್ರ್ ಬಿನ್ ಜಮೂಹ್ ಎಂತಹ ಉತ್ತಮ ವ್ಯಕ್ತಿಯಾಗಿರುವರು. ಇದು ಮುಸ್ನದ್ ಅಹ್ಮದ್ ಬಿನ್ ಹಂಬಲ್‌ರ ವರದಿಯಾಗಿದೆ. (ಮುಸ್ನದ್ ಅಹ್ಮದ್ ಬಿನ್ ಹಂಬಲ್, ಸಂಪುಟ–3, ಪುಟ–502, ಹದೀಸ್–9421, ಆಲಿಮುಲ್ ಕಿತಾಬ್ ಬೈರೂತ್ 1998)

ಹಝ್ರತ್ ಮುಆಧ್ ಬಿನ್ ಜಬಲ್(ರ) ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ) ಒಂದು ದಿನ ಹಝ್ರತ್ ಮುಆಧ್‌ರ(ರ) ಕೈಯನ್ನು ಹಿಡಿದುಕೊಂಡು ಹೇಳಿದರು: ಹೇ ಮುಆಧ್(ರ) ನಿಶ್ಚಯವಾಗಿಯೂ ನಾನು ನಿನ್ನನ್ನು ಪ್ರೀತಿಸುತ್ತೇನೆ. ನಾನು ಹೇಳಿದೆ: ಯಾ ರಸೂಲಲ್ಲಾಹ್ ನನ್ನ ತಂದೆತಾಯಿ ನಿಮಗೆ ಅರ್ಪಣವಾಗಲಿ. ನಾನು ಸಹ ನಿಮ್ಮನ್ನು ಪ್ರೀತಿಸುತ್ತೇನೆ. ಹಝ್ರತ್ ಪೈಗಂಬರ್(ಸ) ಹೇಳಿದರು: ಹೇ ಮುಆಧ್ ನಾನು ನಿನ್ನನ್ನು ತಾಕೀತು ಮಾಡುತ್ತೇನೆ. ನೀನು ಪ್ರತಿ ನಮಾಝಿನ ನಂತರ ಈ ಧಿಕ್ರ್ ಮಾಡು. ಇದನ್ನು ಎಂದೂ ಮಾಡದೇ ಇರಬೇಡ: **ಅಲ್ಲಾಹುಮ್ಮ ಅಇನ್ನಿ ಅಲಾ ಧಿಕ್ರಿಕ, ವ ಶುಕ್ರಿಕ ವ ಹುಸ್‌ನಿ ಇಬಾದತಿಕ.** ಎಂದರೆ, ಹೇ ನನ್ನ ಅಲ್ಲಾಹ್, ನಿನ್ನನ್ನು ಸ್ಮರಿಸಲು, ನಿನಗೆ ಕೃತಜ್ಞತೆ ಅರ್ಪಿಸಲು ಮತ್ತು ನಿನ್ನನ್ನು ಉತ್ತಮ ರೀತಿಯಲ್ಲಿ ಆರಾಧಿಸಲು ನನಗೆ ನೀನು ನೆರವು ನೀಡು. (ಮುಸ್ನದ್ ಅಹ್ಮದ್ ಬಿನ್ ಹಂಬಲ್, ಸಂಪುಟ–7, ಪುಟ–380, ಹದೀಸ್–22470, ಆಲಿಮುಲ್ ಕಿತಾಬ್ ಬೈರೂತ್ ಲೆಬನಾನ್ 1998)

ಹಝ್ರತ್ ಮುಆಧ್ ಬಿನ್ ಜಬಲ್(ರ) ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ) ಹೇಳಿದರು: ಸ್ವರ್ಗದ ಬಾಗಿಲುಗಳಲ್ಲಿ ಒಂದು ಬಾಗಿಲ ಬಗ್ಗೆ ನಿಮ್ಮೊಡನೆ ಹೇಳಲೇ? ಏಕಿಲ್ಲವೆಂದು ನಾನು ಹೇಳಿದೆ. ಹಝ್ರತ್ ಪೈಗಂಬರ್(ಸ) ಹೇಳಿದರು: **ಲಾ ಹೌಲ ವಲಾ ಖುವ್ವತ ಇಲ್ಲಾ ಬಿಲ್ಲಾಹ್** ಓದಿರಿ. (ಎಂದರೆ, ಯಾವುದೇ ರೀತಿಯ ಪರಮಾಧಿಕಾರ ಅಥವಾ ಶಕ್ತಿ ಅಲ್ಲಾಹನಿಗಲ್ಲದೆ ಬೇರೆ ಯಾರಿಗೂ ಇಲ್ಲ.)(ಮುಸ್ನದ್ ಅಹ್ಮದ್ ಬಿನ್ ಹಂಬಲ್, ಸಂಪುಟ–7, ಪುಟ–374, ಹದೀಸ್–22450, ಆಲಿಮುಲ್ ಕಿತಾಬ್ ಬೈರೂತ್ ಲೆಬನಾನ್ 1998)

ಹಝ್ರತ್ ಮುಆಧ್(ರ) ವರದಿ ಮಾಡುತ್ತಾರೆ: ನಾನು ಹಝ್ರತ್ ಪೈಗಂಬರರೊಡನೆ(ಸ) ಶ್ರೇಷ್ಠವಾದ ವಿಶ್ವಾಸದ ಬಗ್ಗೆ ಕೇಳಿದೆ. ಹಝ್ರತ್ ಪೈಗಂಬರ್(ಸ) ಹೇಳಿದರು: ನೀನು ಅಲ್ಲಾಹನಿಗಾಗಿ ಇತರರನ್ನು ಪ್ರೀತಿಸು ಮತ್ತು ಅಲ್ಲಾಹನಿಗಾಗಿ ಮಾತ್ರ ಇತರರನ್ನು ದ್ವೇಷಿಸು. ನೀನು ನಿನ್ನ ನಾಲಗೆಯನ್ನು ಅಲ್ಲಾಹನ ಸ್ಮರಣೆಯಲ್ಲಿ ನಿರತವಾಗಿರಿಸು. ಇದೇ ಶ್ರೇಷ್ಠವಾದ ಈಮಾನ್ ಆಗಿದೆ. ನಾನು ಕೇಳಿದೆ: ಇದಲ್ಲದೆ ಬೇರೇನಿದೆ?. ಹಝ್ರತ್ ಪೈಗಂಬರ್(ಸ) ಹೇಳಿದರು: ನೀನು ನಿನಗೆ ಇಷ್ಟಪಡುವುದನ್ನೇ ಇತರರಿಗಾಗಿ ಇಷ್ಟಪಡು ಮತ್ತು ನಿನಗೆ ಇಷ್ಟಪಡದ ಕಾರ್ಯವನ್ನು ಇತರರ ಪರವಾಗಿಯೂ ಇಷ್ಟಪಡದಿರು. (ಮುಸ್ನದ್ ಅಹ್ಮದ್ ಬಿನ್ ಹಂಬಲ್, ಸಂಪುಟ–7, ಪುಟ–385, ಹದೀಸ್–22481, ಆಲಿಮುಲ್ ಕಿತಾಬ್ ಬೈರೂತ್ ಲೆಬನಾನ್ 1998)

ಹಝ್ರತ್ ಜಾಬಿರ್(ರ) ವರದಿ ಮಾಡುತ್ತಾರೆ: ಹಝ್ರತ್ ಮುಆಧ್(ರ) ಹಝ್ರತ್ ಪೈಗಂಬರರೊಂದಿಗೆ(ಸ) ನಮಾಝ್ ನಿರ್ವಹಿಸುತ್ತಿದ್ದರು. ಅನಂತರ ಅವರು ತನ್ನ ಮೊಹಲ್ಲಗೆ ಹೋಗಿ ಜನರಿಗಾಗಿ ನಮಾಝಿನ ಇಮಾಮತ್ ವಹಿಸುತ್ತಿದ್ದರು. (ಸಹೀಹ್ ಬುಖಾರಿ, ಕಿತಾಬುಲ್ ಅಝಾನ್, ಹದೀಶ್–711)

ಮೊದಲು ಮಸ್ಜಿದ್ ನಬವಿಗೆ ಬಂದು ನಮಾಝ್ ನಿರ್ವಹಿಸುತ್ತಿದ್ದರು. ಅನಂತರ ತನ್ನ ಮೊಹಲ್ಲಗೆ ಹೋಗಿ ಜನರಿಗಾಗಿ ನಮಾಝಿನ ಇಮಾಮತ್ ವಹಿಸುತ್ತಿದ್ದರು. ಇದು ಬುಖಾರಿಯ ವರದಿಯಾಗಿದೆ. ಹಝ್ರತ್ ಜಾಬಿರ್(ರ) ವರದಿ ಮಾಡುತ್ತಾರೆ: ಹಝ್ರತ್ ಮುಆಧ್(ರ) ಹಝ್ರತ್ ಪೈಗಂಬರರೊಂದಿಗೆ(ಸ) ನಮಾಝ್ ನಿರ್ವಹಿಸುತ್ತಿದ್ದರು. ಅನಂತರ ಅವರು ತನ್ನ ಮೊಹಲ್ಲಗೆ ಹೋಗಿ ಜನರಿಗಾಗಿ ನಮಾಝಿನ ಇಮಾಮತ್ ವಹಿಸುತ್ತಿದ್ದರು. ಒಂದು ರಾತ್ರಿ ಅವರು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಇಶಾ ನಮಾಝ್ ನಿರ್ವಹಿಸಿದರು. ಅನಂತರ ತನ್ನ ಜನರ ಬಳಿಗೆ ಹೋಗಿ ಅವರ ಇಮಾಮತ್ ವಹಿಸಿದಾಗ, ಸೂರಃ ಬಖರಃ ಓದಲು ಶುರುಮಾಡಿದರು. ಆಗ ಒಬ್ಬ ವ್ಯಕ್ತಿ ಜಮಾಅತಾದ ನಮಾಝಿನಿಂದ ಬೇರ್ಪಟ್ಟು ಒಬ್ಬಂಟಿಯಾಗಿ ನಮಾಝ್ ನಿರ್ವಹಿಸಿ ಹೊರಟಹೋದರು. ಇದನ್ನು ನೋಡಿದ ಜನರು ಹೇಳಿದರು: ಎಲೈ ಮನುಷ್ಯಾ, ನೀನು ಕಪಟವಿಶ್ವಾಸಿ ಆದೆಯಾ? ನೀನು ಜಮಾಅತಾದ ನಮಾಝ್ ಬಿಟ್ಟು ಒಬ್ಬಂಟಿಯಾಗಿ ನಮಾಝ್ ನಿರ್ವಹಿಸಿದ್ದಿಯಾ. ಅದಕ್ಕೆ ಉತ್ತರವಾಗಿ ಆ ವ್ಯಕ್ತಿ ಹೇಳಿದರು: ಅಲ್ಲಾಹನಾಣೆ, ನಾನು ಕಪಟವಿಶ್ವಾಸಿಯಲ್ಲ. ನಾನು ಹಝ್ರತ್ ಪೈಗಂಬರರ(ಸ) ಬಳಿಗೆ ಹೋಗುವೆನು ಮತ್ತು ಖಂಡಿತವಾಗಿಯೂ ನಾನು ಹೀಗೆ ಮಾಡಿದ್ದೆ ಎಂದು ಅವರೊಡನೆ ಹೇಳುವೆನು. ನಾನು ಮುನಾಫಿಕ್ ಆಗಿದ್ದರೆ, ನಾನು ಅಡಗಿ ಕುಳಿತುಕೊಳ್ಳುತ್ತಿದ್ದೆ. ಆದರೆ ನಾನು ಇದನ್ನು ಹೋಗಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಡನೆ ಹೇಳುವೆನು. ಹೀಗೆ, ಆ ವ್ಯಕ್ತಿ ಹಝ್ರತ್ ಪೈಗಂಬರರ(ಸ) ಬಳಿಗೆ ಬಂದು ಹೇಳಿದರು: ಯಾ ರಸೂಲಲ್ಲಾಹ್, ನಾವು ನೀರು ತರುವ ಒಂಟೆಗಳನ್ನು ಇಟ್ಟಿದ್ದೇವೆ. ಎಂದರೆ, ಒಂಟೆಗಳ ಮೇಲೆ ನೀರನ್ನು ಇಟ್ಟುಕೊಂಡು ಒಂದು ಜಾಗದಿಂದ ಮತ್ತೊಂದು ಜಾಗಕ್ಕೆ ಕೊಂಡುಹೋಗುತ್ತೇವೆ. ಜನರ ಮನೆಗಳಿಗೆ ನೀರನ್ನು ತಲುಪಿಸುತ್ತೇವೆ. ಆದ್ದರಿಂದ ದಿನರಾತ್ರಿ ಕೆಲಸಮಾಡುತ್ತೇವೆ. ಹಝ್ರತ್ ಮುಆಧ್(ರ) ನಿಮ್ಮೊಡನೆ ಇಶಾ ನಮಾಝ್ ನಿರ್ವಹಿಸಿದ್ದರು. ಅನಂತರ ನಮ್ಮ ಮೊಹಲ್ಲಗೆ ಬಂದು ನಮಾಝಿನ ಇಮಾಮತ್ ವಹಿಸಿದ್ದರು. ಅದರಲ್ಲಿ ಸೂರಃ ಬಖರ ಓದಲು ಶುರುಮಾಡಿದ್ದರು. ಹಝ್ರತ್ ಪೈಗಂಬರ್(ಸ) ಹಝ್ರತ್ ಮುಆಧ್‌ರ(ರ) ಕಡೆಗೆ ತಿರುಗಿಕೊಂಡು ಅವರನ್ನು ಸಂಬೋಧಿಸಿ ಹೇಳಿದರು: ಹೇ ಮುಆಧ್ ನೀನು ಜನರನ್ನು ಪರೀಕ್ಷೆಗೆ ಒಳಪಡಿಸುತ್ತಿದ್ದಿಯಾ?, ಜನರನ್ನು ಯಾಕೆ ತೊಂದರೆಗೆ ಸಿಲುಕಿಸುತ್ತಿಯಾ? ಇವುಗಳನ್ನು ನಮಾಝಿನಲ್ಲಿ ಓದು, ಇವುಗಳನ್ನು ನಮಾಝಿನಲ್ಲಿ ಓದು ಎಂದು ಎರಡು ಸಲ ಹೇಳಿದರು. ಹಝ್ರತ್ ಪೈಗಂಬರ್(ಸ) ಅವರೊಡನೆ **ವಶ್ಶಮ್ಸಿ ವಝುಹಾಹಾ, ಸಬ್ಬಿಹಿಸ್ಮ ರಬ್ಬಿಕಲ್ ಅಅ್‌ಲಾ, ವಝ್ಝುಹಾ ವಲ್ಲೈಲಿ ಇಧಾ ಯಗ್‌ಶಾ,** ಮುಂತಾದ ಸೂರತ್ತುಗಳನ್ನು ಉದಾಹರಣೆಗೆ ಹೇಳಿಕೊಂಡು ಈ ರೀತಿಯ ಸೂರತುಗಳನ್ನು ಓದಲು ನಿರ್ದೇಶಿಸಿದರು. ಇದು ಸಹೀಹ್ ಮುಸ್ಲಿಮಿನ ವರದಿಯಾಗಿದೆ. (ಸಹೀಹ್ ಮುಸ್ಲಿಮ್, ಕಿತಾಬುಸ್ಸಲಾತ್, ಹದೀಸ್–465)

ಬುಖಾರಿಯಲ್ಲಿ ಒಂದು ವರದಿ ಹೀಗೆಯೂ ಇದೆ. ಹಝ್ರತ್ ಜಾಬಿರ್ ಬಿನ್ ಅಬ್ದುಲ್ಲಾಹ್ ಅನ್ಸಾರಿ ಹೇಳುತ್ತಾರೆ: ಒಬ್ಬ ವ್ಯಕ್ತಿ ನೀರನ್ನು ಹೊರುವ ಎರಡು ಒಂಟೆಗಳೊಂದಿಗೆ ಬರುತ್ತಿದ್ದರು. ರಾತ್ರಿ ಸಮಯವಾಗಿತ್ತು. ಅವರು ಹಝ್ರತ್ ಮುಆಧ್‌ರ(ರ) ನಮಾಝ್ ನಿರ್ವಹಿಸುವುದನ್ನು ಕಂಡರು. ಮಸೀದಿಯಲ್ಲಿ ನಮಾಝ್ ನಡೆಯುತ್ತಿತ್ತು. ಅವರು ನಮಾಝಿನ ಇಮಾಮತ್ ವಹಿಸುತ್ತಿದ್ದರು. ಆ ವ್ಯಕ್ತಿ ತನ್ನ ಒಂಟೆಗಳನ್ನು ಅಲ್ಲಿ ನಿಲ್ಲಿಸಿದರು. ಹಝ್ರತ್ ಮುಆಧ್‌ರ ಬಳಿಗೆ ನಮಾಝ್ ಮಾಡಲು ಹೋದರು. ಹಝ್ರತ್ ಮುಆಧ್(ರ) ನಮಾಝಿನಲ್ಲಿ ಸೂರಃ ಬಖರ ಅಥವಾ ಸೂರಃ ನಿಸಾ ಓದಲು ಶುರುಮಾಡಿದಾಗ, ಆ ವ್ಯಕ್ತಿ ನಮಾಝ್ ಉಪೇಕ್ಷಿಸಿ ಹೊರಟುಹೋದರು. ಹಝ್ರತ್ ಮುಆಧ್(ರ) ಇದನ್ನು ತಪ್ಪೆಂದು ಭಾವಿಸಿರುವರು ಎಂಬ ಸುದ್ದಿ ಆ ವ್ಯಕ್ತಿಗೆ ತಲುಪಿದಾಗ, ಆ ವ್ಯಕ್ತಿ ಹಝ್ರತ್ ಪೈಗಂಬರರ(ಸ) ಬಳಿಗೆ ಹೋದರು. ಅವರು ಹಝ್ರತ್ ಮುಆಧ್‌ರ(ರ) ಬಗ್ಗೆ ದೂರುಕೊಟ್ಟರು. ಹಝ್ರತ್ ಪೈಗಂಬರ್(ಸ) ಮೂರು ಬಾರಿ ಹೇಳಿದರು: ಹೇ ಮುಆಧ್, ನೀನು ಜನರನ್ನು ತುಂಬ ಪರೀಕ್ಷೆಗೆ

ಒಳಪಡಿಸುತ್ತಿದ್ದಿಯ.ಜನರನ್ನು ಯಾಕೆ ವಿಪತ್ತಿನಲ್ಲಿ ಸಿಲುಕಿಸುತ್ತಿಯಾ? ದೀರ್ಘವಾದ ಸೂರತ್ತುಗಳನ್ನು ಓದಿ ಜನರನ್ನು ತೊಂದರೆಗೆ ಏಕೆ ಹಾಕುತ್ತಿದ್ದಿಯಾ? **ವಶ್ಷಮ್ಸಿ ವಝುಹಾಹಾ, ಸಬ್ಬಿಹಿಸ್ಮ ರಬ್ಬಿಕಲ್ ಅಅ್‌ಲಾ, ವಝುಹ ವಲ್ಲೈಲಿ ಇದ್ಹಾ ಯಗ್‌ಶಾ** ಎಂಬೀ ಸೂರತ್ತುಗಳನ್ನು ಏಕೆ ಓದಿಲ್ಲ? ನಿನ್ನ ಹಿಂದೆ ವೃದ್ಧರು, ದುರ್ಬಲರು, ಕೆಲಸಮಾಡುವವರು ಸಹ ನಮಾಝ್ ನಿರ್ವಹಿಸುತ್ತಿರುತ್ತಾರೆ. ಇದು ಬುಖಾರಿಯ ವರದಿಯಾಗಿದೆ. (ಸಹೀಹ್ ಬುಖಾರಿ, ಕಿತಾಬುಲ್ ಅಝಾನ್, ಹದೀಸ್–705)

ನಮಾಝಿನಲ್ಲಿ ಸಣ್ಣ ಸೂರತುಗಳನ್ನು ಓದುವುದರ ಬಗ್ಗೆ ಹಝ್ರತ್ ಮುಆಧ್ ಬಿನ್ ಜಬಲ್‌ರಿಗೆ ಹಝ್ರತ್ ಪೈಗಂಬರರ(ಸ) ಉಪದೇಶದ ಬಗ್ಗೆ ಪ್ರಸ್ತಾಪಿಸುತ್ತಾ ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ) ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ) ಸಾಮಾನ್ಯವಾಗಿ ಸೂರತುಲ್ ಅಅ್‌ಲಾ, ಸೂರತುಲ್ ಗ್ಹಾಶಿಯ, ಸೂರಃ ಫಜ್ರ್ ಮತ್ತು ಇದೇ ರೀತಿಯ ಕೆಲವು ಇತರ ಸೂರತ್ತುಗಳನ್ನು ಫರ್ಝ್ ನಮಾಝಿನಲ್ಲಿ ಓದಲು ಹೆಚ್ಚು ಇಷ್ಟಪಡುತ್ತಿದ್ದರು. ನಿಸಾಇಯಲ್ಲಿ ಜಾಬಿರ್‌ರಿಂದ ಹೀಗೆ ವರದಿಯಾಗಿದೆ: ಹಝ್ರತ್ ಮುಆಧ್ ಬಿನ್ ಜಬಲ್ ಒಂದು ಸಲ ನಮಾಝಿನ ಇಮಾಮತ್ ವಹಿಸುತ್ತಿದ್ದರು. ಒಬ್ಬ ವ್ಯಕ್ತಿ ಹಿಂದಿನಿಂದ ಬಂದು ಆ ನಮಾಝಿನಲ್ಲಿ ಬಂದುಸೇರಿದರು. ಹಝ್ರತ್ ಜಾಬಿರ್ ದೀರ್ಘವಾಗಿ ನಮಾಝ್ ನಿರ್ವಹಿಸುತ್ತಿದ್ದರು. ಅವರು ಸೂರಃ ಆಲೆ ಇಮ್ರಾನ್ ಅಥವಾ ಸೂರಃ ನಿಸಾ ಓದಲು ಶುರುಮಾಡಿದ್ದರು ಎಂದು ಕೆಲವು ವರದಿಗಳಲ್ಲಿ ಇದೆ. ನಮಾಝ್ ದೀರ್ಘವಾದಾಗ, ಆ ವ್ಯಕ್ತಿ ತನ್ನ ಜಮಾಅತಾದ ನಮಾಝನ್ನು ಉಪೇಕ್ಷಿಸಿ, ಒಂದು ಮೂಲೆಯಲ್ಲಿ ಒಬ್ಬಂಟಿಯಾಗಿ ನಮಾಝ್ ಮಾಡಿ ಹೊರಟುಹೋದರು. ಜಮಾಅತಾದ ನಮಾಝಿನ ನಂತರ ಯಾರೋ ಒಬ್ಬ ಹಝ್ರತ್ ಮುಆಧ್‌ರೊಡನೆ ಈ ಘಟನೆಯನ್ನು ವಿವರಿಸಿದನು. ಹೀಗೆ ಹೇಳಿದನು: ನೀವು ನಮಾಝಿನ ಇಮಾಮತ್ ವಹಿಸುತ್ತಿದ್ದಾಗ, ಒಬ್ಬ ವ್ಯಕ್ತಿ ಬಂದಿದ್ದರು. ಅವರು ನಿಮ್ಮೊಂದಿಗೆ ನಮಾಝ್ ಶುರುಮಾಡಿದ್ದರು. ಆದರೆ ನೀವು ನಮಾಝನ್ನು ದೀರ್ಘಗೊಳಿಸಿದಾಗ, ಅವರು ಜಮಾಅತಾದ ನಮಾಝನ್ನು ಉಪೇಕ್ಷಿಸಿ ಒಂದು ಮೂಲೆಯಲ್ಲಿ ಒಬ್ಬಂಟಿಯಾಗಿ ನಮಾಝ್ ನಿರ್ವಹಿಸಿ ಹೊರಟುಹೋದರು. ಹಝ್ರತ್ ಮುಆಧ್ ಹೇಳಿದರು: ಆ ವ್ಯಕ್ತಿ ಕಪಟವಿಶ್ವಾಸಿಯಾಗಿರಬಹುದು. ಹಝ್ರತ್ ಮುಆಧ್ ಈ ಘಟನೆಯನ್ನು ಹಝ್ರತ್ ಪೈಗಂಬರರ(ಸ) ಮುಂದೆ ಪ್ರಸ್ತಾಪಿಸಿದರು. ಅವರು ಹೇಳಿದರು: ಯಾ ರಸೂಲಲ್ಲಾಹ್, ನಾನು ನಮಾಝಿನ ಇಮಾಮತ್ ವಹಿಸುತ್ತಿದ್ದೆ. ಹಿಂದೆ ಒಬ್ಬ ವ್ಯಕ್ತಿ ನಮಾಝ್ ನಿರ್ವಹಿಸಲು ಬಂದರು. ಆದರೆ ನಮಾಝ್ ದೀರ್ಘವಾದಾಗ, ಅವರು ಜಮಾಅತಾದ ನಮಾಝನ್ನು ಉಪೇಕ್ಷಿಸಿ ಒಬ್ಬಂಟಿಯಾಗಿ ನಮಾಝ್ ನಿರ್ವಹಿಸಿ ಹೊರಟುಹೋದರು. ಹಝ್ರತ್ ಪೈಗಂಬರರೊಡನೆ(ಸ) ದೂರು ಹೇಳಲಾಗಿದೆ ಎಂದು ಆ ವ್ಯಕ್ತಿಗೆ ಗೊತ್ತಾದಾಗ, ಅವರು ಹಝ್ರತ್ ಪೈಗಂಬರರ(ಸ) ಸನ್ನಿಧಿಯಲ್ಲಿ ಹಾಜರಾದರು. ಆ ವ್ಯಕ್ತಿ ಹೇಳಿದರು: ಯಾ ರಸೂಲಲ್ಲಾಹ್, ನಾನು ಮಸೀದಿಗೆ ಬಂದಾಗ, ಹಝ್ರತ್ ಮುಆಧ್ ನಮಾಝಿನ ಇಮಾಮತ್ ವಹಿಸುತ್ತಿದ್ದರು. ನಾನು ಅವರೊಂದಿಗೆ ನಮಾಝಿನಲ್ಲಿ ಸೇರಿದ್ದೆ. ಆದರೆ ಅವರು ದೀರ್ಘವಾದ ನಮಾಝ್ ಶುರುಮಾಡಿದ್ದರು. ನಾವಂತು ಕೆಲಸಮಾಡುವ ಜನರಾಗಿದ್ದೇವೆ. ನನ್ನ ಒಂಟೆ ಮೇವಿಲ್ಲದೆ ಹೊರಗೆ ನಿಂತಿತ್ತು. ಆದ್ದರಿಂದ ಜಮಾಅತಾದ ನಮಾಝನ್ನು ಬಿಟ್ಟು ಮಸೀದಿಯ ಒಂದು ಮೂಲೆಯಲ್ಲಿ ಒಬ್ಬಂಟಿಯಾಗಿ ನಮಾಝ್ ನಿರ್ವಹಿಸಿದೆ. ಅನಂತರ ಮನೆಗೆ ಹೋಗಿ ಒಂಟೆಗೆ ತಿನ್ನಲು ಮೇವು ಕೊಟ್ಟೆ. ಇದನ್ನು ಕೇಳಿ ಹಝ್ರತ್ ಪೈಗಂಬರ್(ಸ) ಹಝ್ರತ್ ಮುಆಧ್‌ರೊಡನೆ ಅತೃಪ್ತಿ ಪ್ರಕಟಿಸಿದರು. ಅವರನ್ನು ಸಂಬೋಧಿಸಿ ಹೇಳಿದರು: ಹೇ ಮುಆಧ್ ನೀನು ಜನರನ್ನು ಫಿತ್ನದಲ್ಲಿ ಹಾಕುತ್ತಿದ್ದಿಯ. ನಿನಗೆ **ಸಬ್ಬಿಹಿಸ್ಮ ರಬ್ಬಿಕಲ್ ಅಅ್‌ಲಾ, ವಶ್ಶಂಸಿ ವಝುಹಾಹಾ, ವಲ್‌ಫಜ್ರ್ ಮತ್ತು ವಲ್ಲೈಲಿ ಇದ್ಹಾ ಯಗ್‌ಶ** ಓದಲು ತೊಂದರೆಯೇನತ್ತು. ನೀನು ಈ ಸೂರತ್ತುಗಳನ್ನು ಏಕೆ ಓದಲಿಲ್ಲ. ದೀರ್ಘವಾದ ಸೂರತ್ತುಗಳನ್ನು ಓದಲು ಏಕೆ ಶುರುಮಾಡಿದೆ. ಹಝ್ರತ್ ಪೈಗಂಬರ್(ಸ) ಈ ಸೂರತ್ತುಗಳನ್ನು ಮಧ್ಯಮ ನೆಲೆಯ ಸೂರತ್ತುಗಳಲ್ಲಿ ಒಳಪಡಿಸಿದ್ದರು. ಏನಾದರೂ ವಿಶೇಷವಾದ ಕಾರಣ ಮತ್ತು ಸಮಯದಲ್ಲಿ ದೀರ್ಘವಾದ ಸೂರತ್ತುಗಳನ್ನು ಖಂಡಿತ ಓದಬಹುದಾಗಿದೆ. ಅದೇ ರೀತಿಯಲ್ಲಿ ಯಾವುದಾದರೂ ತೊಂದರೆ ಅಥವಾ ರೋಗದ ಸ್ಥಿತಿಯಲ್ಲಿ ಸಣ್ಣ ಸೂರತ್ತುಗಳನ್ನು ಸಹ ಓದಬಹುದಾಗಿದೆ. ಆದರೆ ಸಾಮಾನ್ಯವಾಗಿ ಮಧ್ಯಮ ನೆಲೆಯ ಸೂರತ್ತುಗಳು ಇವೇ ಆಗಿವೆ. ಇದನ್ನು ಸಾಧಾರಣವಾಗಿ ಉಚ್ಚ ಸ್ವರದಲ್ಲಿ ಸೂರತ್ ಓದಲಾಗುವ ನಮಾಝಿನಲ್ಲಿ ಓದಬೇಕಾಗಿದೆ. (ತಫ್‌ಸೀರೆ ಕಬೀರ್, ಸಂಪುಟ–8, ಪುಟ–479, ತಫ್‌ಸೀರ್ ಸೂರತುಲ್ ಫಜರ್)

ಹೇಗಿದ್ದರೂ ಮೇಲೆ ಪ್ರಸ್ತಾಪಿಸಲಾದ ಸೂರತ್ತುಗಳು ಮಾತ್ರ ನಮಾಝಿನಲ್ಲಿ ಓದಬೇಕೆಂದೇನಿಲ್ಲ. ಇದು ಒಂದು ಮೂಲಭೂತವಾದ ನಿರ್ದೇಶನವಾಗಿದೆ. ತಮ್ಮ ಸ್ಥಿತಿಗಳ ಪ್ರಕಾರ ಮತ್ತು ಕೆಲವರಿಗೆ ಕೆಲವು ಸೂರತ್ತುಗಳು ಕಂಠಪಾಠವಾಗಿರುತ್ತದೆ. ಕೆಲವರು ಸಣ್ಣ ಸಣ್ಣ ಸೂರತ್ತುಗಳು ಕಂಠಪಾಠ ಮಾಡಿರುತ್ತಾರೆ. ಇಮಾಮತಿಗೆ ಬೇರೆ ಯಾರೂ ಲಭಿಸದಿದ್ದರೆ ಅವರಿಗೆ ಇಮಾಮತ್ ವಹಿಸಬೇಕಾಗುತ್ತದೆ. ಆಗ ಸಣ್ಣ ಸೂರತ್ತುಗಳು ಓದಬಹುದಾಗಿದೆ. ಜಮಾಅತಾದ ನಮಾಝಿನಲ್ಲಿ ದೀರ್ಘವಾದ ಸೂರತ್ತುಗಳನ್ನು ಓದಬಾರದೆಂಬುದು ಮೂಲಭೂತವಾದ ನಿರ್ದೇಶನವಾಗಿದೆ. ಏಕೆಂದರೆ, ನಮಾಝಿನಲ್ಲಿ ಹಲವು ತರದ ಜನರು ಇರುತ್ತಾರೆ. ಅವರಲ್ಲಿ ವೃದ್ಧರು, ರೋಗಿಗಳು, ಕೆಲಸಮಾಡುವವರು ಸಹ ಇರುತ್ತಾರೆ.

ಹಝ್ರತ್ ಮುಆಧ್ ಬಿನ್ ಜಬಲ್(ರ) ಹೇಳುತ್ತಾರೆ: ನಾನು ಸವಾರಿಯಲ್ಲಿ ಹಝ್ರತ್ ಪೈಗಂಬರರ(ಸ) ಹಿಂದೆ ಕುಳಿತ್ತಿದ್ದೆ. ಹಝ್ರತ್ ಪೈಗಂಬರ್(ಸ) ಕರೆದರು: ಹೇ ಮುಆಧ್. ನಾನು ಉತ್ತರಿಸಿದೆ: ಯಾ ರಸೂಲಲ್ಲಾಹ್, ನಾನು ಹಾಜರಾಗಿರುವೆನು ಮತ್ತು ಇದು ನನ್ನ ಸೌಭಾಗ್ಯವಾಗಿದೆ. ಅನಂತರ ಹಝ್ರತ್ ಪೈಗಂಬರ್(ಸ) ಸ್ವಲ್ಪ ಮುಂದಕ್ಕೆ ಸಾಗಿದರು ಮತ್ತು ಪುನಃ ಕರೆದರು: ಹೇ ಮುಆಧ್. ನಾನು ಪುನಃ ಉತ್ತರಿಸಿದೆ: ಲಬ್ಬೈಕ್ ಯಾ ರಸೂಲಲ್ಲಾಹ್, ಇದು ನನ್ನ ಸೌಭಾಗ್ಯವಾಗಿದೆ. ಅನಂತರ ಹಝ್ರತ್ ಪೈಗಂಬರ್(ಸ) ಅಲ್ಪ ಮುಂದಕ್ಕೆ ಸಾಗಿದರು ಮತ್ತು ಕರೆದರು: ಹೇ ಮುಆಧ್. ನಾನು ಉತ್ತರಿಸಿದೆ: ಲಬ್ಬೈಕ್ ಯಾ ರಸೂಲಲ್ಲಾಹ್, ಇದು ನನ್ನ ಸೌಭಾಗ್ಯವಾಗಿದೆ. ಹಝ್ರತ್ ಪೈಗಂಬರ್(ಸ) ಹೇಳಿದರು: ಅಲ್ಲಾಹನ ಮೇಲೆ ದಾಸರ ಹಕ್ಕುಗಳೇನು ಎಂದು ನಿನಗೆ ಗೊತ್ತೇ? ನಾನು ಹೇಳಿದೆ: ಅಲ್ಲಾಹ್ ಮತ್ತು ಅವನ ರಸೂಲ್ ಚೆನ್ನಾಗಿ ಬಲ್ಲರು. ಹಝ್ರತ್ ಪೈಗಂಬರ್(ಸ) ಹೇಳಿದರು: ಅಲ್ಲಾಹನ ಮೇಲೆ ದಾಸರ ಹಕ್ಕುಗಳೇನೆಂದರೆ, ದಾಸರು ಅಲ್ಲಾಹನನ್ನು ಆರಾಧಿಸಬೇಕು ಮತ್ತು ಅವನೊಂದಿಗೆ ಯಾವುದೇ ಸಹಭಾಗಿಯನ್ನು ಸೇರಿಸಬಾರದು ಎಂಬುದಾಗಿದೆ. ಅನಂತರ ಹಝ್ರತ್ ಪೈಗಂಬರ್(ಸ) ಸ್ವಲ್ಪ ಮುಂದಕ್ಕೆ ಸಾಗಿ ಮತ್ತೆ ಕರೆದರು: ಹೇ ಮುಆಧ್ ಬಿನ್ ಜಬಲ್. ನಾನು ಉತ್ತರಿಸಿದೆ: ಸನ್ನದ್ಧನಾಗಿರುವೆನು, ಯಾ ರಸೂಲಲ್ಲಾಹ್, ಇದು ನನ್ನ ಸೌಭಾಗ್ಯವಾಗಿದೆ. ಹಝ್ರತ್ ಪೈಗಂಬರ್(ಸ) ಹೇಳಿದರು: ದಾಸರ ಮೇಲೆ ಅಲ್ಲಾಹನ ಹಕ್ಕೇನಿದೆ ಎಂದು ನಿನಗೆ ಗೊತ್ತೇ? ನಾನು ಹೇಳಿದೆ: ಅಲ್ಲಾಹ್ ಮತ್ತು ಅವನ ರಸೂಲ್ ಚೆನ್ನಾಗಿ ಬಲ್ಲರು. ಹಝ್ರತ್ ಪೈಗಂಬರ್(ಸ) ಹೇಳಿದರು: ದಾಸರನ್ನು ಶಿಕ್ಷೆಗೆ ಒಳಪಡಿಸಬಾರದು ಎಂಬುದು ಅಲ್ಲಾಹನಿಗೆ ದಾಸರ ಮೇಲೆ ಇರುವ ಹಕ್ಕಾಗಿದೆ. ಎಂದರೆ, ಮನುಷ್ಯನು ಅಲ್ಲಾಹನ ಆದೇಶಗಳನ್ನು ಅನುಸರಿಸುವಾಗ, ಅಲ್ಲಾಹನು ದಾಸನನ್ನು ಶಿಕ್ಷೆಗೆ ಒಳಪಡಿಸುವುದಿಲ್ಲ. ಇದು ಮುಸ್ಲಿಮಿನ ವರದಿಯಾಗಿದೆ. (ಸಹೀಹ್ ಮುಸ್ಲಿಮ್, ಕಿತಾಬುಲ್ ಈಮಾನ್, ಹದೀಸ್–30)

ಹಝ್ರತ್ ಮುಆಧ್ ಬಿನ್ ಜಬಲ್(ರ) ವರದಿ ಮಾಡುತ್ತಾರೆ: ನಾನು ಒಂದು ಯಾತ್ರೆಯಲ್ಲಿ ಹಝ್ರತ್ ಪೈಗಂಬರರೊಂದಿಗೆ(ಸ) ಇದ್ದೆ. ಒಂದು ದಿನ ನಾನು ಅವರ ಸಮೀಪವಿದ್ದೆ. ನಾವು ನಡೆಯುತ್ತಿದ್ದೆವು. ನಾನು ಹಝ್ರತ್ ಪೈಗಂಬರರೊಡನೆ(ಸ) ಹೇಳಿದೆ: ಯಾ ರಸೂಲಲ್ಲಾಹ್, ನನ್ನನ್ನು ಸ್ವರ್ಗಕ್ಕೆ ಕೊಂಡೊಯ್ಯುವಂತಹ ಮತ್ತು ನರಕದ ಬೆಂಕಿಯಿಂದ ದೂರಮಾಡುವಂತಹ ಸತ್ಕರ್ಮದ ಬಗ್ಗೆ ನನಗೆ ಹೇಳಿಕೊಡಿರಿ. ಹಝ್ರತ್ ಪೈಗಂಬರ್(ಸ) ಹೇಳಿದರು: ನೀನು ಬಹಳ ಹಿರಿದಾದ ಸಂಗತಿಯನ್ನು ಕೇಳಿದ್ದಿಯಾ. ಆದರೆ ಅಲ್ಲಾಹನು ಸುಗಮಗೊಳಿಸುವವನಿಗೆ ಈ ಸಂಗತಿಯೂ ಸುಲಭವಾದುದಾಗಿದೆ. ಅದೇನೆಂದರೆ, ಅಲ್ಲಾಹನನ್ನು ಆರಾಧಿಸು, ಅವನಿಗೆ ಸಹಭಾಗಿಯನ್ನು ಕಲ್ಪಿಸಬೇಡ, ನಮಾಝನ್ನು ನೆಲೆನಿಲ್ಲಿಸು, ಝಕಾತ್ ಕೊಡು, ರಮಝಾನಿನ ಉಪವಾಸವನ್ನು ಅನುಷ್ಠಿಸು ಮತ್ತು ಬೈತುಲ್ಲಾಹ್‌ಗೆ ಹಜ್ಜ್ ಮಾಡಲು ಹೋಗು. ಇದನ್ನು ಹೇಳಿದ ನಂತರ ಹಝ್ರತ್ ಪೈಗಂಬರ್(ಸ) ಪುನಃ ಕೇಳಿದರು: ಒಳಿತಿನ ಬಾಗಿಲುಗಳ ಬಗ್ಗೆ ನಾನು ಹೇಳಬೇಡವೇ? ಉಪವಾಸ ಒಂದು ಗುರಾಣಿಯಾಗಿದೆ; ರಕ್ಷಾ ಕವಚವಾಗಿದೆ. ಬೆಂಕಿಯನ್ನು ನೀರು ನಂದಿಸುವಂತೆ, ಪಾಪಗಳನ್ನು ದಾನಧರ್ಮಗಳು ನಂದಿಸುತ್ತವೆ. ಮಧ್ಯರಾತ್ರಿ ನಮಾಝ್ ನಿರ್ವಹಿಸುವುದು, ಎಂದರೆ ತಹಜ್ಜುದ್ ನಮಾಝ್ ಅನುಷ್ಠಿಸುವುದು. ಹೀಗೆ ಹೇಳಿ ಈ ಆಯತ್ತನ್ನು ಓದಿದರು: **ತತಜಾಫಾ ಜುನೂಬುಹುಮ್ ಅನಿಲ್ ಮಝಾಜಿಇ ಯದ್‌ಊನ ರಬ್ಬಹುಮ್ ಖೌಫನ್ ವ ತಮ್‌ಅನ್ ವಮಿಮ್ಮಾ ರಝಖ್‌ನಾಹುಮ್ ಯುನ್‌ಫಿಖೂನ್. ಫಲಾ ತಅ್‌ಲಮು ನಫ್‌ಸುನ್ ಮಾ ಉಖ್‌ಫಿಯ ಲಹುಮ್ ಮಿನ್ ಖುರ್‌ರತಿ ಅಅ್‌ಯುನ್– ಜಝಾಅನ್ ಬಿಮಾ ಕಾನೂ ಯಅ್‌ಮಲೂನ್.** ಎಂದರೆ, ದೈವಿಕ ಶಿಕ್ಷೆಯ ಭಯದಿಂದಲೂ ದೈವಿಕ ಕಾರುಣ್ಯದ ಭರವಸೆಯಿಂದಲೂ ತಮ್ಮ ಪ್ರಭುವಿನೊಡನೆ ಪ್ರಾರ್ಥಿಸುತ್ತಾ ಅವರ ಶರೀರದ ಪಾರ್ಶ್ವಗಳು ಹಾಸಿಗೆಗಳಿಂದ ಅಗಲುವುವು. ನಾವು ಅವರಿಗೆ ಏನನ್ನು ನೀಡಿದ್ದೇವೋ ಅದರಿಂದ ಅವರು ದೇವಪಥದಲ್ಲಿ ಖರ್ಚು ಮಾಡುತ್ತಾರೆ. ತಮ್ಮ ಸತ್ಕರ್ಮದ ಫಲವಾಗಿ, ಕಣ್ಣುಗಳಿಗೆ ತಂಪನ್ನೀಯುವ ಏನೆಲ್ಲ ಅನುಗ್ರಹಗಳು ಅವರಿಗೋಸ್ಕರ ಮರೆಮಾಡಿ ಇಡಲಾಗಿದೆಯೆಂಬ ವಿಚಾರ ಯಾರಿಗೂ ತಿಳಿಯದು.

ಅನಂತರ ಹಝ್ರತ್ ಪೈಗಂಬರ್(ಸ) ಹೇಳಿದರು: ನಾನು ನಿಮಗೆ ಅದರ ಸ್ತಂಭ ಮತ್ತು ಶಿಖರದ ಬಗ್ಗೆ, ಅದರ ತುತ್ತತುದಿಯ ಬಗ್ಗೆ ಹೇಳಲೇ?

ಅದು ಜಿಹಾದ್ ಆಗಿದೆ. ಎಂದರೆ, ಅಲ್ಲಾಹನ ಮಾರ್ಗದಲ್ಲಿ ಹೋರಾಡುವುದು. ಅನಂತರ ಹಝ್ರತ್ ಪೈಗಂಬರ್(ಸ) ಕೇಳಿದರು: ಇವೆಲ್ಲದರ ಆಧಾರವಾಗಿರುವಂತಹ ಸಂಗತಿಯನ್ನು ನಿಮಗೆ ಹೇಳಬೇಡವೇ? ನಾನು ಹೇಳಿದೆ: ಖಂಡಿತವಾಗಿಯೂ ಯಾ ರಸೂಲಲ್ಲಾಹ್. ಆಗ ಹಝ್ರತ್ ಪೈಗಂಬರ್(ಸ) ತನ್ನ ನಾಲಗೆಯನ್ನು ಹಿಡಿದುಕೊಂಡು ಹೇಳಿದರು: ಇದನ್ನು ಹತೋಟಿಯಲ್ಲಿಡು. ನಾನು ಕೇಳಿದೆ: ಯಾ ನಬಿಯುಲ್ಲಾಹ್(ಸ), ನಮ್ಮ ವಿಚಾರಣೆ ಮತ್ತು ಹಿಡಿತ ನಾವು ಇದರ ಮೂಲಕ ಹೇಳುವುದರ ಪ್ರಕಾರವಾಗಿರುವುದೇ? ಹಝ್ರತ್ ಪೈಗಂಬರ್(ಸ) ಹೇಳಿದರು: ನಿನಗೆ ಒಳಿತಾಗಲಿ, ಹೇ ಮುಆಧ್, ಜನರನ್ನು ನರಕದ ಬೆಂಕಿಯಲ್ಲಿ ತಲೆ ಕೆಳಗಾಗಿ ಹಾಕುವ ಸಂಗತಿ ಅವರ ನಾಲಗೆಗಳ ಮೂಲಕ ಹೊರಟ ಮಾತುಗಳೇ ಆಗಿವೆ. (ಸುನನ್ ಇಬ್ನೆ ಮಾಜ, ಕಿತಾಬುಲ್ ಫಿತನ್, ಹದೀಸ್–3973)

ಅಚಿದರೆ ನೀವು ನಿಮ್ಮ ನಾಲಗೆಯಿಂದ ಹೇಳುವ ಕಠಿಣವಾದ ಮಾತುಗಳು ಇತರರಿಗೆ ದುಃಖವನ್ನು ತಲುಪಿಸುವುದು. ಅದು ಕೆಲವೊಮ್ಮೆ ಕಲಹಕ್ಕೆ ಕಾರಣವಾಗುವುದು. ಹಲವು ರೀತಿಯ ಕೆಡುಕುಗಳು ಇದರಿಂದ ಉಂಟಾಗುತ್ತವೆ. ನಾಲಗೆಗಳಿಂದ ಹೊರಟ ಮಾತುಗಳೇ ಈ ಕೆಡುಕುಗಳಿಗೆ ಕಾರಣವಾಗುತ್ತವೆ. ಅವುಗಳು ಮನುಷ್ಯನನ್ನು ನರಕದಲ್ಲಿ ಬೋರಲಾಗಿ ಹಾಕುವ ಸಂಗತಿಗಳಾಗುತ್ತವೆ. ಆದ್ದರಿಂದ ಅದನ್ನು ಜಾಗರೂಕತೆಯಿಂದ ಉಪಯೋಗಿಸಬೇಕು. ನಾಲಗೆಯಿಂದ ಒಳ್ಳೆಯ ಮತ್ತು ಉತ್ತಮ ಮಾತುಗಳನ್ನು ಹೇಳಬೇಕು.

ಹಝ್ರತ್ ಕಅ್‌ಬ್ ಬಿನ್ ಮಾಲಿಕ್ ಹೇಳುತ್ತಿದ್ದರು: ಹಝ್ರತ್ ಮುಆಧ್(ರ) ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜೀವಿತಕಾಲದಲ್ಲಿ ಮತ್ತು ಹಝ್ರತ್ ಅಬೂಬಕ್ಕರರ(ರ) ಕಾಲದಲ್ಲಿ ಮದೀನದಲ್ಲಿ ಫತ್ವಾ (ಧರ್ಮಶಾಸ್ತ್ರ ವಿಧಿ) ನೀಡುತ್ತಿದ್ದರು. (ಅತ್ತಬಖಾತುಲ್ ಕುಬ್ರ, ಸಂಪುಟ–2, ಪುಟ–265, ದಾರುಲ್ ಕುತುಬ್ ಇಲ್‌ಮಿಚಿಯ ಬೈರೂತ್ 1990)

ಮುಹಮ್ಮದ್ ಬಿನ್ ಸಹಲ್ ಬಿನ್ ಅಬೂಖೈಸ್‌ಮ ತನ್ನ ತಂದೆಯಿಂದ ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರರ(ಸ) ಕಾಲದಲ್ಲಿ ಮುಹಾಜಿರರ ಮೂರು ವ್ಯಕ್ತಿಗಳು ಮತ್ತು ಅನ್ಸಾರರ ಮೂರು ವ್ಯಕ್ತಿಗಳು ಧರ್ಮಶಾಸ್ತ್ರ ವಿಧಿಗಳನ್ನು ನೀಡುತ್ತಿದ್ದರು. ಅವರ ಹೆಸರುಗಳು ಹೀಗಿವೆ: ಹಝ್ರತ್ ಉಮರ್(ರ), ಹಝ್ರತ್ ಉಸ್ಮಾನ್(ರ), ಹಝ್ರತ್ ಅಲಿ(ರ), ಹಝ್ರತ್ ಉಬಯ್ಯ್ ಬಿನ್ ಕಅ್‌ಬ್(ರ), ಹಝ್ರತ್ ಮುಆಧ್ ಬಿನ್ ಜಬಲ್(ರ) ಮತ್ತು ಹಝ್ರತ್ ಝೈದ್ ಬಿನ್ ಸಾಬಿತ್(ರ). (ಅತ್ತಬಖತುಲ್ ಕುಬ್ರ, ಸಂಪುಟ–2, ಪುಟ–267, ದಾರುಲ್ ಕುತುಬ್ ಇಲ್‌ಮಿಚಿಯ ಬೈರೂತ್ 1990)

ಅಬ್ದುರ್ರಹ್ಮಾನ್ ಬಿನ್ ಖಾಸಿಮ್ ವರದಿ ಮಾಡುತ್ತಾರೆ: ಸಲಹೆಗಾರರ ಮತ್ತು ಕರ್ಮಶಾಸ್ತ್ರ ಪಂಡಿತರ ಸಲಹೆಗಳನ್ನು ಕೇಳಬೇಕಾದಂತಹ ಯಾವುದಾದರೂ ವಿಷಯ ಮುಂದೆ ಬಂದರೆ, ಹಝ್ರತ್ ಅಬೂಬಕ್ಕರ್(ರ) ಮುಹಾಜಿರ್ ಮತ್ತು ಅನ್ಸಾರರ ಈ ವ್ಯಕ್ತಿಗಳನ್ನು ಕರೆಯುತ್ತಿದ್ದರು. ಅವರ ಹೆಸರುಗಳು ಹೀಗಿವೆ: ಹಝ್ರತ್ ಉಮರ್(ರ), ಹಝ್ರತ್ ಉಸ್ಮಾನ್(ರ), ಹಝ್ರತ್ ಅಲಿ(ರ), ಹಝ್ರತ್ ಅಬ್ದುರ್ರಹ್ಮಾನ್ ಬಿನ ಔಫ್(ರ), ಹಝ್ರತ್ ಉಬಯ್ಯ್ ಬಿನ್ ಕಅ್‌ಬ್(ರ), ಹಝ್ರತ್ ಮುಆಧ್ ಬಿನ್ ಜಬಲ್(ರ) ಮತ್ತು ಹಝ್ರತ್ ಝೈದ್ ಬಿನ್ ಸಾಬಿತ್(ರ). ಇವರೆಲ್ಲರೂ ಹಝ್ರತ್ ಅಬೂಬಕ್ಕರರ(ರ) ಖಿಲಾಫತ್ ಕಾಲಘಟ್ಟದಲ್ಲಿ ಫತ್ವಗಳನ್ನು ನೀಡುತ್ತಿದ್ದರು. ಎಂದರೆ, ಇವರು ಫತ್ವ ಕಮಿಟಿಯ ಮೆಂಬರ್ ಆಗಿದ್ದರು. ಹಝ್ರತ್ ಪೈಗಂಬರರಿಂದ(ಸ) ಅವರು ಕಲಿತ ಅರಿವಿನ ಆಧಾರದಲ್ಲಿ ಅವರಿಗೆ ಫತ್ವಗಳನ್ನು ನೀಡಲು ಅಧಿಕಾರಕೊಡಲಾಗಿತ್ತು. (ಅತ್ತಬಖಾತುಲ್ ಕುಬ್ರ, ಸಂಪುಟ–2, ಪುಟ–267, ದಾರುಲ್ ಕುತುಬ್ ಇಲ್ಮಿಯ ಬೈರೂತ್ 1990)

ಹಝ್ರತ್ ಮುಆಧ್ ಬಿನ್ ಜಬಲ್(ರ) ಹಝ್ರತ್ ಅಬೂಬಕ್ಕರರ(ರ) ಖಿಲಾಫತ್ ಕಾಲದಲ್ಲಿ ಸಿರಿಯಗೆ ಹೋಗಿ ಅಲ್ಲೇ ನೆಲೆಸಿದರು. ಹಝ್ರತ್ ಮುಆಧ್ ಬಿನ್ ಜಬಲ್(ರ) ಸಿರಿಯಗೆ ಹೋದಾಗ, ಹಝ್ರತ್ ಉಮರ್(ರ) ಹೇಳಿದರು: ಅವರ ರವಾನೆಯಿಂದ, ಮದೀನದ ನಿವಾಸಿಗಳು, ಕರ್ಮಶಾಸ್ತ್ರದ ಅರಿವಿನಿಂದ ಮತ್ತು ಧರ್ಮಶಾಸ್ತ್ರ ವಿಧಿಗಳಿಂದ ವಂಚಿತರಾಗಿರುವರು. ಹಝ್ರತ್ ಉಮರ್(ರ) ಹಝ್ರತ್ ಅಬೂಬಕ್ಕರ್‌ರೊಡನೆ(ರ) ಹೇಳಿದರು: ಜನರಿಗೆ ಅವರ ಆವಶ್ಯಕತೆಯಿದೆ. ಅವರನ್ನು ಹೋಗುವುದರಿಂದ ತಡೆಯಿರಿ. ಆದರೆ ಹಝ್ರತ್ ಅಬೂಬಕ್ಕರ್(ರ) ಹೀಗೆ ಹೇಳಿ ನಿರಾಕರಿಸಿದರು: ಯಾರು ಶಹಾದತಿನ ಉದ್ದೇಶದಿಂದ ಹೋಗುತ್ತಿರುವರೋ ಅವರನ್ನು ನಾನು ತಡೆಯುವುದಿಲ್ಲ. ಆಗ ಹಝ್ರತ್ ಉಮರ್(ರ) ಹೇಳಿದರು: ಅಲ್ಲಾಹನಾಣೆ, ಮನುಷ್ಯನಿಗೆ ತನ್ನ ಹಾಸಿಗೆಯಲ್ಲಿ ಸಹ ಕೆಲವೊಮ್ಮೆ ಶಹಾದತಿನ ಸೌಭಾಗ್ಯ ಸಿಗುವುದು. (ಅತ್ತಬಖಾತುಲ್ ಕುಬ್ರ, ಸಂಪುಟ–5, ಪುಟ–265, ದಾರುಲ್ ಕುತುಬ್ ಇಲ್‌ಮಿಚಿಯ ಬೈರೂತ್ 1990)

ಸೌರ್ ಬಿನ್ ಝೈದ್ ವರದಿ ಮಾಡುತ್ತಾರೆ: ಹಝ್ರತ್ ಮುಆಧ್ ಬಿನ್ ಜಬಲ್(ರ) ರಾತ್ರಿ ಸಮಯದಲ್ಲಿ ತಹಜ್ಜುದ್ ನಮಾಝ್ ನಿರ್ವಹಿಸುವಾಗ, ಹೀಗೆ ದುಆ ಮಾಡುತ್ತಿದ್ದರು: 'ಹೇ ಅಲ್ಲಾಹ್, ಕಣ್ಣುಗಳು ನಿದ್ದೆಹೋಗಿವೆ ಮತ್ತು ನಕ್ಷತ್ರಗಳು ಮಂದವಾಗಿ ಬೆಳಗುತ್ತಿವೆ. ನೀನು ಸದಾ ಜೀವಂತನೂ ಸ್ವತಃ ನೆಲೆನಿಂತಿರುವವನೂ ಎಲ್ಲವನ್ನು ನೆಲೆನಿಲ್ಲಿಸುವವನೂ ಆಗಿರುವಿ. ಸ್ವರ್ಗಕ್ಕಾಗಿ ನನ್ನ ಬೇಡಿಕೆ ಮತ್ತು ಪ್ರಯತ್ನ ಮಂದಗತಿಯಲ್ಲಾಗಿದೆ. ಬೆಂಕಿಯಿಂದ ರಕ್ಷಣೆ ಪಡೆಯಲು ನಾನು ನಿಧಾನವಾಗಿ ಮತ್ತು ದುರ್ಬಲನಂತೆ ಓಡುತ್ತಿದ್ದೇನೆ. ಹೇ ಅಲ್ಲಾಹ್, ಖಿಯಾಮತ್ ದಿನದಂದು ನನ್ನ ಪ್ರಯೋಜನಕ್ಕೆ ಬರುವಂತಹ ಸನ್ಮಾರ್ಗವನ್ನು ನನಗಾಗಿ ನಿನ್ನ ಬಳಿ ಇರಿಸು. ನಿಶ್ಚಯವಾಗಿಯೂ ನೀನು ವಾಗ್ದಾನಗಳನ್ನು ಉಲ್ಲಂಘಿಸುವವನಲ್ಲ.' ಎಂತಹ ಭಯ ಮತ್ತು ದೇವಭಕ್ತಿಯ ಉನ್ನತಮಟ್ಟವೆಂದು ನೋಡಿರಿ. (ಅಸದುಲ್‌ಗಾಬ ಫೀ ಮಾರಿಫತಿಸ್ಸಹಾಬ, ಸಂಪುಟ–5, ಪುಟ–188, ದಾರುಲ್ ಕುತುಬ್ ಇಲ್‌ಮಿಚಿಯ ಬೈರುತ್ ಲೆಬನಾನ್ 2003)

ಹಝ್ರತ್ ಅನಸ್ ಬಿನ್ ಮಾಲಿಕ್(ರ) ವರದಿ ಮಾಡುತ್ತಾರೆ: ಹಝ್ರತ್ ಮುಆಧ್(ರ) ಹಝ್ರತ್ ಪೈಗಂಬರರ(ಸ) ಹಿಂದೆ ಸವಾರರಾಗಿದ್ದಾಗ, ಹಝ್ರತ್ ಪೈಗಂಬರ್(ಸ) ಹಝ್ರತ್ ಮುಆಧ್‌ರೊಡನೆ(ರ) ಹೇಳಿದರು: ಹೇ ಮುಆಧ್ ಬಿನ್ ಜಬಲ್. ಅವರು ಹೇಳಿದರು: ಯಾ ರಸೂಲಲ್ಲಾಹ್, ನಾನು ಹಾಜರಾಗಿರುವೆನು. ನಾನು ನಿಮ್ಮ ಸೇವೆಗೆ ಸನ್ನದ್ಧನಾಗಿರುವೆನು. ಹಝ್ರತ್ ಪೈಗಂಬರ್(ಸ) ಹೇಳಿದರು: ಹೇ ಮುಆಧ್ ಬಿನ್ ಜಬಲ್. ಅವರು ಹೇಳಿದರು: ಯಾ ರಸೂಲಲ್ಲಾಹ್, ನಾನು ಹಾಜರಾಗಿರುವೆನು. ನಾನು ನಿಮ್ಮ ಸೇವೆಗೆ ಸನ್ನದ್ಧನಾಗಿರುವೆನು. ಹಝ್ರತ್ ಪೈಗಂಬರ್(ಸ) ಹೇಳಿದರು: ಹೇ ಮುಆಧ್ ಬಿನ್ ಜಬಲ್. ಅವರು ಹೇಳಿದರು: ಯಾ ರಸೂಲಲ್ಲಾಹ್, ನಾನು ಹಾಜರಾಗಿರುವೆನು. ನಾನು ನಿಮ್ಮ ಸನ್ನಿಧಿಯಲ್ಲಿರುವೆನು. ಹೀಗೆ ಮೂರು ಸಲ ಕರೆದ ನಂತರ ಹೇಳಿದರು: ಅಲ್ಲಾಹನಲ್ಲದೆ ಬೇರೆ ಆರಾಧ್ಯನಿಲ್ಲವೆಂದೂ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅಲ್ಲಾಹನ ಪೈಗಂಬರ್ ಆಗಿರುವರು ಎಂದೂ ಯಾರು ಸತ್ಯ ಹೃದಯದಿಂದ ಸಾಕ್ಷ್ಯವಹಿಸುತ್ತಾರೋ ಅವರ ಮೇಲೆ ನರಕದ ಬೆಂಕಿ ನಿಷಿದ್ಧಗೊಳಿಸಲಾಗುವುದು. ಹಝ್ರತ್ ಮುಆಧ್(ರ) ಹೇಳಿದರು: ಯಾ ರಸೂಲಲ್ಲಾಹ್, ನಾನು ಇದರ ಬಗ್ಗೆ ಜನರಿಗೆ ತಿಳಿಸಲೇ? ಜನರು ಸಂತೋಷಗೊಳ್ಳುವರು. ಹಝ್ರತ್ ಪೈಗಂಬರ್(ಸ) ಹೇಳಿದರು: ಬೇಡ, ಜನರು ಇಷ್ಟು ಮಾತ್ರವನ್ನು ಹೇಳಿದರೆ ಸಾಕೆಂದು ಅದರ ಮೇಲೆ ಭರವಸೆಯಿಟ್ಟು ಇತರ ಒಳಿತುಗಳನ್ನು ಮಾಡದಿರುವರು. ಆದ್ದರಿಂದ ಈಗ ಜನರೊಡನೆ ಹೇಳಬೇಡ. ಹಝ್ರತ್ ಮುಆಧ್(ರ) ತನ್ನ ಮರಣ ಸಮೀಪವಾದಾಗ, ಪಾಪದಿಂದ ರಕ್ಷಣೆಹೊಂದಲು ಈ ಮಾತುಗಳನ್ನು ಹೇಳಿದರು. ಎಂದರೆ ಜೀವನಪೂರ್ತಿ ಆರೋಗ್ಯವಿದ್ದ ಸ್ಥಿತಿಯಲ್ಲಿ ಅದನ್ನು ಹೇಳಲಿಲ್ಲ.

(ಸಹೀಹ್ ಬುಖಾರಿ, ಕಿತಾಬುಲ್ ಇಲ್ಮ್, ಹದೀಸ್–128)

ಆದರೆ ಈ ಮಾತುಗಳನ್ನು ಅರಿವು ಇರುವ ವ್ಯಕ್ತಿಗಳಿಗೆ ತಲುಪಿಸುವುದು ಆವಶ್ಯವೆಂದು ಭಾವಿಸಿ ಅದನ್ನು ಕೊನೆಗೆ ತಿಳಿಸಿದರು. ಎಂದರೆ ವಿಶೇಷವಾದ ಅರಿವಿನ ಸಂಗತಿಗಳನ್ನು ಎಲ್ಲರಿಗೂ ಹೇಳಬೇಕಾಗಿಲ್ಲ. ಏಕೆಂದರೆ ಸಾಮಾನ್ಯ ಜನರು ಅದರ ಸರಿಯಾದ ಅರ್ಥವನ್ನು ತಿಳಿಯದ ಕಾರಣದಿಂದ ನಷ್ಟಕ್ಕೆ ಒಳಗಾಗುವರು. ಇದನ್ನು ಕೇಳಿ, ಜನರು ಇಷ್ಟನ್ನು ಮಾತ್ರ ಮಾಡಿ ಬೇರೆ ಯಾವುದೇ ಸತ್ಕರ್ಮ ಮಾಡದೆ ಇರಬಹುದು. **ಲಾ ಇಲಾಹ ಇಲ್ಲಲ್ಲಾಹ್** ಎಂದು ಹೇಳಿದರೆ ಸಾಕು, ಬೇರೆ ಯಾವುದೆ ಸತ್ಕರ್ಮದ ಆವಶ್ಯಕತೆಯಿಲ್ಲವೆಂದು ಭಾವಿಸುವರು. ನಾವು ಈಗ ಅದನ್ನು ನೋಡುತ್ತಲೂ ಇದ್ದೇವೆ. ಕೇವಲ ಹೆಸರಿಗೆ ಮಾತ್ರ ಮುಸ್ಲಿಮರು. ಕಲಿಮ ಉಚ್ಚರಿಸಿ, ಬೇರೆ ಯಾವುದೇ ಸತ್ಕರ್ಮದ ಆವಶ್ಯಕತೆಯಿಲ್ಲವೆಂದು ಭಾವಿಸಿದ್ದಾರೆ.

ಹಝ್ರತ್ ಶಾಹ್ ವಲಿಯುಲ್ಲಾಹ್ ಶಾಹ್ ಸಾಹಿಬರು ಬುಖಾರಿಯ ವ್ಯಾಖ್ಯಾನದಲ್ಲಿ, ಈ ರೀತಿಯ ಹದೀಸುಗಳ ಬಗ್ಗೆ ವಿವರಿಸಿದ್ದಾರೆ. ಅವರು ಹೇಳುತ್ತಾರೆ: ಮುಸ್ಲಿಮಿನಲ್ಲೂ ಹಝ್ರತ್ ಇಬ್ನು ಮಸ್‌ಊದ್‌ರ ಒಂದು ವರದಿ ಸರಿಯಾದ ಸನದಿನೊಂದಿಗೆ ವಿವರಿಸಲಾಗಿದೆ. ಅದು ಹೀಗಿದೆ: **ಮಾ ಅಚಿತ ಬಿಮುಹದ್ದಿಸಿನ್ ಖೌಮನ್ ಹದೀಸನ್ ಲಾ ಯಬ್‌ಲುಗುಹೂ ಉಖೂಲಹುಮ್ ಇಲ್ಲಾ ಕಾನ ಲಿಬಅಝಿಹಿಮ್ ಫಿತ್‌ನತುನ್**– ಹಝ್ರತ್ ಪೈಗಂಬರರ(ಸ) ಈ ಉಪದೇಶದ ತಾತ್ಪರ್ಯವೇನೆಂದರೆ, ಜನರೊಡನೆ ಅವರ ಬುದ್ಧಿ ಮತ್ತು ವಿವೇಕದ ಪ್ರಕಾರ ಮಾತನಾಡಬೇಕು. ಕೆಲವು ಸಂಗತಿಗಳು ಫಿತ್ನಕ್ಕೆ ಕಾರಣವಾಗುವುವು. ನಾವು ಈಗಲೂ ನೋಡುತ್ತಿದ್ದೇವೆ. ಮೌಲವಿಯರು ಹೇಗೆ **ಲಾ ಇಲಾಹ ಇಲ್ಲಲ್ಲಾಹ್** ಎಂಬ ಬಾಯಿಮಾತಿನ ಕಲಿಮವನ್ನು ಅವಲಂಬಿಸಿ, ಅದರ ಆಸರೆ ಪಡೆದು ಶರೀಅತಿನ ನಿಯಮಗಳಿಂದ ಮನುಷ್ಯಕುಲವನ್ನು ಬಿಡುಗಡೆಗೊಳಿಸಿ, ಅವರಿಗೆ ಈಮಾನಿನ ಸರ್ಟಿಫಿಕೇಟ್ ಕೊಡಲು ಇಚ್ಚಿಸುತ್ತಿದ್ದಾರೆ. ವಿಶ್ವಾಸಕ್ಕೆ ಬೇಕಾಗಿರುವ ಆವಶ್ಯಕವಾದ ಕಾರ್ಯಗಳ

ಬಗ್ಗೆ ಗಮನವಹಿಸುವುದಿಲ್ಲ. ಪ್ರತಿಯೊಬ್ಬ ಮೌಲವಿ ಮತ್ತು ಮಿಂಬರ್‌ನಲ್ಲಿ ಖುತ್‌ಬ ಕೊಡುವವರು ಭಾವಿಸುವುದೇನೆಂದರೆ, ಅವರ ಹಿಂದೆ ನಮಾಝ್ ಮಾಡುವವರು ಅದೇ ಕಲಿಮವನ್ನು ಉಚ್ಚರಿಸಿದರೆ, ವಿಶ್ವಾಸದ ಸರ್ಟಿಫಿಕೇಟ್ ಲಭಿಸುವುದು. ಬೇರೆ ಯಾವುದೇ ಸಂಗತಿಯ ಆವಶ್ಯವಿಲ್ಲವೆಂದು ಭಾವಿಸುತ್ತಾರೆ. ಕೊನೆಗಾಲದಲ್ಲಿ ನಾಲಗೆಯಿಂದ ಕಲಿಮ ಉಚ್ಚರಿಸಿ ಮೂಮಿನ್‌ಗಳಾದ ಜನರು ಇದ್ದು ಕೂಡ, ಯಥಾರ್ಥ ವಿಶ್ವಾಸ ಅವರ ಹೃದಯಗಳಲ್ಲೂ ನಾಲಗೆಗಳಲ್ಲೂ ಇರಲಿಕ್ಕಿಲ್ಲ, ಬದಲಿಗೆ ಅದು ಸುರಯ್ಯಾಗೆ ತಲುಪಿರುವುದು ಎಂದು ಹಝ್ರತ್ ಪೈಗಂಬರ್(ಸ) ಹೇಳಿದ್ದರು. **ಮನ್ ಲಖಿಯಲ್ಲಾಹು ಲಾ ಯುಶ್‌ರಿಕ ಬಿಹೀ ಶೈಅ**. ಎಂದರೆ, ಯಾವನು ಮರಣದ ವರೆಗೆ ಎಲ್ಲ ರೀತಿಯ ಶಿರ್ಕಿನಿಂದ ದೂರವಿರುತ್ತಾನೋ ಅವನು ಸ್ವರ್ಗಕ್ಕೆ ಪ್ರವೇಶಿಸುವನು. ಹಝ್ರತ್ ಮುಆಧ್‌ರನ್ನು ಎರಡು ಮೂರು ಸಲ ಹಝ್ರತ್ ಪೈಗಂಬರ್(ಸ) ಸಂಬೋಧಿಸಿ ಮೌನವಾದ ನಂತರ ಈ ಸಂಗತಿಗಳನ್ನು ಹೇಳಲು ಕಾರಣ ಇದೇ ಆಗಿದೆ. ಮೊದಲು ಎರಡು ಮೂರು ಸಲ ಸಂಬೋಧಿಸುವುದರ ಮೂಲಕ ಹೇಳಲು ಹೋಗುತ್ತಿರುವ ಮಾತಿನ ಪ್ರಾಮುಖ್ಯತೆ ಬಗ್ಗೆ ಅವರಲ್ಲಿ ಅಭಿರುಚಿ ಉಂಟುಮಾಡುವಂತೆ ಮಾಡಿದರು. ಹೀಗೆ ಹೇಳಿದಾಗ, ಜಾಬಿರ್(ರ) ನಾನು ಹಾಜರಾಗಿದ್ದೇನೆ, ನಾನು ಹಾಜರಾಗಿದ್ದೇನೆ ಎಂದು ತನ್ನ ಸನ್ನದ್ಧತೆಯನ್ನು ತಿಳಿಸಿದರು. ಅವರಿಗೆ ಹಝ್ರತ್ ಪೈಗಂಬರ್(ಸ) ಹೇಳಲು ಹೋಗುತ್ತಿರುವ ಸಂಗತಿಯನ್ನು ಅರಿಯುವ ಆಸಕ್ತಿ ಮತ್ತು ಅಭಿರುಚಿಯುಂಟಾಯಿತು. ಅವರಿಗೆ ಸಂಗತಿಯನ್ನು ಸರಿಯಾಗಿ ಮನವರಿಕೆ ಮಾಡಿಸಲು ಮತ್ತು ಅದರ ಪ್ರಭಾವ ಮನಸ್ಸಿನಲ್ಲಿ ನೆಲೆನಿಲ್ಲಿಸಲು ಹಝ್ರತ್ ಪೈಗಂಬರ್(ಸ) ಅವರನ್ನು ಮೂರು ಸಲ ಸಂಬೋಧಿಸಿ ಅವರ ಗಮನವನ್ನು ತನ್ನ ಕಡೆಗೆ ಹರಿಸಿದರು. (ಸಹೀಹ್ ಬುಖಾರಿ, ಸಂಪುಟ–1, ಪುಟ–211–212, ನಝಾರತ್ ಇಶಾಅತ್ ರಬ್ವಾಹ್)

ಹಝ್ರತ್ ಮುಆಧ್(ರ) ಸಹ ಹಝ್ರತ್ ಪೈಗಂಬರರ(ಸ) ನಿರ್ದೇಶನವನ್ನು ಪೂರ್ಣವಾಗಿ ಗೌರವಭಾವದಿಂದ ಪಾಲಿಸಿದ್ದರು ಮತ್ತು ಕೊನೆಗೆ ತನಗೆ ಲಭಿಸಿದ ಒಂದು ಅರಿವು ಇತರರಿಗೆ ತಲುಪಿಸದ ಕಾರಣದಿಂದ ಅಲ್ಲಾಹನ ಹಿಡಿತಕ್ಕೆ ಒಳಗಾಗದಿರಲು ಮರಣದ ಸಮಯದಲ್ಲಿ ಈ ಒಂದು ಅತ್ಯಂತ ಮುಖ್ಯವಾದ ಸಂಗತಿಯನ್ನು ಹಿರಿಯರಿಗೆ ತಿಳಿಸಿದರು. ಎಂದರೆ ಜ್ಞಾನದ ಸಂಗತಿ, ಕಡಿಮೆ ಪಕ್ಷ ಜ್ಞಾನಿಗಳಿಗೆ ತಲುಪಿರಬೇಕು.

ಇಂದಂತು ಮುಸ್ಲಿಮರು ತಮ್ಮ ವಿಶ್ವಾಸದ ಬಗ್ಗೆ ವಾದಿಸುತ್ತಾರೆ. ಕಲಿಮ ಉಚ್ಚರಿಸಿಕೊಂಡು ಶಿರ್ಕಿನಿಂದ ಪರಿಶುದ್ಧರಾದೆವು ಎಂದು ಭಾವಿಸುತ್ತಾರೆ. ಆದರೆ ಹೃದಯದಲ್ಲಿ ಶಿರ್ಕ್ ತುಂಬಿರುತ್ತದೆ. ಲೌಕಿಕವಾದ ಸಂಗತಿಗಳನ್ನು ಆಶ್ರಯಿಸಿರುತ್ತಾರೆ. ದೊಡ್ಡ ದೊಡ್ಡ ಖತೀಬರು ಸಹ ಲೌಕಿಕವಾದ ವಸ್ತುಗಳ ಮೇಲೆ ಪೂರ್ಣವಾಗಿ ಭರವಸೆಯನ್ನಿಟ್ಟಿರುತ್ತಾರೆ. ಅವರ ಯಥಾರ್ಥ ಸ್ಥಿತಿಯನ್ನು ನೋಡಿದರೆ, ಇದು ತಿಳಿದುಬರುತ್ತದೆ. ಈ ಹದೀಸಿನಿಂದ, ಎಂದರೆ ಕಲಿಮ ಉಚ್ಚರಿಸುವವರ ಮೇಲೆ ನರಕದ ಬೆಂಕಿಯನ್ನು ನಿಷಿದ್ಧಗೊಳಿಸಲಾಗುವುದು ಎಂಬ ಹದೀಸಿನಿಂದ ತಿಳಿದುಬರುವ ಬೇರೊಂದು ಸಂಗತಿಯೇನೆಂದರೆ, ಪ್ರತಿಫಲ ನೀಡುವವನು ಅಲ್ಲಾಹನಾಗಿರುತ್ತಾನೆ. ಇದು ಯಾವನೇ ಮನುಷ್ಯನ ಕೆಲಸವಲ್ಲ. ಯಾರನ್ನು ಮುಸ್ಲಿಮ್ ಎಂದು ಹೇಳಬೇಕು ಮತ್ತು ಯಾರನ್ನು ಕಾಫಿರ್ ಎಂದು ಹೇಳಬೇಕು ಎಂಬ ಫತ್ವ ನೀಡುವ ಕೆಲಸ ಮನುಷ್ಯನದ್ದಲ್ಲ. ಇವರು ಸ್ವತಃ ಕಂಡುಹಿಡಿದ ಈ ರೀತಿಯ ಫತ್ವಗಳು ಪವಿತ್ರ ಖುರ್‌ಆನಿನ ಅಧ್ಯಾಪನೆಗಳಿಗೆ ವಿರುದ್ಧವಾಗಿವೆ. ಇಂದು ಮುಸ್ಲಿಮರು ಮೀಲಾದುನ್ನಬಿಯನ್ನು ಆಚರಿಸುತ್ತಿದ್ದಾರೆ. ಯಥಾರ್ಥದಲ್ಲಿ ನಾವು ಹಝ್ರತ್ ಪೈಗಂಬರರ(ಸ) ಉನ್ನತ ಜೀವಿತಮಾದರಿಯನ್ನು ಅನುಸರಿಸಬೇಕು. ತಮ್ಮ ಅರಿವಿನ ಅಹಂಭಾವದಿಂದ ತಮ್ಮನ್ನು ಮಾತ್ರ ಮುಸ್ಲಿಮರೆಂದು ಭಾವಿಸಬಾರದು. ಬದಲಿಗೆ ಕಲಿಮ ಉಚ್ಚರಿಸುವವರ ವಿಷಯವನ್ನು ಅಲ್ಲಾಹನಿಗೆ ಬಿಡಿ. ಈ ಸಂಗತಿಗಳು ಹಝ್ರತ್ ಪೈಗಂಬರರ(ಸ) ಆತ್ಮವನ್ನು ಸಂತೋಷಗೊಳಿಸುವುದು. ಅವರ ಸಮುದಾಯದ ಒಳ್ಳೆಯ ಸಂಗತಿಗಳು ಅವರ ಖುಶಿಗೆ ಕಾರಣವಾಗುವುದು. ಹಝ್ರತ್ ಪೈಗಂಬರರ(ಸ) ಮೇಲೆ ದುರೂದ್ ಹೇಳುವುದರೊಂದಿಗೆ ಅಲ್ಲಾಹನಿಗೆ ಕೃತಜ್ಞತೆಯನ್ನು ಅರ್ಪಿಸಿರಿ. ಅಲ್ಲಾಹನು ಹಝ್ರತ್ ಪೈಗಂಬರರ(ಸ) ದೀನನ್ನು ವಾರಸುದಾರರಿಲ್ಲದ ರೀತಿಯಲ್ಲಿ ಕೈಬಿಡಲಿಲ್ಲ. ಬದಲಿಗೆ ಅಲ್ಲಾಹನ ವಾಗ್ದಾನಗಳ ಪ್ರಕಾರ, ಹಝ್ರತ್ ಪೈಗಂಬರರ(ಸ) ಭವಿಷ್ಯವಾಣಿ ಪ್ರಕಾರ ಇಸ್ಲಾಂ ಧರ್ಮದ ಪುನರುಜ್ಜೀವನಕ್ಕಾಗಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಕಳುಹಿಸಿದನು. ಹಝ್ರತ್ ಮಸೀಹ್ ಮೌಊದ್(ಅ) ಈ ಕಲಿಮ ಮತ್ತು ಶರೀಅತಿನ ನೈಜತೆಯನ್ನು ನಮಗೆ ಹೇಳಿಕೊಟ್ಟಿದ್ದಾರೆ. ಹೀಗೆ ಯಥಾರ್ಥ ರೀತಿಯಲ್ಲೂ ನರಕದ ಬೆಂಕಿ ನಮ್ಮಿಂದ ದೂರವಾಗುವಂತೆ ಮಾಡಿರುವರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಿರಾಕರಿಸುವವರಿಗೂ ಅಲ್ಲಾಹನು ಬುದ್ಧಿಕೊಡಲಿ. ಅವರು ಈ ಸಂಗತಿಗಳನ್ನು ತಿಳಿಯುವಂತಾಗಲಿ. ಇಸ್ಲಾಮಿನ ಯಥಾರ್ಥ ಪಾಠ ಮತ್ತು ಕಲಿಮದ ನಿಜಸ್ಥಿತಿಯನ್ನು ಮನವರಿಕೆ ಮಾಡುವವರನ್ನಾಗಿ ಮತ್ತು ಅದರ ಪ್ರಕಾರ ನಡೆಯುವವರನ್ನಾಗಿ ಅಲ್ಲಾಹನು ನಮ್ಮನ್ನು ಸಹ ಮಾಡಲಿ.

ಹಝ್ರತ್ ಮುಆಧ್ ಬಿನ್ ಜಬಲ್(ರ) ವರದಿ ಮಾಡುತ್ತಾರೆ: ನಾವು ಹಝ್ರತ್ ಪೈಗಂಬರರೊಂದಿಗೆ(ಸ) ತಬೂಕ್ ಯುದ್ಧ ನಡೆದ ವರ್ಷ ಹೊರಟೆವು. ಆ ಯುದ್ಧವೇಳೆಯಲ್ಲಿ ಹಝ್ರತ್ ಪೈಗಂಬರ್(ಸ) ನಮಾಝ್‌ಗಳನ್ನು ಸೇರಿಸಿ ನಿರ್ವಹಿಸುತ್ತಿದ್ದರು. ಝುಹರ್ ಅಸರ್ ಮತ್ತು ಮಗ್‌ರಿಬ್ ಇಶಾ ಒಟ್ಟಿಗೆ ನಿರ್ವಹಿಸುತ್ತಿದ್ದರು. ಒಂದು ದಿನ ನಮಾಝ್ ನಿರ್ವಹಿಸಲು ತಡಮಾಡಿದರು. ಹಝ್ರತ್ ಪೈಗಂಬರ್(ಸ) ಹೊರಗೆ ಬಂದರು. ಝುಹರ್ ಮತ್ತು ಅಸರ್ ನಮಾಝ್‌ಗಳು ಒಟ್ಟಾಗಿ ಅನುಷ್ಠಿಸಿದರು. ಅನಂತರ ಒಳಗೆ ಹೋಗಿ ಸ್ವಲ್ಪ ಸಮಯದ ನಂತರ ಹೊರಗೆ ಬಂದು ಮಗ್‌ರಿಬ್ ಇಶಾ ನಮಾಝ್ ಒಟ್ಟಾಗಿ ನಿರ್ವಹಿಸಿದರು. ನಾಲ್ಕು ಹೊತ್ತಿನ ನಮಾಝನ್ನು ಸೇರಿಸಿ ನಿರ್ವಹಿಸಿದ್ದರು ಎಂದಲ್ಲ ಇದರ ಅರ್ಥ. ಬದಲಿಗೆ ನಮಾಝ್‌ಗಳ ನಡುವಿನ ಅಂತರ ಕಡಿಮೆಯಾಗಿತ್ತು. ಬಹುಶಃ ಝುಹರ್ ಮತ್ತು ಅಸರ್ ನಮಾಝನ್ನು ಅಸರಿನ ಕೊನೆಯ ಹೊತ್ತಿನಲ್ಲಿ ಒಟ್ಟಿಗೆ ನಿರ್ವಹಿಸಿರಬಹುದು ಮತ್ತು ಮಗ್‌ರಿಬ್ ಮತ್ತು ಇಶಾವನ್ನು ಮಗ್‌ರಿಬಿನ ಆರಂಭದ ಹೊತ್ತಿನಲ್ಲಿ ನಿರ್ವಹಿಸಿರಬಹುದು. ಅನಂತರ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅಂದಾಜು ಮಾಡಿ ಹೇಳಿದರು: ನೀವು ತಬೂಕಿನ ಚಿಲುಮೆಯ ಬಳಿಗೆ ಹೋಗಿರಿ. ಈಗ ಹೊರಟರೆ, ನಾಳೆ ಬೆಳಿಗ್ಗೆ ಸೂರ್ಯ ಉದಯಿಸಿದ ನಂತರ ಅಲ್ಲಿಗೆ ತಲುಪಿವಿರಿ ಇನ್‌ಶಾ ಅಲ್ಲಾಹ್. ನಾನು ಅಲ್ಲಿಗೆ ಬರುವ ತನಕ ಚಿಲುಮೆಯ ನೀರನ್ನು ಯಾವ ಕಾರಣಕ್ಕೂ ಮುಟ್ಟಬಾರದು. ಅದನ್ನು ಕುಡಿಯಲು ಹೋಗಬೇಡಿರಿ. ವರದಿಗಾರ ಹೇಳುತ್ತಾರೆ: ಹೀಗೆ ನಾವು ಆ ಚಿಲುಮೆಯ ಬಳಿಗೆ ತಲುಪಿದುವು. ಅಲ್ಲಿ ಬೇರೆ ಇಬ್ಬರು ವ್ಯಕ್ತಿಗಳು ನಮಗಿಂತ ಮುಂಚೆ ತಲುಪಿದ್ದರು. ಚಿಲುಮೆಯಿಂದ ಬಹಳ ತೆಳುವಾಗಿ ದಾರದ ಹಾಗೆ ನೀರು ಹರಿಯುತ್ತಿತ್ತು. ಹಝ್ರತ್ ಪೈಗಂಬರ್(ಸ) ಅಲ್ಲಿಗೆ ತಲುಪಿದರು ಮತ್ತು ಇಬ್ಬರೊಡನೆ ಕೇಳಿದರು: ನೀವು ಈ ಚಿಲುಮೆಯ ನೀರನ್ನು ಮುಟ್ಟಿದ್ದೀರ? ನಾವು ಹೇಳಿದೆವು: ಹೌದು ನಾವು ಅದರಿಂದ ನೀರನ್ನು ತೆಗೆದುಕೊಂಡು ಕುಡಿದೆವು. ನಾನು ತಡೆದ ನಂತರ ಏಕೆ ನೀರನ್ನು ಕುಡಿದಿದ್ದೀರಿ ಎಂದು ಹಝ್ರತ್ ಪೈಗಂಬರ್(ಸ) ಕೇಳಿದರು. ವರದಿಗಾರ ಹೇಳುತ್ತಾರೆ: ಅನಂತರ ಜನರು ಆ ಚಿಲುಮೆಯಿಂದ ತಮ್ಮ ಕೈಗಳಿಂದ ಸ್ವಲ್ಪ ಸ್ವಲ್ಪ ನೀರನ್ನು ತೆಗೆದು ಒಂದು ಪಾತ್ರೆಯಲ್ಲಿ ಶೇಖರಿಸಿದರು. ಹಝ್ರತ್ ಪೈಗಂಬರ್(ಸ) ಅದರಿಂದ ತನ್ನ ಎರಡೂ ಕೈಗಳನ್ನು ಮತ್ತು ಮುಖವನ್ನು ತೊಳೆದರು. ಅನಂತರ ಬಾಕಿಯಿದ್ದ ನೀರನ್ನು ಆ ಚಿಲುಮೆಗೆ ವಾಪಾಸ್ಸು ಹಾಕಿದರು. ಎಂದರೆ ಆ ಚಿಲುಮೆ ಬಳಿ ಕುಳಿತುಕೊಂಡು ಮುಖವನ್ನು ಮತ್ತು ಕೈಗಳನ್ನು ತೊಳೆದರು. ತೊಳೆದ ನೀರು ಆ ಚಿಲುಮೆಗೆ ಬೀಳುತ್ತಿತ್ತು. ಆಗ ಆ ಚಿಲುಮೆ ವೇಗವಾಗಿ ಹರಿಯತೊಡಗಿತು. ಅದರಿಂದ ಜನರು ಚೆನ್ನಾಗಿ ಪ್ರಯೋಜನ ಪಡೆದರು. ಅನಂತರ ಹಝ್ರತ್ ಪೈಗಂಬರ್(ಸ) ಹೇಳಿದರು: ಹೇ ಮುಆಧ್, ನಿನಗೆ ದೀರ್ಘಾಯುಸ್ಸು ಲಭಿಸಿದರೆ, ಈ ಜಾಗವು ತೋಟಗಳಿಂದ ತುಂಬಿರುವುದಾಗಿ ನೀನು ಕಾಣುವಿ. (ಸಹೀಹ್ ಮುಸ್ಲಿಮ್, ಕಿತಾಬುಲ್ ಫಝಾಎಲ್, ಹದೀಸ್–706)

ಹದೀಸಿನ ಗ್ರಂಥಗಳಿಂದ ತಿಳಿದುಬರುವುದೇನೆಂದರೆ, ಹಝ್ರತ್ ಪೈಗಂಬರ್(ಸ) ತಬೂಕಿಗೆ ತಲುಪಿದ ನಂತರ ಈ ದೃಷ್ಟಾಂತ ಉಂಟಾಗಿತ್ತು. ಈ ಘಟನೆ ತಬೂಕಿನಂದ ವಾಪಸ್ಸು ಬರುವಾಗ, ಮುಶಖ್ಖಖ್ ಎಂಬ ಕಣಿವೆಯಲ್ಲಿ ಆಯಿತೆಂದು ಸೀರತ್ ಇಬ್ನು ಹಿಶಾಮಿನಲ್ಲಿ ಬರೆಯಲಾಗಿದೆ. (ಅಸ್ಸೀರತುನ್ನಬವೀಯು ಲಿಇಬ್ನೆ ಹಿಶ್ಶಾಮ್, ಪುಟ–821–822, ದಾರುಲ್ ಕುತುಬ್ ಇಲ್‌ಮಿಯು ಬೈರೂತ್ 2001)

ಈ ಘಟನೆಯನ್ನು ಇಮಾಮ್ ಮಾಲಿಕ್ ತನ್ನ ಗ್ರಂಥವಾದ ಮೋತದಲ್ಲಿ ಸಹ ವಿವರಿಸಿರುವರು. ಮುಹಮ್ಮದ್ ಬಿನ್ ಅಬ್ದುಲ್‌ಬಾಖಿ ಝುರ್‌ಖಾನಿ ಈ ಹದೀಸಿನ ವಿವರಣೆಯಲ್ಲಿ ಹೀಗೆ ಬರೆದಿರುವರು: ಅಬೂವಲೀದ್ ಬಾಜಿ ಹೇಳುತ್ತಾರೆ: ಈ ಘಟನೆ ಅದೃಶ್ಯ ಕಾರ್ಯಗಳಲ್ಲಿ ಒಂದಾಗಿದೆ. ಹಝ್ರತ್ ಪೈಗಂಬರ್(ಸ) ಹಝ್ರತ್ ಮುಆಧ್‌ರೊಡನೆ ಇದರ ಬಗ್ಗೆ ವಿಶೇಷವಾಗಿ ಹೇಳಲು ಕಾರಣವೇನೆಂದರೆ, ನಂತರದ ಕಾಲದಲ್ಲಿ ಅವರು ಸಿರಿಯ ದೇಶಕ್ಕೆ ವಲಸೆಹೋಗಿದ್ದರು. ಅಲ್ಲೇ ಅವರು ನಿಧನರಾದರು. ಹಝ್ರತ್ ಮುಆಧ್(ರ) ಈ ಸ್ಥಳಕ್ಕೆ ಬಂದು ಇದನ್ನು ಕಾಣುವರು ಎಂಬುವುದರ ಬಗ್ಗೆ ಹಝ್ರತ್ ಪೈಗಂಬರರಿಗೆ ಅಲ್ಲಾಹನು ದಿವ್ಯವಾಣಿ ಮೂಲಕ ತಿಳಿಸಿದ್ದನು. ಆ ಕಣಿವೆ ಹಝ್ರತ್ ಪೈಗಂಬರರ(ಸ) ಅನುಗ್ರಹದ ಕಾರಣದಿಂದ ಮರಗಳಿಂದ ಮತ್ತು ತೋಟಗಳಿಂದ ತುಂಬುವುದು ಎಂದು ದಿವ್ಯವಾಣಿ ಮೂಲಕ ತಿಳಿಸಲಾಗಿತ್ತು.

ಅಲ್ಲಾಮ ಇಬ್ನು ವಿಸಾಲ್ ಹೇಳಿದ್ದಾಗಿ ಅಬ್ದುಲ್‌ಬರ್ರ್ ಹೇಳುತ್ತಾರೆ: ನಾನು ಈ ಚಿಲುಮೆಯ ಆಸುಪಾಸಿನ ಎಲ್ಲ ಸ್ಥಳಗಳನ್ನು ಕಂಡಿರುವೆನು. ಅಲ್ಲಿಯ ಮರಗಳ ಫಲವತ್ತತೆ ಮತ್ತು ತಾಜಾತನ ಎಷ್ಟಿತ್ತೆಂದರೆ, ಬಹುಶಃ

ಇವು ಹೀಗೆಯೇ ಖಿಯಾಮತ್ ತನಕ ಜಾರಿಯಲ್ಲಿರುವುವು ಎಂದು ತೋರುತ್ತದೆ. ಅವರ ಭವಿಷ್ಯನುಡಿಯೂ ಇದೇ ರೀತಿಯದ್ದಾಗಿತ್ತು.

(ಶರಹ್ ಅರ್‍ರ್ಝುರ್‌ಖಾನಿ ಅಲಲ್ ಮೌತಾ ಫಿಸ್ಸರೆ, ದಾರ್ ಅಹ್ಯಾಉತ್ತುರಾಸುಲ್ ಅರಬಿ ಬೈರೂತ್ 1997)

'ಅಟ್ಲಸ್ ಸೀರತುನ್ನಬಿ ಸಲ್ಲಲ್ಲಾಹು ಅಲೈಹಿ ವಸಲ್ಲಮ್'ನಲ್ಲಿ ಹೀಗೆ ಬರೆಯಲಾಗಿದೆ: ತಬೂಕಿನ ಶರೀಅತ್ ವಿಭಾಗದ ಅಧಿಕಾರಿ ಹೇಳುತ್ತಾರೆ: ಈ ಚಿಲುಮೆ ಎರಡು ವರ್ಷಗಳ ಹಿಂದಿನ ವರೆಗೆ, ಎಂದರೆ, 1,345 ವರ್ಷಗಳ ಕಾಲ ಹರಿಯುತ್ತಿತ್ತು. ಅನಂತರ ಇಳಿಜಾರು ಪ್ರದೇಶಗಳಲ್ಲಿ ಟ್ಯೂಬ್‌ವೆಲ್‌ಗಳನ್ನು ಅಳವಡಿಸಲಾಯಿತು. ಆಗ ಈ ಚಿಲುಮೆಯ ನೀರು ಟ್ಯೂಬ್‌ವೆಲ್‌ಗಳ ಮೂಲಕ ಹರಿಯತೊಡಗಿತು. ಸುಮಾರು 25 ಟ್ಯೂಬ್‌ವೆಲ್ಸ್‌ನಲ್ಲಿ ವಿತರಣೆಯಾದ ನಂತರ ಈಗ ಆ ಚಿಲುಮೆ ಒಣಗಿಹೋಯಿತು. ಅನಂತರ ಆ ಅಧಿಕಾರಿ ನಮ್ಮನ್ನು ಒಂದು ಟ್ಯೂಬ್‌ವೆಲ್ಲಿನ ಸಮೀಪಕ್ಕೆ ಕೊಂಡುಹೋದರು. ಅಲ್ಲಿ ನಾಲ್ಕು ಇಂಚಿನ ಒಂದು ಪೈಪ್ ಅಳವಡಿಸಿರುವುದನ್ನು ನಾವು ಕಂಡೆವು. ಯಾವುದೇ ಮೋಟರಿನ ಸಹಾಯವಿಲ್ಲದೆ ಅದರಿಂದ ನೀರು ಬಹಳ ವೇಗವಾಗಿ ಹೊರಬರುತ್ತಿತ್ತು. ಇದೇ ರೀತಿಯಲ್ಲಿ ಇತರ ಟ್ಯೂಬ್‌ವೆಲ್‌ಗಳಿಂದ ನೀರು ಬರುತ್ತಿತ್ತು. ಹಝ್ರತ್ ಪೈಗಂಬರರ(ಸ) ಈ ದೃಷ್ಟಾಂತದ ಬರ್ಕತಿನ ಕಾರಣದಿಂದ ಇಂದು ತಬೂಕಿನಲ್ಲಿ ಬಹಳ ನೀರು ಲಭ್ಯವಿದೆ. ಮದೀನ ಮತ್ತು ಖೈಬರ್ ಅಲ್ಲದೆ, ಬೇರೆಲ್ಲೂ ಇಷ್ಟು ನೀರನ್ನು ನಾವು ಕಂಡಿಲ್ಲ. ಬದಲಿಗೆ ಸತ್ಯವೇನೆಂದರೆ, ಈ ಎರಡು ಸ್ಥಳಗಳಿಗಿಂತ ಹೆಚ್ಚಿನ ನೀರು ತಬೂಕಿನಲ್ಲಿ ಇದೆ. ಈ ನೀರಿನಿಂದ ಪ್ರಯೋಜನ ಪಡೆದುಕೊಂಡು ತಬೂಕಿನಲ್ಲಿ ಎಲ್ಲ ಕಡೆ ತೋಟಗಳು ಇವೆ. ಹಝ್ರತ್ ಪೈಗಂಬರರ(ಸ) ಭವಿಷ್ಯವಾಣಿ ಪ್ರಕಾರ ತಬೂಕಿನ ಪ್ರದೇಶ ತೋಟಗಳಿಂದ ತುಂಬಿದೆ. ದಿನಕಳೆದಂತೆ ತೋಟಗಳು ವರ್ಧಿಸುತ್ತಿವೆ. (ಅಲಸ್ ಸೀರತುನ್ನಬಿ(ಸ), ಪುಟ-431, ದಾರುಸ್ಸಲಾಮ್ ರಿಯಾಝ್ 1424 ಹಿಜಿರಿ)

ಇವರ ಬಗ್ಗೆಗಿನ ಪ್ರಸ್ತಾಪದ ಉಳಿದ ಭಾಗವನ್ನು ಮುಂದಿನ ಬಾರಿ ಮಾಡಲಾಗುವುದು. ಇನ್‌ಶಾ ಅಲ್ಲಾಹ್.

ಇಂದು ಜುಮಾದ ನಂತರ ನಾನು ಕೆಲವು ಜನಾಝುಗಳನ್ನು ನಿರ್ವಹಿಸುತ್ತೇನೆ. ಅದರಲ್ಲಿ ಮೊದಲ ಪ್ರಸ್ತಾಪ ಮೌಲವಿ ಫರ್ಝಂದ್ ಖಾನ್ ಸಾಹಿಬ್‌ರದ್ದಾಗಿದೆ. ಒಡಿಶಾದ ಖೂರ್ದ ದುನಿಯಾಗಢ್ ಜಿಲ್ಲೆಯ ಮುಬಲ್ಲಿಗ್ ಇಂಚಾರ್ಜ್ ಆಗಿದ್ದರು. ಡೈಯಬಟೀಸ್ ರೋಗಿಯಾಗಿದ್ದರು. ಡಿಸೆಂಬರ್ 10ರಂದು ಅಚಾನಕ್ಕಾಗಿ ಟಾಯ್ಫೈಡ್ ಮತ್ತು ನಿಮೋನಿಯದ ಕಾರಣದಿಂದ ಅವರನ್ನು ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು. ಅಲ್ಲಿ ಅಲ್ಲಾಹನ ವಿಧಿ ಪ್ರಕಾರ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ದಿವಂಗತರು ಮೂಸಿಯಾಗಿದ್ದರು. ತನ್ನ ಪತ್ನಿಯಾದ ಸಕೀನ ಬೇಗಂ, ಒಬ್ಬ ಮಗಳಾದ ಫರೀಹ ಮತ್ತು ಒಬ್ಬ ಮಗನಾದ ರೈಹಾನ್‌ರನ್ನು ಅಗಲಿರುವರು. ಜಮಾಅತಿನ ಕೆಲಸಗಳಲ್ಲಿ ತುಂಬ ಮುಂದಿದ್ದರು. ದೇವಭಕ್ತಿಯಿದ್ದ, ತನ್ನ ಕೆಳಗೆ ಸೇವೆ ಮಾಡುತ್ತಿದ್ದ ಮುಬಲ್ಲಿಗರ ಮತ್ತು ಮಅಲ್ಲಿಮರ ಬಗ್ಗೆ ಶ್ರದ್ಧೆವಹಿಸುತ್ತಿದ್ದ ವ್ಯಕ್ತಿಯಾಗಿದ್ದರು. ಸೌಮ್ಯಸ್ವಭಾವಿ, ವಿನೀತ, ಹಸನ್ಮುಖಿ, ಬಹಳ ಉತ್ತಮ ಸ್ವಭಾವಿಯಾದ ಮತ್ತು ನಿಷ್ಠಾವಂತ ವ್ಯಕ್ತಿಯಾಗಿದ್ದರು. 1980ರಲ್ಲಿ ಜಾಮಿಅ ಖಾದಿಯಾನಿಗೆ ದಾಖಲಾದರು. 1988ರಲ್ಲಿ ತೇರ್ಗಡೆಯಾಗಿ ಕರ್ಮ ಮೈದಾನಕ್ಕೆ ಬಂದಿದ್ದರು. ಬಹಳ ಪರಿಶ್ರಮಿ, ನಿಷ್ಠೆ ಮತ್ತು ಅರ್ಪಣಾಭಾವದಿಂದ 32ವರ್ಷಗಳ ಕಾಲ ಸೇವೆ ಮಾಡುತ್ತಿದ್ದರು. ಈ ಕಾಲಾವಧಿಯಲ್ಲಿ ಹಲವು ಸ್ಥಳಗಳಲ್ಲಿ ಬೈಅತುಗಳನ್ನು ಮಾಡಿಸಿದ್ದರು ಮತ್ತು ಜಮಾಅತುಗಳನ್ನು ಸ್ಥಾಪಿಸಿದ್ದರು. ಅವರ ಪತ್ನಿಯಾದ ಸಕೀನ ಬೇಗಂ ಹೇಳುತ್ತಾರೆ: ಅವರ ಮೊದಲ ಪೋಸ್ಟಿಂಗ್ ಹರ್ಯಾಣದಲ್ಲಿ ಆಗಿತ್ತು. ವಾಸಿಸಲು ನಿಶ್ಚಿತ ಸ್ಥಳವೇನೂ ಇರಲಿಲ್ಲ. ಆ ಪ್ರದೇಶದಲ್ಲಿ ಯಾರೇ ಅಹ್ಮದಿಯರು ಇದ್ದಿರಲಿಲ್ಲ. ಅವರು ವಿವಿಧ ಸ್ಥಳಗಳಲ್ಲಿ ಸುತ್ತಾಡಿ ತಬ್ಲೀಗ್ ಮಾಡುತ್ತಿದ್ದರು ಮತ್ತು ಸೆಂಟರ್ ಸ್ಥಾಪಿಸುತ್ತಿದ್ದರು. ಹೀಗೆ ಒಮ್ಮೆ ಹರ್ಯಾಣದ ಒಂದು ಗ್ರಾಮದಲ್ಲಿ ತಲುಪಿ, ಅಲ್ಲಿಯ ಜನರಿಗೆ ಜಮಾಅತಿನ ಸಂದೇಶವನ್ನು ನೀಡಿದ್ದರು. ಒಂದು ಸಲ ಅಲ್ಲಿಯ ಒಬ್ಬ ಸ್ಥಳೀಯ ವ್ಯಕ್ತಿ ಇವರ ಬಳಿ ಬಂದು ಹೇಳಿದರು: ನನ್ನ ಎಮ್ಮೆ ಹಾಲನ್ನು ನೀಡುತ್ತಿಲ್ಲ, ನಿಮ್ಮ ಜಮಾಅತ್ ಸತ್ಯವೆಂದಾದರೆ, ನೀವು ಏನನ್ನಾದರೂ ದಮ್ ಮಾಡಿಕೊಡಿರಿ, ನನ್ನ ಎಮ್ಮೆ ಹಾಲುಕೊಡುವಂತಾಗಲು ನಾನು ಅದನ್ನು ಎಮ್ಮೆಗೆ ಕುಡಿಸುತ್ತೇನೆ. ಇದು ಫಲಿಸಿದರೆ, ನಾನು ಕುಟುಂಬ ಸಮೇತ ಬೈಅತ್ ಮಾಡುತ್ತೇನೆ. ಹೇಗಿದ್ದರೂ ಮೌಲವಿ ಸಾಹಿಬರು ಹೇಳುತ್ತಾರೆ: ನಾನು ಸೂರಃ ಫಾತಿಹ, ದುರೂದ್ ಶರೀಫ್ ಮತ್ತು ಕೆಲವು ದುಆಗಳನ್ನು ಓದಿ, ನೀರಿನಲ್ಲಿ ದಮ್ ಮಾಡಿ ಅವರಿಗೆ ಕೊಟ್ಟೆ. ಅವರು ಆ ನೀರನ್ನು ತೆಗೆದುಹೋದರು. ರಾತ್ರಿ ಪೂರ್ತಿ ಅದೇ ಗ್ರಾಮದಲ್ಲಿ, ಒಂದು ಮರದ ಕೆಳಗೆ ಕುಳಿತುಕೊಂಡು ದುಆ ಮಾಡುತ್ತಿದ್ದೆ. ಹಝ್ರತ್ ಮಸೀಹ್ ಮೌಊದ್(ರ) ಸತ್ಯತೆಯನ್ನು ಸಾಬೀತುಪಡಿಸು ಎಂದು ಪ್ರಾರ್ಥಿಸುತ್ತಿದ್ದೆ. ಮುಂಜಾನೆ ಒಬ್ಬ ವ್ಯಕ್ತಿ ಬಕೆಟ್ ಹಿಡಿದು ಬರುತ್ತಿರುವುದಾಗಿ ಕಂಡೆನು. ಅದರಲ್ಲಿ ಹಾಲಿತ್ತು. ಅವರು ಖುಶಿಯಿಂದ ಹೇಳಿದರು: ಮೌಲವಿ ಸಾಹಿಬ್ ನಮ್ಮ ಎಮ್ಮೆ ಹಾಲನ್ನು ಕೊಟ್ಟಿದೆ. ಅಹ್ಮದಿಯಾ ಜಮಾಅತ್ ಸತ್ಯವಾದ ಜಮಾಅತ್ ಎಂದು ನಾನು ಮತ್ತು ನನ್ನ ಕುಟುಂಬಕ್ಕೆ ಮನವರಿಕೆಯಾಗಿದೆ. ನಾವು ಈ ಜಮಾಅತಿನಲ್ಲಿ ಬೈಅತ್ ಮಾಡಿ ಸೇರುತ್ತೇವೆ.

ಮೌಲವಿ ಸಾಹಿಬರ ಮಗನಾದ ರೈಹಾನ್ ಹೇಳುತ್ತಾರೆ: ಇವರಲ್ಲಿ ವಿನಯ ಮತ್ತು ನಮ್ರತೆ ತುಂಬ ಇತ್ತು. ಬಹಳ ಮೃದುಹೃದಯಿಯಾಗಿದ್ದರು. ಪ್ರತಿಯೊಬ್ಬರೊಂದಿಗೆ ಪ್ರೀತಿ ಮತ್ತು ಪ್ರೇಮದಿಂದ ವರ್ತಿಸುತ್ತಿದ್ದರು. ಅಲ್ಲಾಹನ ಸಂಪ್ರೀತಿ ಮತ್ತು ಜಮಾಅತಿನ ಸೇವೆಗಾಗಿ ಜೀವಿತವನ್ನು ಅರ್ಪಿಸಿದ್ದರು. ಖಲೀಫರ ಪ್ರತಿಯೊಂದು ನಿರ್ದೇಶನ ಮತ್ತು ಉಪದೇಶದಂತೆ ವರ್ತಿಸುತ್ತಿದ್ದರು. ನಮ್ಮನ್ನು ಸಹ ಅದರ ತಾಕೀತು ಮಾಡುತ್ತಿದ್ದರು. ಯಾವಾಗಲೂ ದಯೆ ಮತ್ತು ಪ್ರೀತಿಯಿಂದ ನಮ್ಮೊಡನೆ ವರ್ತಿಸುತ್ತಿದ್ದರು. ಜಮಾಅತಿನ ಕೆಲಸಗಳೊಂದಿಗೆ ಮನೆಯ ಕೆಲಸಗಳಲ್ಲಿ ಸಹ ನೆರವಾಗುತ್ತಿದ್ದರು. ತಾಯಿಗೆ ನೆರವು ನೀಡುತ್ತಿದ್ದರು. ಜೀವಿತ ಪೂರ್ತಿ ನಮಾಝ್ ಬಗ್ಗೆ ಶ್ರದ್ಧೆವಹಿಸುತ್ತಿದ್ದರು ಮತ್ತು ನಮ್ಮನ್ನು ನಮಾಝಿನ ಕಡೆಗೆ ಗಮನಹರಿಸುತ್ತಿದ್ದರು. ಯಾವಾಗಲೂ ನೇರವಾದ ಮಾರ್ಗದಲ್ಲಿ ನಡೆಯಲು ಹೇಳುತ್ತಿದ್ದರು. ಅವರೊಂದಿಗೆ ಕೆಲಸಮಾಡುತ್ತಿದ್ದ ಎಲ್ಲ ಮುಅಲ್ಲಿಮ್ ಮತ್ತು ಮುಬಲ್ಲಿಗರು ಹೇಳುತ್ತಿರುವುದೇನೆಂದರೆ, ಅವರು ಒಬ್ಬ ಮಾದರಿಯಾದ ಮುಬಲ್ಲಿಗ್ ಆಗಿದ್ದರು. ಎಲ್ಲರೊಂದಿಗೆ ಸಹಾನುಭೂತಿಯನ್ನು ಹೊಂದಿದ್ದರು. ಎಂದಿಗೂ ನಾವು ಅವರನ್ನು ಕೋಪದಿಂದ ಕಂಡಿರಲಿಲ್ಲ.

ಮುಂದಿನ ಜನಾಝ ಅಬ್ದುಲ್ಲಾಹ್ ಮೌಸೀಕೋ ಸಾಹಿಬ್. ಇವರು ಮಲೇಶ್ಯದ ಲೋಕಲ್ ಮುಬಲ್ಲಿಗ್ ಆಗಿದ್ದರು. ಅಕ್ಟೋಬರ್ 7ರಂದು ಪ್ರಜ್ಞೆತಪ್ಪಿದ ಕಾರಣದಿಂದ ಆಸ್ಪತ್ರೆಗೆ ಕೊಂಡುಹೋಗಲಾಯಿತು. ಅದೇ ರಾತ್ರಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅವರಿಗೆ 68 ವರ್ಷ ಪ್ರಾಯವಿತ್ತು. ದಿವಂಗತರು ಮೂಸಿಯಾಗಿದ್ದರು. ಪತ್ನಿಯನ್ನು ಮತ್ತು ಎಂಟು ಮಕ್ಕಳನ್ನು ಅಗಲಿರುವರು. ಅವರು ಮಲೇಶಿಯದ ಎರಡು ಮುರಬ್ಬಿಯರಾದ ಸಲಾಹುದ್ದೀನ್ ಸಾಹಿಬ್ ಮತ್ತು ಮಸ್ರೂರ್ ಸಾಹಿಬರ ಮಾವವಾಗಿದ್ದರು. ಅಬ್ದುಲ್ಲಾಹ್ ಮೌಸೀಕೋ ಸಾಹಿಬರು ಫಿಲಿಪ್ಪೈನಿನಲ್ಲಿ ಹುಟ್ಟಿದ್ದರು. ಯೂನಿವರ್ಸಿಟಿಯಿಂದ ತೇರ್ಗಡೆಯಾದ ನಂತರ ಮುಸ್ಲಿಮ್ ಆರ್ಗನೈಝೇಶನ್ ಮೋರೊ ನೇಶನಲ್ ಲಿಬರಲ್ ಫ್ರಂಟ್‌ನಲ್ಲಿ ಸೇರಿದ್ದರು. ಈ ಸಂಸ್ಥೆ ಆಡಳಿತದ ವಿರುದ್ಧ ಕಾರ್ಯನಿರತವಾಗಿತ್ತು. ಫಿಲಿಪ್ಪೈನಿನಲ್ಲಿ ಇಸ್ಲಾಮಿನ ಸರ್ಕಾರ ಸ್ಥಾಪಿಸುವುದಾಗಿತ್ತು ಇದರ ಉದ್ದೇಶ. 1973ರಲ್ಲಿ ಇವರ ತಂದೆ ಫಿಲಿಪ್ಪೈನಿನಿಂದ ಮಲೇಶಿಯಾಗೆ ಹೋದರು. ಸಂದಾಕುನ್ ಸಬಾ ಎಂಬ ಸ್ಥಳದಲ್ಲಿ ನೆಲೆಸಿದ್ದರು. ಹೇಗಿದ್ದರೂ ಅಬ್ದುಲ್ಲಾಹ್ ಸಾಹಿಬರಿಗೆ ಅಲ್ಲಾಹನು ಪರಿಶುದ್ಧವಾದ ಹೃದಯವನ್ನು ಕೊಟ್ಟಿದ್ದನು. ಇವರು ಹಲವು ಬಾರಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು, ಖಲೀಫತುಲ್ ಮಸೀಹ್ ಸಾನಿ ಮತ್ತು ಖಲೀಫತುಲ್ ಮಸೀಹ್ ಸಾಲಿಸ್‌ರನ್ನು ಕನಸಿನಲ್ಲಿ ಕಂಡಿದ್ದರು. ಅಲ್ಲಾಹನ ಇಚ್ಛೆ ಪ್ರಕಾರ, ಅವರಿಗೆ 1973ರಲ್ಲಿ ಜಲಸಾ ಸಾಲಾನ ಕೀನಾಬಾಲುನಲ್ಲಿ ಭಾಗವಹಿಸಲು ಸೌಭಾಗ್ಯ ಲಭಿಸಿತ್ತು. ಜಲ್ಸವನ್ನು ಮತ್ತು ಅಲ್ಲಿಯ ವಾತಾವರಣವನ್ನು ನೋಡಿ ಅವರಿಗೆ ಅದು ವಿಶ್ವಾಸವರ್ಧನೆಗೆ ಕಾರಣವಾಯಿತು. ಹೀಗೆ ಅವರು ಬೈಅತ್ ಮಾಡಿದರು. ಅವರಿದ್ದ ಸ್ಥಳವಾದ ಸಂದಾಕುನಿನಲ್ಲಿ ಮುಬಲ್ಲಿಗ್ ಆಗಿ ಯಾರೂ ಇದ್ದಿರಲಿಲ್ಲ. ಸತ್ಯ ಅರಿಯುವ ದಾಹವಿದ್ದ ಕಾರಣದಿಂದ ಜಮಾಅತಿನ ಸಾಹಿತ್ಯಗಳನ್ನು ತುಂಬ ಓದಿದರು. ಅವರಿಗೆ ತಬ್ಲೀಗ್ ಮಾಡುವ ಆವೇಶವಿತ್ತು. ಈ ಆವೇಶದ ಕಾರಣದಿಂದ ತಮ್ಮ ಸ್ನೇಹಿತರಿಗೆ, ಸಂಬಂಧಿಕರಿಗೆ ಮತ್ತು ತಮ್ಮ ಪ್ರದೇಶದಲ್ಲಿ ತುಂಬ ತಬ್ಲೀಗ್ ಮಾಡಿದ್ದರು. ಇದರ ಕಾರಣದಿಂದ ಹಲವರು ಜಮಾಅತಿನಲ್ಲಿ ಸೇರಿದ್ದರು. ಇಸ್ಲಾಮಿಗೆ ಬಂದುಸೇರಿದರು. ಈ ತಬ್ಲೀಗಿನ ಆವೇಶದ ಕಾರಣದಿಂದ ವಖ್ಫ್ ಸಹ ಮಾಡಿದ್ದರು. ಅನಂತರ ಮುಬಲ್ಲಿಗ್ ಎಂಬ ನೆಲೆಯಲ್ಲಿ ಅವರ ಪೋಸ್ಟಿಂಗ್ ಆಯಿತು. ಹೀಗೆ ಅವರಿಗೆ ಫಿಲಿಪ್ಪೈನಿನಲ್ಲಿ ಕೆಲವು ವರ್ಷಗಳು ಖೈರುದ್ದೀನ್ ಮಾರೂಸ್‌ರೊಂದಿಗೆ ಸೇವೆ ಮಾಡಲು ಸೌಭಾಗ್ಯ ಲಭಿಸಿತ್ತು. ಹೇಗಿದ್ದರೂ, ತಮ್ಮ ಉತ್ತಮ ಸ್ವಭಾವ, ಅರಿವಿನ ಬಗ್ಗೆ ಆಸಕ್ತಿ, ವಿನಯ, ವಿನಮ್ರತೆ ಮತ್ತು ಅಲ್ಲಾಹನ ಮೇಲೆ ಇದ್ದ ಭಯಭಕ್ತಿಯ ಕಾರಣದಿಂದ ಅಲ್ಲಿಯೂ ತುಂಬ ಕೆಲಸಮಾಡಿದ್ದರು. ಕ್ರೈಸ್ತರೊಂದಿಗೆ ಸಹ ಸಂವಾದ ಮಾಡುತ್ತಿದ್ದರು. ಹಲವು ಜನರನ್ನು ಇಸ್ಲಾಮಿನ ಮಡಿಲಿಗೆ ತಂದರು. ಉರ್ದು ಗೊತ್ತಿರಲಿಲ್ಲ. ಆದರೆ, ಉರ್ದು ಕಲಿಯುವ ಅಭಿಲಾಷೆ ಮತ್ತು ಆಸಕ್ತಿಯಿತ್ತು. ಹಲವು ಉರ್ದು ಉಲ್ಲೇಖಗಳು ಮತ್ತು ಪದ್ಯಗಳು ಕಂಠಪಾಠ ಮಾಡಿದ್ದರು. ಅತಿಥಿ ಸತ್ಕಾರದ ಗುಣವನ್ನು ತುಂಬ ಹೊಂದಿದ್ದರು. ಜುಮಾಗೆ ಬರುವವರನ್ನು ವಿಶೇಷವಾಗಿ ಸತ್ಕರಿಸುತ್ತಿದ್ದರು. ಶಿಸ್ತಿನ ವ್ಯಕ್ತಿಯಾಗಿದ್ದರು. ಪ್ರತಿಯೊಬ್ಬರೂ ಶಿಸ್ತಿನಿಂದ ಇರಬೇಕೆಂದು ಬಯಸುತ್ತಿದ್ದರು. ಅದರ ಪ್ರಕಾರ ಇತರರನ್ನು ತರಬೇತಿ ಮಾಡುತ್ತಿದ್ದರು. ಕೆಲವು ವರ್ಷಗಳಿಂದ ನಡೆಯುವುದರಲ್ಲಿ ತೊಂದರೆ ಅನುಭವಿಸುತ್ತಿದ್ದರು. ಆದಾಗ್ಯೂ ಈ ಕಷ್ಟತೆಯನ್ನು ತಮ್ಮ ಕೆಲಸಕ್ಕೆ ತಡೆಯಾಗಿ ನಿಲ್ಲಲ್ಲು ಬಿಟ್ಟಿರಲಿಲ್ಲ.

ಮೂರನೇ ಜನಾಝ ಅಬ್ದುಲ್‌ವಾಹಿದ್ ಸಾಹಿಬ್‌ರದ್ದಾಗಿದೆ. ಇವರು ಖಾದಿಯಾನಿನ ಮುಅಲ್ಲಿಮ್ ಜಮಾಅತಾಗಿದ್ದರು. ಸೆಪ್ಟೆಂಬರ್ 12ರಂದು 56 ವರ್ಷ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಇವರು ಕ್ರೈಸ್ತ ಕುಟುಂಬಕ್ಕೆ ಸೇರಿದ್ದವರಾಗಿದ್ದರು. ಇವರ ಕುಟುಂಬದಲ್ಲಿ ಮೊಟ್ಟಮೊದಲಾಗಿ ಇವರ ಹಿರಿಯ ಸಹೋದರರಿಗೆ ಬೈಅತ್ ಮಾಡಲು ಸೌಭಾಗ್ಯ ಲಭಿಸಿತ್ತು. ಅನಂತರ ಪೂರ್ತಿ ಕುಟುಂಬದವರು ಬೈಅತ್ ಮಾಡಿದ್ದರು. ಅಹ್ಮದಿಯ್ಯತ್ ಸ್ವೀಕರಿಸಿದ ನಂತರ ದಿವಂಗತ ಅಬ್ದುಲ್‌ವಾಹಿದ್ ಸಾಹಿಬರು ಜಾಮಿಅತುಲ್ ಮುಬಶ್ಶಿರೀನಿನಲ್ಲಿ ಮೂರು ವರ್ಷದ ಕೋರ್ಸ್ ಪೂರ್ತಿಮಾಡಿದ್ದರು. ಅನಂತರ ವಿವಿಧ ಪ್ರದೇಶಗಳಿಗೆ ತಬ್ಲೀಗಿಗಾಗಿ ಹೋದರು. ಖಾದಿಯಾನಿನ ಹಲವು ಪ್ರದೇಶಗಳಲ್ಲಿ ಅವರಿಗೆ ತಾಲೀಮ್ ಮತ್ತು ತರ್ಬಿಯತ್ತಿನ ಮಾಡುವ ಕೆಲಸವನ್ನು ಒಪ್ಪಿಸಲಾಗಿತ್ತು. ಬಹಳ ವಿಧೇಯರಾದ, ಮಗ್ನತೆಯಿಂದ ಕೆಲಸಮಾಡುವರಾಗಿದ್ದರು. ತಬ್ಲೀಗ್ ಮಾಡುವ ಉತ್ತಮ ಸಾಮರ್ಥ್ಯವನ್ನು ಹೊಂದಿದ್ದರು. ಇವರ ಮೂಲಕ ಮೂರು ಕ್ರೈಸ್ತ ಕುಟುಂಬಗಳು ಮತ್ತು ಮೂರು ಅಹ್ಮದಿಯೇತರ ಕುಟುಂಬಗಳು ಜಮಾಅತಿನಲ್ಲಿ ಸೇರಿದ್ದುವು. ಇವರಲ್ಲಿ ಎರಡು ವ್ಯಕ್ತಿಗಳು ಅಲ್ಲಾಹನ ಅನುಗ್ರಹದಿಂದ ಮೂಸಿ ಸಹ ಆಗಿರುವರು. ಎಂದರೆ, ಅವರು ಜಮಾಅತಿನಲ್ಲಿ ಪ್ರವೇಶಿಸಿದ್ದರು ಎಂದು ಮಾತ್ರವಲ್ಲ, ಸತ್ಕರ್ಮಗಳಲ್ಲಿ ಸಹ ಮುಂದಿದ್ದಾರೆ. ಇವರು ತನ್ನ ಪತ್ನಿ, ಒಬ್ಬ ಮಗನು ಮತ್ತು ಇಬ್ಬರು ಹೆಣ್ಮಕ್ಕಳನ್ನು ಅಗಲಿರುವರು. ಇವರ ಒಬ್ಬ ಮಗನು ಈ ವರ್ಷ ಜಾಮಿಅ ಅಹ್ಮದಿಯಾದಿಂದ ತೇರ್ಗಡೆಯಾಗಿದ್ದಾನೆ.

ಅಲ್ಲಾಹನು ಎಲ್ಲ ದಿವಂಗತರ ಪದವಿಗಳನ್ನು ಉನ್ನತಗೊಳಿಸಲಿ. ಅಲ್ಲಾಹನು ಇವರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ. ಇವರೆಲ್ಲರ ಮಕ್ಕಳಿಗೂ ಅವರ ಸತ್ಕರ್ಮಗಳನ್ನು ಜಾರಿಯಲ್ಲಿರಿಸಲು ಸೌಭಾಗ್ಯ ಲಭಿಸಲಿ. ಅವರನ್ನು ತರಬೇತಿ ಮಾಡಲಾದ ರೀತಿಯಲ್ಲಿ, ಅವರ ಉತ್ತಮ ಅಭಿಲಾಷೆಗಳಂತೆ ಅವರ ಮಕ್ಕಳನ್ನು ಮಾಡಲಿ. ಇವರಲ್ಲಿ ಕೆಲವು ಮಕ್ಕಳು ವಖ್‌ಫ್ ಝಿಂದಗಿಯಾಗಿರುವರು. ಇವರು ಖಿಲಾಫತಿನ ಸರಿಯಾದ ಸಹಾಯಕರಾಗುವಂತಾಗಲಿ. ಅಲ್ಲಾಹನು ಇವರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ. ನಾನು ಹೇಳಿದಂತೆ, ಜುಮಾ ನಮಾಝ್ ನಂತರ ಇವರ ಜನಾಝ ನಮಾಝನ್ನು ನಿರ್ವಹಿಸುತ್ತೇನೆ.

***************

*(ಪುಟ ಸಂಖ್ಯೆ 12ರ ಉಳಿದ ಭಾಗ)*

ಆಗಿರುತ್ತದೆ. ಅದು ಸಕ್ಕರೆ ಮತ್ತು ಸಿಗರೇಟು ಸೇದುವುದರಿಂದ ಆಗುತ್ತದೆ. ಈಗ Platelets ಕೆಟ್ಟ ನಾಳದ ಗೋಡೆಯ ಸಮೀಪ ಜಮಾಗೋಡು ರಂಧ್ರವನ್ನು ಮುಚ್ಚುವ ಪ್ರಯತ್ನ ಮಾಡುತ್ತವೆ. ಮತ್ತು ತನ್ನ ಒಳಗಿನಿಂದ ಹಲವು ಜೀವಸತ್ವಗಳನ್ನು ತೆಗೆಯುತ್ತವೆ. ಅದು ಮೊದಲೇ ಅಲ್ಲಿ ಸಂಗ್ರಹಿಸುತ್ತದೆ.

ಈ ಕ್ರಿಯೆಯಲ್ಲಿ monocytes ನಮ್ಮ platelets ನತ್ತ ತನ್ನ ಮುಖ ತಿರುಗುತ್ತವೆ ಮತ್ತು migration ಪ್ರಾರಂಭವಾಗುತ್ತದೆ. ಈಗ ಇವೆಲ್ಲ ರಕ್ತ, ರಕ್ತನಾಳದ ಗೋಡೆಯ ಒಳಗೆ ಹೋಗುತ್ತದೆ. ಅದೇ ಸಮಯ ಇರುವ monocytes macrophages ನಲ್ಲಿ ಪರಿವರ್ತಿತಗೊಳ್ಳುತ್ತವೆ ಮತ್ತು ಈ platelets ಹಾಗೂ Fat ಅನ್ನು ತಿಂದು foam cells ಆಗುತ್ತವೆ. ಅವು ತನ್ನೊಳಗೆ Fat ಸಂಗ್ರಹಿಸಿಕೊಳ್ಳುತ್ತವೆ. ಎಷ್ಟು ಅಧಿಕ Fat ಇರುವುದು ಅಷ್ಟೇ ಪ್ರಮಾಣದಲ್ಲಿ ದಪ್ಪವಾಗುವುದು ಮತ್ತು ರಕ್ತನಾಳವನ್ನು ಇನ್ನು ಕುಗ್ಗಿಸುತ್ತವೆ. ಇವೆಲ್ಲ ಕ್ರಿಯೆಯಲ್ಲಿ ದೊಡ್ಡ ನಷ್ಟವೆಂದರೆ ರಕ್ತಚಲನೆಯ ಮೇಲೆ ಪರಿಣಾಮ ಉಂಟಾಗುತ್ತಿದೆ.

ಅವರು ಹೇಳಿದರು. ನಮ್ಮ Research ಏನಾಗಿದೆ ಎಂದರೆ ನಾವು ರಕ್ತವಾಹಿನಿಯಲ್ಲಿ ಅದು ಅಂತಿಮವಾಗಿ Plaques ಆಗಿ ಹೃದಯ ರೋಗಕ್ಕೆ ಕಾರಣವಾಗುತ್ತದೆ. ನಡೆಯಬಹುದೇ? ಅದರಲ್ಲಿ ಎರಡು ಮಾರ್ಗಗಳಿವೆ. ಒಂದು Platelets ನಿಂದ ಜೀವಸತ್ವಗಳು ಹುಟ್ಟುತ್ತಲೇ ಯಾವುದೇ ಔಷಧಿಯಿಂದ ಅಂತ್ಯಗೊಳಿಸಬೇಕು ಅಥವಾ monocytes ಮೇಲೆ ಇರುವ ಅದರ Neseptoms ಗಳನ್ನು ಬ್ಲಾಕ್ ಮಾಡಬೇಕು. ಈ ಎರಡೂ ವಿಧಗಳಿಂದ ನಾವು antibodies ಬಳಕೆ ಮಾಡಿ Test ಮಾಡಿದ್ದೇವೆ. ಪರಿಣಾಮವೇನಾಯಿತೆಂದರೆ ಅವುಗಳನ್ನು ತಡೆದು ಕಡಿಮೆ monocytes ಬರುತ್ತವೆ ಮತ್ತು feam cells ಕಡಿಮೆಯಾಗುತ್ತವೆ. ಇನ್ನು ಈ reserch ಪ್ರಾಥಮಿಕ ಹಂತದಲ್ಲಿದೆ. ಅದರಲ್ಲಿಯೂ ಔಷಧಿ ಮಾರ್ಕೆಟ್‌ನಲ್ಲಿ ಬರಲು ಅಧಿಕ ಸಮಯ ಹಿಡಿಯಬಹುದಾಗಿದೆ. ಆದುದರಿಂದ ಉತ್ತಮ ಮಾರ್ಗವೆಂದರೆ ಕಡಿಮೆ Fat ಇರುವ ಆಹಾರ ಸೇವನೆ, ಸಿಗರೇಟ್‌ನಿಂದ ದೂರವಿದ್ದು ವ್ಯಾಯಾಮ ಮಾಡುವ ಮೂಲಕ ಈ ಹೃದಯ ಸಂಬಂಧಿತ ರೋಗಗಳಿಂದ ಉಳಿಯಬಹುದಾಗಿದೆ.

ಹುಝೂರ್ ಹೇಳಿದರು. ಸಿಗರೇಟ್ ನಿಷೇಧ, ವ್ಯಾಯಾಮ ಮತ್ತು ಕಡಿಮೆ Fat ಇರುವ ಆಹಾರ, ದಕ್ಷಿಣ ಅಮೇರಿಕೆಯಲ್ಲಿ ಜನರು Fat ಜೊತೆಯಲ್ಲಿ Beaf ತಿನ್ನುತ್ತಾರೆ. ಆದರೆ ಈ ಕ್ಷೇತ್ರಗಳ ಜನರು Hard work ಮಾಡುವವರಾಗಿದ್ದಾರೆ. Red Indian ಆದವರು ಅಮೇರಿಕದ ಕೆಲ ಪ್ರದೇಶದವರು ಮತ್ತು ಮೆಕ್ಸಿಕೋದಲ್ಲಿ ವಿಶೇಷವಾಗಿ ನಾನು ನೋಡಿದ್ದೇನೆ. ಅವರಿಗೆ Heart Attack ಆಗುವುದು ತೀರ ಕಡಿಮೆ Fat ಸಹ ಕಡಿಮೆ. Research ಮಾಡಿದಾಗ ತಿಳಿದು ಬಂತು. ಅವರು ಮೊಸರು ಹೆಚ್ಚು ಬಳಸುತ್ತಾರೆ ಎಂದು. ಇನ್ನು olive oil ಹೆಚ್ಚು ಬಳಸುತ್ತಾರೆ. olive oil ಹೆಚ್ಚು ಬಳಕೆ ಇರುವ ಪ್ರದೇಶಗಳಲ್ಲಿ ಹೃದಯ ರೋಗಗಳು ಆಗುವುದು ಕಡಿಮೆ. ಮನೆಯಲ್ಲಿಯೇ ಕುಳಿತುಕೊಂಡು ಊಟ ಮಾಡುತ್ತಿರುವ ಜನರು ಇದರ ಹೊರತಾಗಿದೆ. ಈಗ ತುಂಬ ಸವಲತ್ತುಗಳಾಗಿವೆ. ನೀವು ಇಗ ಸ್ವಲ್ಪ ದೂರ ಹೋಗಬೇಕಾದರೂ ಕಾರಿನಲ್ಲಿ ಹೋಗುತ್ತೀರಿ. ಪುರಾತನ ಕಾಲದಲ್ಲಿ ದೀರ್ಘವಾದ ಪ್ರವಾಸ ಮಾಡುತ್ತಿದ್ದರು.

ನಾನು ಘಾನಾದಲ್ಲಿ ಇರುವಾಗ ಅಲ್ಲಿ ಒಬ್ಬ ಅಹ್ಮದಿ ಇದ್ದ. ಅವನು ಹೇಳುತ್ತಿದ್ದ ಅವನ ತಂದೆ ತಿಂಗಳಿನಲ್ಲಿ ಕನಿಷ್ಠ ಎರಡು ಸಲ ಕೆಲಸಕ್ಕಾಗಿ ಮತ್ತು ತನ್ನ ಸಂಬಂಧಿಕರನ್ನು ಬೇಟಿ ಮಾಡಲು ಪ್ರಯಾಣ ಮಾಡುತ್ತಿದ್ದನು. ಅದರ ದೂರ 70 ಮೈಲಿನಷ್ಟಿತ್ತು. ಆ ಜನರು ತಿನ್ನುತ್ತಿದ್ದರು ಮತ್ತು Exercise ಸಹ ಮಾಡುತ್ತಿದ್ದರು ಮತ್ತು ನಡೆದಾಡುತ್ತಿದ್ದರು. ಈಗ ನಾವು ಊಟ ಮಾಡುತ್ತವೆ ಮತ್ತು ಕಾರಿನಲ್ಲಿ ಕುಳಿತುಕೊಳ್ಳುತ್ತೇವೆ. ಎಷ್ಟು ದೊಡ್ಡ ಕಾರು ಇರುತ್ತದೆಯೋ ಅಷ್ಟೆ ದೊಡ್ಡಸ್ತಿಕೆ ತೋರಿಸುವ ಪ್ರಯತ್ನ ಮಾಡುತ್ತೇವೆ. ನಾವು ಕಾರಿನಲ್ಲಿ ಕುಳಿತುಕೊಂಡು ಇನ್ನೊಬ್ಬರಿಗೆ ದೊಡ್ಡಸ್ತಿಕೆ ತೋರಿಸಿ ತಮ್ಮ ಆರೋಗ್ಯ ಹಾಳು ಮಾಡಿಕೊಳ್ಳುತ್ತಿದ್ದೇವೆ ಎಂಬ ಅರಿವು ನಮಗಿರುವುದಿಲ್ಲ. ಆದುದರಿಂದ cycling exercise ಮತ್ತು ಅದೇ ರೀತಿಯ ಬೇರೆ ಕೆಲಸಗಳು ಆಗಬೇಕಾಗಿದೆ. ನಗರಗಳಲ್ಲಿ Horse Riding ನೀವು ಮಾಡಲು ಸಾಧ್ಯವಿಲ್ಲ. ಕನಿಷ್ಠ ಪಕ್ಷ Cycling ಆದರೂ ಮಾಡುತ್ತಿರಿ. ವಿದ್ಯಾರ್ಥಿಗಳು ಆದಷ್ಟು ಹೆಚ್ಚು cycling ಮಾಡಲು ಪ್ರಾರಂಭಿಸಿದರೆ ಒಳ್ಳೆಯದಾಗಬಹದು. ಕೆಲ ಹುಡುಗರಿಗೆ ಇದರ ಹವ್ಯಾಸವಿರುವುದನ್ನು ನಾನು ಕಂಡಿದ್ದೇನೆ. ಕೆಲವರಿಗಂತೂ craze ಆಗಿಬಿಟ್ಟಿದೆ. ಅದರಲ್ಲಿ ಹಲವು ಹುಡುಗರು ಹತ್ತು ಹತ್ತು, ಇಪ್ಪತ್ತಿಪ್ಪತ್ತು ಕಿ.ಗ್ರಾಂ ತೂಕ ಕಡಿಮೆ ಮಾಡಿಕೊಂಡಿದ್ದಾರೆ ಮತ್ತು ಅವರ ಆರೋಗ್ಯವು ಸುಧಾರಿಸಿದೆ.

ಹುಝೂರ್ ಹೇಳಿದರು. Smoking ಮಾಡುವವರು ಎಷ್ಟು ಮೂರ್ಖರಾಗಿದ್ದಾರೆಂದರೆ ಅದರ ಮೇಲೆ ಆರೋಗ್ಯಕ್ಕೆ ಹಾನಿಕರ ಎಂದು ಬರೆದದ್ದು ನೋಡಿಯೇ ಸೇದುತ್ತಾರೆ. ಆದುದರಿಂದ ಅಹ್ಮದಿ ಹುಡುಗರು ಪ್ರಯತ್ನ ಮಾಡಬೇಕಾಗಿದೆ. ಅದರ ವಿರುದ್ಧ ಹೋರಾಟ ನಡೆಸಬೇಕಾಗಿದೆ. smoking ಅಭ್ಯಾಸವಿದ್ದವರಿಗೆ ತಿಳಿಸಿ ಸಮಜಾಯಿಸಿ ನಿಲ್ಲಿಸಲು ಪ್ರಯತ್ನಪಡಬೇಕು. ಅಂತೂ ಇದು ನಿಮ್ಮ ಪ್ರಾಥಮಿಕ ಹಂತದ Research ಆಗಿದೆ. ಸದಸ್ಯ ಅದನ್ನು ತಿಳಿಸಲು ಈವು ಅಂಜೊಯೋಪ್ಲಾಸ್ಟ್ ಮಾಡುತ್ತೀರಿ. ಕೆಲವೊಮ್ಮೆ ಸಿಗುವುದಿದ್ದಲ್ಲಿ ಇದು ಕಷ್ಟವಾಗುತ್ತದೆ: ಆಗ ಒಬ್ಬ ಖಾದಿಮ್ ಹೇಳಿದರು. ಹುಝೂರ್ ಅಲ್ಲಿ Balcoming ಮಾಡಲಾಗುತ್ತದೆ. ಹುಝೂರ್ ಹೇಳೀದರು. Balcoming ಯಿಂದಲೂ ಕಠಿಣವಾದರೆ ನೀವು By pass ಮಾಡುತ್ತೀರಿ.

ಹುಝೂರ್ ಕೇಳಿದರು. Stem cell ನಿಂದಲೂ ತೆರವುಗೊಳಿಸುವ ವಿಧಾನ ಪ್ರಾರಂಭವಾಗಿದೆಯೇ.

ಆಗ ಅವರು ಹೇಳಿದರು. ಹೌದು ಹುಝೂರ್! ಬಹುಶ: ಅದರ ಮೇಲೆ ಕೆಲಸ ನಡೆಯುತ್ತಿದೆ. ಆದರೆ Cronory Heart disease ನಲ್ಲಿ ಕಡಿಮೆ, ಆದರೆ Heart muscles ದುರ್ಬಲವಾಗಿದ್ದರೆ stem cell ಹೆಚ್ಚಾಗಿ ಉಪಯೋಗಿಸುತ್ತಾರೆ. ಅದು ಪಾಕಿಸ್ತಾನದ ರಬ್ವಾದಲ್ಲಿ ಮಾಡುತ್ತಿದ್ದಾರೆ.

ಹುಝೂರ್ ಹೇಳಿದರು. ಹೃದಯ ರೋಗಿಗಳಿಗೆ ಹೆಚ್ಚಾಗಿ ಮುಂಜಾವಿನ ಸಮಯದಲ್ಲಿ Attach ಆಗುತ್ತಿದೆ ಎಂದು ಕೇಳಿಬರುತ್ತಿದೆ. ಡಾ॥ ನೂರಿ ಸಾಹಿಬ್ ಅದರ ಮೇಲೆ ಒಂದು Article ಬರೆದಿದ್ದಾರೆ. ಅವರು "ಅಲಾ ಬಿಝಿಕ್ರಿಲ್ಲಾಹಿ ತತ್‌ಮಯಿನ್ನಲ್ ಖುಲೂಬ್" ಕೇಂದ್ರ ಬಿಂದುವನ್ನಾಗಿ ಮಾಡಿ ಬರೆದಿದ್ದಾರೆ. ವ ತಹಜ್ಜುದ್ ನಮಾಝ್ (ರಾತ್ರಿಯ ವೇಳೆ ಮಾಡುವ ನಮಾಝ್) ಮಾಡಲು ಏಳುವವರು ಮತ್ತು ನಮಾಝ್ ನಂತರ ಸ್ವಲ್ಪ ಮಟ್ಟಿಗೆ exerecise ಮಾಡುವವರಿಗೆ ಈ ರೋಗ ಬರುವುದು ತೀರ ಕಡಿಮೆ.

ಹುಝೂರ್ ಹೇಳಿದರು. ಮೆಡಿಸಿನ್‌ನಲ್ಲಿ ತುಂಭ ಕಡಿಮೆ ಹುಡುಗರಿದ್ದಾರೆ. 2.4% ಮಾತ್ರ. ಆಗ ಸೆಕ್ರೆಟರಿ ಸಾಹಿಬ್ ತಾಲೀಮು ಹೇಳಿದರು. ಹುಝೂರ್ ಇಂಜಿನಿಯರಿಂಗ್ ಕಡೆ ಹೆಚ್ಚು ಒಲವು ಹೊಂದಿದ್ದಾರೆ. ಹುಝೂರ್ ಹೇಳಿದರು. ಇಂಜಿನಿಯರಿಂಗ್ ಕಡೆ ಒಲವು ಇದ್ದರೆ ಎಷ್ಟು buiilding ಗಳು ಕಟ್ಟಬಹುದು. ಜನರಿದ್ದರೆ ತಾನೇ ಬಿಲ್ಡಿಂಗ್‌ಗಳಲ್ಲಿ ಇರುವುದು. ಸವಲತ್ತು ಹೆಚ್ಚು ನೀಡುತ್ತಿದ್ದಾರೆ. ಆದರೆ ಪ್ರಯತ್ನ ಏನೂ ಇಲ್ಲ. ಅಹ್ಮದಿ ಹುಡುಗರಿಗೆ ಮೆಡಿಸಿನ್‌ನಲ್ಲೂ ಹೋಗಬೇಕಾಗಿದೆ.

ಒಬ್ಬ ಖಾದಿಮ್ Research ಮಾಡುತ್ತಿರುವ ಮಿತ್ರರಿಗೆ ಪ್ರಶ್ನೆ ಕೇಳಿದರು. ನನ್ನ ಮೊದಲ ಪ್ರಶ್ನೆಯೇನೆಂದರೆ ನೀವು ಎರಡು ಜೀವಸತ್ವಗಳನ್ನು (Protein) Target ಮಾಡುತ್ತಿದ್ದೀರಿ. ಇದು ಎಲ್ಲ cell ಗಳಲ್ಲಿ ಇವೆ. ನೀವು ಯಾವ ರೀತಿ ಈ ಎಲ್ಲ Receiptress ಗೆ close ಮಾಡಬಹುದು?

ಅವರು ಅದಕ್ಕೆ ಉತ್ತರ ನೀಡುತ್ತಾ ಹೇಳಿದರು. Basically Receiptor's ಗಳ ಸಂಖ್ಯೆಗಳನ್ನು ನೋಡುವ ಅವಶ್ಯಕತೆಯಿದೆ. monocytes ಗಳಲ್ಲಿ ಅದರ ಸಂಖ್ಯೆ ಹೆಚ್ಚಿದೆ. Receiptors ಸಹ ಎರಡೇ ಇದೆ.

ಆಗ ಹುಝೂರ್ ಹೇಳಿದರು. ಯಾವ ವಸ್ತು ಸಹ ಅಲ್ಲಾಹನು ವ್ಯರ್ಥವಾಗಿ ಸೃಷ್ಟಿಸಲಿಲ್ಲ. ಒಂದು Receiptor ಅನ್ನು ಬಂದ್ ಮಾಡಲು ಇಚ್ಛಿಸಿದರೆ, Antibody ಸಹ ಕೆಲಸ ಮಾಡುತ್ತಿರುತ್ತದೆ. Immune system ಇದೆ. ಕೆಲ ಮಟ್ಟಿಗೆ ಅದು Develop ಆಗುತ್ತದೆ. ಅತಿ ಹೆಚ್ಚು ನಷ್ಟ ಯಾವುದರಿಂದ ಇದೆ ಅದು ನೋಡಬೇಕಾಗುತ್ತದೆ. ಮೊದಲು ಅದನ್ನು Target ಮಾಡಬೇಕು. ಮತ್ತೆ ಅದನ್ನು Target ಮಾಡುವುದರಿಂದ Antibodies ಎಷ್ಟು ಕೆಲಸ ಮಾಡಬಹುದೆಂದರೆ, ಬೇರೆಯದನ್ನು ಸ್ವಯಂ ನಿಯಂತ್ರಿಸಲು ಪ್ರಾರಂಭಿಸಬಹುದು.

ಪ್ರಶ್ನೆ ಮಾಡುವ ವಿದ್ಯಾರ್ಥಿಗೆ ಹುಝೂರ್ ಕೇಳಿದರು. ನೀವು ಡಾಕ್ಟರ್ ಆಗಿದ್ದೀರಿ?

ಆ ವಿದ್ಯಾರ್ಥಿ ಉತ್ತರಿಸಿದನು. ನಾನು ಮಾಲಿಕ್ಯೂಅರ್ ವಿಜ್ಞಾನದಲ್ಲಿ Master student ಆಗಿದ್ದೇನೆ.

ಹುಝೂರ್ ಮುಂದುವರೆದು ಕೇಳಿದಕ್ಕೆ ವಿದ್ಯಾರ್ಥಿ ಹೇಳಿದನು. ನಾನು ಪ್ರಾಸ್ಟೇಟ್ cancer ಮೇಲೆ ಕೆಲಸ ಮಾಡುತ್ತಿದ್ದೇನೆ. ಹುಝೂರ್ ಕೇಳಿದರು. ಅದರ ಮೇಲೆ ಏನು Research ಮಾಡುತ್ತಿದ್ದೀರಿ. ಸಾಧಾರಣವಾಗಿ 40, 45 ವಯಸ್ಸಿನ ನಂತರ ಈ ಕಾಯಿಲೆ ಬರುತ್ತದೆ.

ಆ ವಿದ್ಯಾರ್ಥಿ ಹೇಳಿದನು. Western society ಯಲ್ಲಿ ನಮಗಿಂತ ಪ್ರಾಸ್ಟೇಟ್ cancer ಅವರಲ್ಲಿ ಅಧಿಕವಾಗಿದೆ, ನಾವು ಏಷ್ಯನ್ನರು ನಮ್ಮ ಜಿನಿಟಿಕ್ಸ್‌ನಲ್ಲಿ ಪ್ರಾಸ್ಟೇಟ್ ಕ್ಯಾನ್ಸರ್‌ನ ಜೀನ್ಸ್‌ಗಳಲ್ಲ. ನಾನು ಎಂಟ್ರೋಜನ್, ಮೇಲ್ ಹಾರ್ಮೋನ್ಸ್ ಮೇಲೆ ಕೆಲಸ ಮಾಡುತ್ತಿದ್ದೇನೆ. ಅದನ್ನು ನಾವು Target ಮಾಡುತ್ತಿದ್ದೇವೆ. ಏಕೆಂದರೆ ಅದು ಪ್ರಾಸ್ಟೇಟ್ cancer ನಲ್ಲಿ ಪ್ರಾಮುಖ್ಯತೆ ಹೊಂದಿದೆ. ಅದನ್ನು ನಾವು Target ಮಾಡಿದರೆ ಪ್ರಾಸ್ಟೇಟ್ cancer ಅನ್ನು ತಡೆಗಟ್ಟಬಹುದು.

ಹುಝೂರ್ ಕೇಳಿದರು. ಅದಲ್ಲದೆ ಬೇರೆ ಕಾರಣಗಳಿವೆಯೇ?

ಆಗ ಆ ವಿದ್ಯಾರ್ಥಿ ಹೇಳಿದನು. ಹೌದು ಎಂಟ್ರೋಜ್ ಏನೂ Receiptor ಆಗಿದ್ದೆ. ಆದರೆ ಇನ್ನು ಹೆಚ್ಚಿನ ವಸ್ತುಗಳು ಅದರೊಂದಿಗೆ Attack ಆಗಿವೆ. ಬಹಳಷ್ಟು ಸಿಂಕಲಿಂಗ್ path ನಲ್ಲಿವೆ. ವಿವಿಧ Research Group ಕೆಲವು ಸಿಂಕಲಿಂಗ್ path ಗಳನು Target ಮಾಡುತ್ತಿವೆ. ನಾನು ಎಂಟ್ರೋಜನ್ Receiptor ಮತ್ತು ಅದರ ಜೊತೆ ಇರುವ ಹ್ಯತ್‌ಶಾಟ್ ಪ್ರೋಟೀನ್ ಅನ್ನು Target ಮಾಡುತ್ತಿದ್ದೇನೆ. ಹುಝೂರ್ ಹೇಳಿದರು. ಮತ್ತೆ ನೀವು ಒಂದನ್ನೇ ಮಾಡುತ್ತಿದ್ದೀರಿ. ನೀವು ಅವರಿಗೆ ಮಾಡಿದ ಪ್ರಶ್ನೆ ನಿಮಗೂ ಬರುತ್ತಿದೆ. ನೀವು ಒಂದನ್ನು ಮಾಡುತ್ತಿದ್ದರೆ ಉಳಿದವುಗಳನ್ನು ಏಕೆ ಮಾಡುವುದಿಲ್ಲ. ಆಗ ಆ ಖಾದಿಮ್ ಹೇಳಿದರು. ಹುಝೂರ್ ಮುಖ್ಯ Target ನಮ್ಮದು ಎಂಟ್ರೋಜನ್ Receiptor ಆಗಿದೆ.

ಹುಝೂರ್ ಹೇಳಿದರು. ನೀವು ಅವರಿಂದ ಇದೇ ಕೇಳಬಯಸುತ್ತಿದ್ದ ಮಟ್ಟದಲ್ಲಿ ನಿಯಂತ್ರಿಸಬಹುದು. ಎರಡನೆಯದಾಗಿ ನೀವು 100% ಯಾರಿಗೂ ಗುಣಪಡಿಸಲು ಸಾಧ್ಯವಿಲ್ಲ. ಅದರ Result 65, 70% ಬಂದರೂ ಅದು ಯಶಸ್ಸು ಎಂದು ಹೇಳಬಹುದು. ನಿಮ್ಮದು ಬಂದರೆ ನೀವು ಯಶಸ್ಸು ಎನ್ನಬಹುದು.

ಇನ್ನೊಬ್ಬ ವಿದ್ಯಾರ್ಥಿಯೂ ಕೇಳಿದನು. ನನ್ನ ಮೆಡಿಕಲ್ Research ಪ್ರಕಾರ ಇಮಿಯೂನ್ cell ಏನಿದೆಯೋ ಅದು ನಿಧಾನವಾಗಿ ಔಷಧಿಗಳ ಪ್ರಭಾವದಿಂದ ಸರಿಯಾಗಿ ಕೆಲಸ ಮಾಡುವುದಿಲ್ಲ ಮತ್ತು ಇನ್‌ಫ್ಲೂಖುಂಝೂ ಹಾಗೂ ಅದೇ ರೀತಿಯ ರೋಗಗಳು ಹೆಚ್ಚು ಬರುತ್ತಿವೆ. ಅದರಿಂದ ತುಂಬ ಹಾನಿಯಾಗುವುದು. ಹುಝೂರ್ ಹೇಳಿದರು. ಕೆಲ ಅವಧಿ ಜೀವ ಉಳಿಯುವ ಸಂಭವವಿರಬಹುದು. ಅವರು ಹೇಳುತ್ತಾರೆ. ಜೀವಿತದ ಅವಧಿ ಸ್ವಲ್ಪ ಹೆಚ್ಚು ವಿಸ್ತಾರವಾಗುವುದು. ಸ್ವಲ್ಪ ಮಟ್ಟಿಗೆ ಜೀವನ ಮಟ್ಟ ಸುಧಾರಿಸಬಹುದು. ಅವರು ಮನುಷ್ಯ ಶಾಶ್ವತ ಜೀವನ ಪಡೆಯಬಹುದು ಎಂದು ಹೇಳಲಿಲ್ಲ. ಅದು ಮುಂದಿನ ಲೋಕದಲ್ಲಿ ದೊರೆಯುವುದು. ಆದುದರಿಂದ ಅಲ್ಲಾಹನ ಆರಾಧನೆ ಹೆಚ್ಚು ಮಾಡಿರಿ. ಅದಕ್ಕಾಗಿಯೇ ಡಾ॥ ನೂರಿ ಸಾಹಿಬ್ ಒಂದು ಸಂದರ್ಭದಲ್ಲಿ ಹೇಳಿದ್ದರು. ಆರಾಧನೆ ಮಾಡುವವರು, ಸಾಧಾರಣದಿಂದ ಹೆಚ್ಚಿನ ಅವಧಿ ಪಡೆಯಬಹುದು ಅಥವಾ ಕನಿಷ್ಠ ಮಟ್ಟ ಅಸಮಾಧಾನದ ಮೃತ್ಯು ಹೊಂದುವುದಿಲ್ಲ.

ಅಂತೂ ಈ ಪ್ರಶ್ನೆಯ ಉತ್ತರ ಅವರು ಕೊಡಬಹುದು, ನಾನು ಸಾಮಾನ್ಯವಾದ ಉತ್ತರ ನೀಡಿರುತ್ತೇನೆ. ಅವರು ಹೇಳಿದರು. ಹುಝೂರರ ಉತ್ತರ ಸರಿಯಾಗಿದೆ. ನಾನು ನನ್ನ ಕಡೆಯಿಂದಲೂ ಅದೇ ಉತ್ತರ ಭಾವಿಸುತ್ತೇನೆ. ಇದು ಪ್ರಾಥಮಿಕ ಹಂತದಲ್ಲಿ ತಡೆಗಟ್ಟುವ ಪ್ರಯತ್ನವಾಗಿದೆ. ಅಂತಿಮವಾದ ಚಿಕಿತ್ಸೆ ಅಂಜಿಯೋಪ್ಲಾಸ್ಟಿ ಮತ್ತು ಸರ್‌ಜರಿಯೇ ಆಗಿರುತ್ತದೆ.

ಹುಝೂರ್ ಹೇಳಿದರು. ಅಂತಿಮ ಚಿಕಿತ್ಸೆ ಸರ್‌ಜರಿಯೇ ಆಗಿದೆ ಅಥವಾ Homoyopathic ಉಪಯೋಗಿಸಬಹುದು. ಅದು ನಿಮ್ಮ ಇಮ್ಯೂನ್ system ಉತ್ತಮಗೊಳಿಸುತ್ತದೆ. ಶರೀರದ ಇಮ್ಯೂನ್ system ಗೆ ವೇಗ ನೀಡುತ್ತದೆ. ಮತ್ತೆ ಅದರಿಂದ cure ಆಗುತ್ತದೆ. ಆದುದರಿಂದಲೇ ಅದನ್ನು "ಇಲಾಜ್ ಬಿಲ್‌ಮಸಲ್" (ಅದ್ವಿತೀಯ ಚಿಕಿತ್ಸೆ) ಎನ್ನುತ್ತಾರೆ. Homoepatchic ಸಹ ಆಗಾಗ ಉಪಯೋಗಿಸಿಕೊಳ್ಳಿ.

ಅನಂತರ ಮು. ಝುಹೀರ್ ಅಹ್ಮದ್ ಸಾಹಿಬ್ ತನ್ನ Presentation ಪ್ರಸ್ತುತಪಡಿಸಿದರು.

ಅವರು Technical ವಿಶ್ವವಿದ್ಯಾನಿಲಯ Frriberg ನಲ್ಲಿ Phd ವಿದ್ಯಾರ್ಥಿ ನೆಲೆಯಲ್ಲಿ ಕಾರ್ಯ ಮಾಡುತ್ತಿದ್ದಾರೆ. ಅವರು ಹೇಳಿದರು. ನನ್ನ Research Nuclear Reactor ನಿಂದ ಪಡೆಯುವ High level Madioactive waste ಸಂಬಂಧಿಸಿದ್ದಾಗಿದೆ. ನಾನು Research ಮಾಡುತ್ತಿದ್ದುದ್ದು ಯಾವ material, canister ಮಾಡಲು ಉತ್ತಮವಾಗಬಹುದು. ಅದರಲ್ಲಿ HLRW ಅಳವಡಿಸಿ ದೀರ್ಘ ಅವಧಿಯವರಗೆ ಸುರಕ್ಷಿತ ರೀತಿಯಲ್ಲಿ ಇಡಬಹುದು. ಈ ನೆಲೆಯಲ್ಲಿ ನಾನು (SIC) Siticon corboid ಮೇಲೆ Research ಮಾಡುತ್ತಿದ್ದೇನೆ.

HLRW, Nuclear Reactor ನಲ್ಲಿ ಉಪಯೋಗಿಸಲ್ಪಟ್ಟ ಇಂಧನ ಆಗಿರುತ್ತದೆ. ಈ ಇಂಧನವು ಉದ್ದುದ್ದ ಸಲಾಖೆಯ ರೂಪದಲ್ಲಿರುತ್ತದೆ. ಈ ಸಲಾಖೆ (Reds) ಗಳನ್ನು Neclear Reactor ನಿಂದ ಉಪಯೋಗಿಸಿದ ಮೇಲೆ ಹೊರಗೆ ತಂದಾಗ ಅತ್ಯಂತ ಬಿಸಿ ಹಾಗೂ ತುಂಬ Madieactive ಆಗಿರುತ್ತದೆ. ಅದರ ಪ್ರಕಾಶ ಸುಮಾರು 10,000 ಕಿ.ಮೀ ಪ್ರತಿ ಗಂಟೆಯಾಗಿರುತ್ತದೆ.

ಅದರ ಭೀಕರತೆಯನ್ನು ಅಂದಾಜಿಸಬಹುದಾದರೆ ಹೀಗೆ ಮಾಡಬಹುದು. ಮಾನವ ಶರೀರಕ್ಕೆ 100 Ram radioactivity ದೊರೆತರೆ ಒಂದು ಗಂಟೆಯ ಒಳಗೆ ಅವನ ಮರಣವಾಗುತ್ತದೆ.

ಆದುದರಿಂದಲೇ HLRW ಅನ್ನು Neclear Reactor ನಿಂದ ಹೊರಗೆ ತೆಗೆಯುತ್ತಲೇ ಆಳವಾದ ನೀರಿನಲ್ಲಿ ಬಿಸಾಕುತ್ತಾರೆ. ಅದರ ಆಳ ಕನಿಷ್ಠ 40 ಫೀಟ್ ಇರುತ್ತದೆ. ಅದರ ಉದ್ದೇಶವೆಂದರೆ ಈ Waste ತಂಪಾಗಬೇಕು ಮತ್ತು ಅದರ Madioactivity ಒಂದು ಮಟ್ಟಕ್ಕೆ ಕಡಿಮೆಯಾಗಬೇಕು.

ಈ Waste pools ಗಳಲ್ಲಿ ಈ waste ಅನ್ನು ಹೆಚ್ಚು ಪ್ರಕಾಶಯುಳ್ಳ ಭಾಗವನ್ನು ಮತ್ತೊಮ್ಮೆ ಬಳಕೆಯಲ್ಲಿ ತರುತ್ತಾರೆ. ಅದನ್ನು Reprocessing ಎನ್ನುತ್ತಾರೆ. ಮತ್ತೆ ಉಳಿದ ಭಾಗವನ್ನು ಗಾಜಿನ ಜೊತೆಯಲ್ಲಿ ಕರಗಿಸಿ Solid ಮಾಡಲಾಗುತ್ತದೆ. ಹೀಗೆ ಮಾಡಲು ಕಾರಣ ಭೂಮಿಯೊಳಗಿನ ನೀರನ್ನು ವ್ಯರ್ಥವಾಗದಿರಲಿ ಎಂದು. ಈ Process ಅನ್ನು viification ಎನ್ನುತ್ತಾರೆ.

ಪ್ರೀತಿಯ ಹುಝೂರ್ ಈ Process ನಂತರ ಈ HLRW ಅನ್ನು ಹಾಕಿ Underground tunnels ನಲ್ಲಿ ದಫನ ಮಾಡಲಾಗುತ್ತದೆ. ಅದರ ಆಳ ಕನಿಷ್ಠ ಮಟ್ಟ 500 ಮೀಟರ್ ಆಗಿರುತ್ತದೆ.

ಹುಝೂರ್ ಕೇಳಿದರು. ಅದು ತನ್ನ ಅವಧಿ ಪೂರ್ತಿಗೊಳಿಸಿದ ಮೇಲೆ ನೀವು ಉಪಯೋಗಿಸಿಕೊಳ್ಳುತ್ತೀರಿ. ಅನಂತರ ಅದನ್ನು ಕಳೆಯಲು ನೆಲದಲ್ಲಿ ದಫನ್ ಮಾಡುತ್ತೀರಿ? ಯಾವುದರ ಒಂದು ಗುರಿಯೇ ಇಲ್ಲ. ಅದನ್ನು ಏಕೆ ಮಾಡಬೇಕು?

ಆಗ ಝುಹೀರ್ ಸಾಹಿಬ್ ಹೇಳಿದರು. ಈಗ ಲೋಕವು ಅದರ ಹಾನಿಯನ್ನು ಅಂದಾಜಿಸತೊಡಗಿದೆ. ಅದರಿಂದ ಹೇಗೆ ಮುಕ್ತಿ ಪಡೆಯಬಹುದು.

ಹುಝೂರ್ ಹೇಳಿದರು. ಯಾವ carinstress ನಲ್ಲಿ ಅದನ್ನು ಇಡಲಾಗುತ್ತದೆಯೋ ಅದು Radiation proof ಆಗಿರುತ್ತದೆಯೇ?

ಝುಹೀರ್ ಸಾಹಿಬ್ ಹೇಳಿದರು. ಈಗ ನಮ್ಮ ಮುಂದೆ ಸಮಸ್ಯೆಯಿರುವುದೇನೆಂದರೆ wastes ಎಷ್ಟೊಂದು ಅಧಿಕ Madioactive ಆಗಿರುತ್ತದೆ ಎಂದರೆ ಅದರಿಂದ coppter ಮತ್ತು steel ನ carinsters ಬಹುಬೇಗ ಕರಗಲು ಪ್ರಾರಂಭವಾಗುತ್ತವೆ. ಮತ್ತು callulation ನಿಂದ ಇದು ತಿಳಿದುಬರುತ್ತದೆ. 250 ರಿಂದ 300 ವರ್ಷದವರೆಗೆ ಅದು ಸಂಪೂರ್ಣ ಕರಗಿಹೋಗಬಹುದು. ಅದಾಗ್ಯೂ waste ನ Radioativity ಸುಮಾರು 500 ರಿಂದ 1000 ವರ್ಷದವರೆಗೆ ಬಾಕಿಯಿರುತ್ತದೆ. ಅದರ ಅರ್ಥ carinsters ಬೆಂದು ಹೋದ ನಂತರವೂ Radioactivity ಪರಿಸರದಲ್ಲಿ ಲೀನವಾಗಿರುತ್ತದೆ. ಮಾನವ ಮತ್ತು ಪ್ರಾಣಿ ಜೀವನಕ್ಕೆ ಪ್ರಭಾವಿತಗೊಳಿಸುವುದು. ಆದುದರಿಂದ

ಅವಶ್ಯಕತೆವಿರುವುದೇನೆಂದರೆ carinsters ಎಂತಹ material ನಿಂದ ಮಾಡಲ್ಪಡಬೇಕೆಂದರೆ ಅದು ಈ wastes ಗಳನ್ನು ಕನಿಷ್ಠಮಟ್ಟ 500 ವರ್ಷದವರೆಗೆ ಸುರಕ್ಷಿತವಾಗಿರಬೇಕು.

ನಮ್ಮ ಸಂಶೋಧನೆ ತಂಡ silicon carbide ಮೇಲೆ ಸಂಶೋಧನೆ ನಡೆಸುತ್ತಿದೆ ಮತ್ತು ನಮ್ಮ ಜ್ಞಾನದ ಪ್ರಕಾರ ಈ ಸಮಯ sllicon carbide ಮಾಡಲಿಕ್ಕೆ ಅತ್ಯುತ್ತಮ material ಆಗಿದೆ. ಅದರ ಗುಣವಿಶೇಷಗಳ ಮೇಲೆ ನಾವು ದೃಷ್ಟಿ ಹಾಯಿಸಿದರೆ ತಿಳಿಯಬಹುದಾಗಿದೆ.

1 ಅದರ ಬಲ copper ಮತ್ತು steel ಗಿಂತ ಎಷ್ಟೇ ಪಟ್ಟು ಹೆಚ್ಚಾಗಿದೆ. ಏಕೆಂದರೆ ಅದರಲ್ಲಿ covalent bond ಇದೆ.

2. ಇದು ದೀರ್ಘ ಅವಧಿಯವರೆಗೆ Madicactivity ಅನ್ನು ತಡೆಹಿಡಿಯುವ ಸಾಮರ್ಥ್ಯ ಹೊಂದಿರುತ್ತದೆ. ಏಕೆಂದರೆ ಅದರ ಮೇಲೆ acid ಮತ್ತು base ಪ್ರಭಾವ ಬೀರುವುದಿಲ್ಲ.

3. ಅದಲ್ಲದೆ ಅದರಲ್ಲಿ ಯಾವುದೇ ರೀತಿಯ space ಇರುವುದಿಲ್ಲ. ಕಾರಣ Gases ವಿಸರ್ಜನೆ ಸಾಧ್ಯವಿಲ್ಲ.

4. ಎಲ್ಲದಕ್ಕಿಂತ ದೊಡ್ಡ ಪ್ರಯೋಜನವೇನೆಂದರೆ ಅದರ ಅಂಗಗಳಾದ sand ಮತ್ತು carbon ಎಲ್ಲ ಕಡೆ ದೊರೆಯುತ್ತದೆ ಮತ್ತು ಅವು ತುಂಬ ಕಡಿಮೆ ದೂರದಲ್ಲಿ ದೊರೆಯುತ್ತವೆ. ಅಂದರೆ ಅದರಿಂದ carinster ಮಾಡುವ ಖರ್ಚು steel ಅಥವಾ coppter ತುಂಬ ಕಡಿಮೆ ಆಗಿದೆ.

ಇವೆಲ್ಲ ಗುಣವಿಶೇಷಗಳನ್ನು ಮುಂದಿಟ್ಟುಕೊಂಡು ನಮ್ಮ ಯೋಚನೆಯಲ್ಲಿ silican carbide ನಿಂದ ತಯಾರಾದ carinsters ಹೆಚ್ಚು ತಾಳೆಯಿದ್ದು ಮತ್ತು ಶಾಶ್ವತವಾದುದು. ಆದುದರಿಂದ ನಾವು ವಿವಿಧ ರೀತಿಯ Nuclear Reactors ಪ್ರಕಾರ silicon carbide ನ carinsters ತಯಾರಿಸುತ್ತಿದ್ದೇನೆ.

ಪ್ರಿಯ ಹುಝೂರ್! ಪ್ರತಿ Nuclear Reactor ನ waste ಗಳ ರೂಪ ಬೇರೆ ಬೇರೆಯಾಗಿರುತ್ತದೆ. ಆದುದರಿಂದ wastes ಗಳನ್ನು ತಯಾರು ಮಾಡುವ carinster ಸಹ ಅದರಂತೆಯೇ ಆಗಿರುತ್ತದೆ. ಕೆಲವು Reactors ನ Rods ಗಳ ಉದ್ದ ತುಂಬ ಹೆಚ್ಚಾಗಿರುತ್ತದೆ. ಕಾರಣ carinsters ಸಹ ಉದ್ದವಾಗಿರುತ್ತದೆ.

ಪ್ರೀತಿಯ ಹುಝೂರರೇ! ನನ್ನ Research ಇನ್‌ಶಾಅಲ್ಲಾಹ್ ಮೂರು ಹಂತಗಳಲ್ಲಿ (steps) ಪೂರ್ಣಗೊಳ್ಳುವುದು.

1. ಮೊದಲ ಹಂತದಲ್ಲಿ ಈ carinsters ಗಳ sample models ಮಾಡಲಾಗುವುದು ಮತ್ತು ಅದರ ಮೇಲೆ Labortory Tests ಮಾಡಲಾಗುವುದು.

2. ಎರಡನೆಯ ಹಂತದಲ್ಲಿ (step) ಈ carinssters ಗಳ 3d Numerical Models ಕಂಪ್ಯೂಟರ್ ಮೇಲೆ ಮಾಡಲಾಗುವುದು. ಮತ್ತು ಅದನ್ನು ವಿವಿಧ conditions ಗಳಲ್ಲಿ simulate ಮಾಡಿ ನೋಡಲಾಗುವುದು. ಯಾವ ಯಾವ ಪರಿಸ್ಥಿತಿಗಳಲ್ಲಿ ಅದು carinsters ಸಾಬೀತಾಗುತ್ತವೆ.

3. ಕೊನೆಯ ಹಂತದಲ್ಲಿ ಇವೆಲ್ಲ ಸಂಶೋಧನೆಗಳಿಂದ ಬರುವ ಪರಿಣಾಮಗಳ ಮೇಲೆ ವಿಚಾರಿಸಲಾಗುವುದು ಮತ್ತು ಇತರ materials ನಿಂದ ಮಾಡಲ್ಪಟ್ಟ carinsters ಗಳನ್ನು ತುಲನೆ ಮಾಡಿ ನೋಡಲಾಗುವುದು, ಯಾವುದು ಉತ್ತಮವಿದೆ ಎಂದು.

ಒಬ್ಬ ವಿದ್ಯಾರ್ಥಿ ಪ್ರಶ್ನೆ ಮಾಡಿದನು. ನೀವು ಮಾಡುತ್ತಿರುವ ಹೊಸ carinsters ಅದು ಹೊಸ wastes ಗಳಿಗಾಗಿ ಮಾಡುತ್ತಿದ್ದೀರಿ. ಮೊದಲು ದಫನ್ ಮಾಡಲಾಗಿದ್ದು, ಅದರದ್ದು ಏನಾಗುವುದು?

ಆಗ ಹುಝೂರ್ ಹೇಳಿದರು. ನಿಮ್ಮ ಹತ್ತನೆಯ ಹನ್ನೊರಡನೆಯ ಪೀಳಿಗೆಯು ಅದರ ಶಿಕ್ಷೆ ಅನುಭವಿಸುವುದು.

ಝುಹೀರ್ ಸಾಹಿಬ್ ಹೇಳಿದರು. ಹೌದು1 ಈಗ wstes ಆಗಿದ್ದು ಅದನ್ನು ಮರಳಿ ಉಪಯೋಗಿಸಲಾಗುವುದು, ಆದರೆ ನಂತರ ಅದು ಕೂಡ ಈ ಹೊಸ canisters ಗಳಲ್ಲಿ ಶಿಫ್ಟ್ ಮಾಡಲಾಗುವುದು.

**(ಮುಂದುವರಿಯುವುದು)**

## ಜಲ್ಸ ಸಾಲಾನ ಖಾದಿಯಾನ್ 2020 ರದ್ದುಗೊಳಿಸಲಾಗಿದೆ

ಜಾಗತಿಕ ಅಹ್ಮದಿಯಾ ಮುಸ್ಲಿಮ್ ಜಮಾಅತ್ತಿನ ಎಲ್ಲಾ ಸದಸ್ಯರು ಹಾಗೂ ಹುದ್ದೆದಾರರಿಗೆ ತಿಳಿಸುವುದೇನೆಂದರೆ ಈ ವರ್ಷ ಡಿಸೆಂಬರ್ 25 ರಿಂದ 27ರವರೆಗೆ ನಡೆಯ ಬೇಕಾದ ಜಲ್ಸ ಸಾಲಾನ (ವಾರ್ಷಿಕ ಸಮ್ಮೇಳನ) ಖಾದಿಯಾನ್ ದೇಶದಾದ್ಯಂತ ಹರಡಿರುವ ಸಾಂಕ್ರಾಮಿಕ ರೋಗ ಕೊರೋನದಿಂದ ಹಾಗೂ ಪ್ರವಾಸಿಗಳಿಗೆ ಆಗುವ ಅಸೌಕರ್ಯದ ಕಾರಣದಿಂದ ಹುಝೂರ್[ಅಬಿಅ]ರವರ ನಿರ್ದೇಶನದ ಪ್ರಕಾರ ರದ್ದುಗೊಳಿಸಲಾಗಿದೆ.

**(ನಾಝಿರ್ ಇಸ್ಲಾಹ್-ವ-ಇರ್‌ಶಾದ್ ಮರ್‌ಕಝಿಯಾ, ಖಾದಿಯಾನ್)**

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಪೋಷಿಸುತ್ತಾರೆ. ಮಕ್ಕಳನ್ನು ಆ ಕಾರ್ಯಕ್ಕಾಗಿ ನೇಮಿಸುವುದಿಲ್ಲ. ಅವರಿಂದ ಯಾವುದೇ ಪ್ರತಿಫಲ ಬಯಸುವುದಿಲ್ಲ. ಆದುದರಿಂದ ಹೆತ್ತವರು ತಮ್ಮ ಮಕ್ಕಳನ್ನು ಪರಿವರ್ತಿಸುವ ವಿಧಾನ ಸೇವೆ ಎಂದಾಗುವುದಿಲ್ಲ. ಬದಲು ಅದೊಂದು ಔದಾರ್ಯವಾಗಿರುತ್ತದೆ. ದೊಡ್ಡವರಾಗಿ ಮಗುವೊಂದು ತನ್ನ ಹೆತ್ತವರ ಸೇವೆಯನ್ನು ಮಾಡುವುದಾದರೆ ಅವನು ಅವರ ಸೇವೆಯ ಹಕ್ಕನ್ನು ಪೂರ್ಣಗೊಳಿಸುತ್ತಿಲ್ಲ. ಬದಲು ಅವರ ಔದಾರ್ಯವನ್ನು ನಿಭಾಯಿಸುವ ಪ್ರಯತ್ನವನ್ನು ಮಾಡುತ್ತಿದ್ದಾನೆ.

ಅದೇ ಔದಾರ್ಯದ ಅಡಿಯಲ್ಲಿ ತಮ್ಮ ಶಿಕ್ಷಕರು ಮತ್ತು ಇತರರ ಪರೋಪಕಾರಗಳು ಅಥವಾ ಅವರ ಸಂತಾನದ ನಿಮಿತ್ತ ವರ್ತನೆಯೂ ಸೇರಿರುತ್ತದೆ. ಮತ್ತು ಈ ಆಜ್ಞೆಯ ಅಡಿಯಲ್ಲಿ ಮಾನವ ಕುಲದ ಅತ್ಯಂತ ಮಹೋನ್ನತ ಔದಾರ್ಯವಂತರಾದ ಹಝ್ರತ್ ರಸೂಲುಲ್ಲಾಹ್(ಸ) ರವರು ಸೇರುತ್ತಾರೆ. ಅದಕ್ಕೆ ಸಹಾಬರು ದುರೂದ್ ಮತ್ತು ಪ್ರಾರ್ಥನೆಗಳ ಮೂಲಕ ತಮ್ಮ ಸೇವೆ ಸಲ್ಲಿಸುವ ಪ್ರಯತ್ನದಲ್ಲಿರುತ್ತಾರೆ.

ನನ್ನ ದೃಷ್ಟಿಯಲ್ಲಿ ರಸೂಲ್ ಕರೀಂ(ಸ) ರವರಿಗೆ ಅಲ್ಲಾಹನು ಅವರ ಸಂತಾನಕ್ಕಾಗಿ ಸದಖಾ (ದಾನ) ನೀಡದಿರಲು ನೀಡಿದ ಆಜ್ಞೆಯು ಒಂದು ಜಾಣ್ಮೆಯನ್ನು ಹೊಂದಿದೆ. ಆ ಮೂಲಕ ಉಮ್ಮತೆ ಮುಹಮ್ಮದೀಯರವರಿಗೆ ನೀಡುವ ಸಂದೇಶವೇನೆಂದರೆ ಆ ಮಹೋನ್ನತ ಔದಾರ್ಯ ಪುರುಷನ ಸಂತಾನ ಉಪಕಾರವು ನಾವು ಸದಖಾ (ದಾನ)ದ ಮೂಲಕ ನಿರ್ವಹಿಸಲು ಸಾಧ್ಯವಿಲ್ಲ. ಅದು ಅವರ ಉಪಕಾರದ ಪ್ರತಿಫಲ ಪಡೆಯಲು ನಮ್ಮ ಒಂದು ಕನಿಷ್ಠ ರೀತಿಯ ಪ್ರಯತ್ನ ಮಾತ್ರ ಆಗಿರುತ್ತದೆ.

ನನಗೆ ಯಾವಾಗಲೂ ಅತ್ಯಂತ ಆಶ್ಚರ್ಯವಾಗುತ್ತದೆ. ಮುಸಲ್ಮಾನರು ರಸೂಲುಲ್ಲಾಹ್(ಸ) ರವರ ಔದಾರ್ಯದ ಬಗ್ಗೆ ವಿಶೇಷವಾಗಿ ಕೊಂಡಾಡುತ್ತಾರೆ. ಅದೇ ಕಾರಣದಿಂದ ತಮ್ಮ ಸಂತಾನಕ್ಕೆ ಸದಖಾ (ದಾನ) ನಿಷೇಧ ಮಾಡಿದರು ಎನ್ನುತ್ತಾರೆ. ಆದರೆ ಅವರಿಗೆ ಈ ಭಾವನೆ ಬರುವುದಿಲ್ಲ. ಅವರು ಅಷ್ಟೊಂದು ಔದಾರ್ಯಗಳಾಗಿದ್ದರೆ ನಾನು ಅವರ ಈ ಉಪಕಾರವನ್ನು ಈಡೇರಿಸಲು ಪ್ರಯತ್ನ ಮಾಡುತ್ತಿಲ್ಲ. ಔದಾರ್ಯವಂತರು ಯಾರು ಉಪಕಾರ ಬಯಸುವುದಿಲ್ಲ. ಆದರೆ ಯಾರ ಮೇಲೆ ಉಪಕಾರ ಮಾಡಲಾಗಿದೆಯೋ ಅವರಿಗೆ ಅದರ ಪ್ರತಿಫಲರೂಪವಾಗಿ ಆ ಮಹೋನ್ನತ ಔದಾರ್ಯವಂತನ ಉಪಕಾರವನ್ನು ನೆನೆದು ಕೃತಜ್ಞತೆ ಭಾವನೆಯಿಂದ ಸತ್ಕರ್ಮಗೈಯ್ಯಲು ಮುಸಲ್ಮಾನರಿಗೆ ಈ ಪಾಠ ಕಲಿಸಿದನು. ಒಂದು ವೇಳೆ ನೀವು ರಸೂಲುಲ್ಲಾಹ್(ಸ) ರವರ ಸಂತಾನದಲ್ಲಿ ಯಾರನ್ನಾದರೂ ಬಡವರನ್ನಾಗಿ ಕಂಡರೆ ಅವರನ್ನು ಹುಝೂರ್(ಸ) ರವರ ಔದಾರ್ಯವನ್ನು ನೆನೆದು ಉತ್ತಮವಾಗಿ ವರ್ತಿಸಬೇಕು. ಏಕೆಂದರೆ ಅವರ ಸಂತಾನದೊಡನೆ ದಾನ ನೀಡುವುದು ಸರ್ವಥ ಸಲ್ಲದು. ತಮ್ಮ ಸಹೋದರಿಗೆ ದಾನ ನೀಡುವರೆ? ಹೀಗಿರುವಾಗ ತಮ್ಮ ಈ ಆಧ್ಯಾತ್ಮಿಕ ಪಿತನೊಡನೆ ಸಹೋದರ ರೀತಿಯ ವರ್ತನೆ ಬೇಡವೇ? ಅಕಟಕಟ ಈ ಜಾಣ್ಮೆಯನ್ನು ಅರಿಯದ ಪರಿಣಾಮವಾಗಿ ಮುಸಲ್ಮಾನರು ಎರಡು ಆಜ್ಞೆಗಳಲ್ಲಿ ಒಂದನ್ನು ಬಿಡುವವರಾಗಿದ್ದಾರೆ. ಒಂದು ಅವರು ಸಾದಾತ್‌ರವರ ಮೇಲೆ ಸದಖಾ (ದಾನ) ಮತ್ತು ಝುಕಾತ್ ಖರ್ಚು ನೀಡಲಾರಂಭಿಸಿದ್ದಾರೆ. ಇಲ್ಲ ಅವರ ಸೇವೆಯಿಂದ ಸಂಪೂರ್ಣ ವಂಚಿತರಾಗಿದ್ದಾರೆ.

ನನ್ನ ಮೇಲೆ ಅಲ್ಲಾಹನ ಅನುಗ್ರಹವಿದೆ. ನಾನು ತಡವಾಗಿಯಾದರೂ ಈ ರಹಸ್ಯವನ್ನು ಅರಿತುಕೊಂಡಿದ್ದೇನೆ. ನನಗೆ ಹಲವು ಸಂದರ್ಭದಲ್ಲಿ ಬಡ ಸಾದಾತ್‌ರವರ ಸೇವೆಯನ್ನು ಮಾಡುವ ಭಾಗ್ಯ ದೊರೆತಿದೆ ನಾನು ಅವರಿಗೆ ಸದಖಾ (ದಾನ ನೀಡುವುದು) ಎಂಬ ನೆಲೆಯಲ್ಲಿ ಅಲ್ಲ ಬದಲು ಆ ಮಹೋನ್ನತವಾದಿಯ ಔದಾರ್ಯವನ್ನು ಪರಿಗಣಿಸಿ ಅವರ ಸೇವೆಯ ಪ್ರಯತ್ನದಲ್ಲಿರುತ್ತೇನೆ. "ಫಲ್‌ಹಬ್ದುಲಿಲ್ಲಾಹ್ ಅಲಾ ಝೂಲಿಕ್" ಮುಸಲ್ಮಾನರು ಈ ಮರ್ಮವನ್ನು ಅರಿಯುವವನಾದರೆ ಎಷ್ಟು ಒಳ್ಳೆಯದಾಗಿತ್ತು. ಸಾದಾತ್‌ರಿಗೆ ಸದಖಾ ನೀಡುವ ಅಥವಾ ಅವರ ಕಷ್ಟ ದುಃಖಗಳನ್ನು ಉಪೇಕ್ಷಿಸುವ ಎರಡು ಅಪರಾಧಗಳಿಂದ ಉಳಿಯುವವರಾಗಬೇಕು. ಅವರು ಹೀಗೆ ಮಾಡಿದರೆ ಬಹುಶಃ ಅಲ್ಲಾಹನು ಸಹ ಅವರ ಸಂತಾನದ ಮೇಲೆ ಕರುಣೆ ತೋರುವನು.

**(ತಫ್ಸೀರ್ ಕಬೀರ್ ಸಂಪುಟ 1, ಪುಟ 131-132, ಖಾದಿಯಾನ್ 2010)**

**ಇನ್ಸಾನಿಯತ್ ಝಿಂದಾಬಾದ್**
**ಮಾನವೀಯತೆ ಚಿರಕಾಲ ಬಾಳಲಿ**

**Love for All, Hatred for None**
**ಪ್ರೀತಿ ಯಲ್ಲರಲ್ಲು, ದ್ವೇಶವಿಲ್ಲ ಯಾರಲ್ಲು**

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613
Weekly BADAR Qadian
Distt: Gurdaspur (Pb.) INDIA Qadian - 143516
Postal Reg. No: 3000039689/2020-22 Vol No.1, Thursday, 26 November 2020, Issue No. 46

MANAGER
NAWAB AHMAD.
Mobile : +91 94170-20616
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.500/- (Per Issue: 10/- ) (WEIGHT: 20-50, grms / issue)

## *ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಜರ್ಮನಿಯ ಪ್ರವಾಸ (ಮೇ, ಜೂನ್ 2015)*

**(ಬದರ್ ಸಂಚಿಕೆ 45ರ ವರದಿಯ ಉಳಿದ ಭಾಗ)**

**ವೈಯಕ್ತಿಕ ಹಾಗೂ ಕುಟುಂಬ ಭೇಟಿಗಳು:**

ಅನಂತರ ಹನ್ನೊಂದೂವರೆ ಗಂಟೆಗೆ ಹುಝೂರ್ ತಮ್ಮ ಕಚೇರಿಗೆ ಆಗಮಿಸಿದರು. ಮತ್ತು ಕುಟುಂಬಗಳ ಹಾಗೂ ವೈಯಕ್ತಿಕ ಭೇಟಿಗಳನ್ನು ಪ್ರಾರಂಭಿಸಿದರು. ಇಂದಿನ ಈ ಅಧಿವೇಶನದಲ್ಲಿ 39 ಕುಟುಂಬಗಳ 134 ಜನರು ಮತ್ತು 35 ಬಂಧುಗಳು ವೈಯಕ್ತಿಕವಾಗಿ ಭೇಟಿ ಮಾಡುವ ಭಾಗ್ಯ ಪಡೆದರು. ಭೇಟಿ ಮಾಡುವ ಈ ಕುಟುಂಬಗಳು ಜರ್ಮನಿಯ ವಿವಧ 83 ಜಮಾಅತುಗಳಿಂದ ಆಗಮಿಸಿದರು. KOLN ನಿಂದ 190 ಕಿ.ಮೀ, ಓಸ್ನಬರ್ಕ್‌ನಿಂದ 330 ಕಿ.ಮೀ ದೂರದ ಪ್ರಯಾಣ ಬೆಳೆಸಿ ಬಂದಿದ್ದರು. ಇವೆಲ್ಲ ಕುಟುಂಬಗಳು ಮತ್ತು ಸದಸ್ಯರು ಭೇಟಿಯ ಸಂದರ್ಭದಲ್ಲಿ ತಮ್ಮ ಪ್ರೀತಿಯ ಇಮಾಮರೊಂದಿಗೆ ಚಿತ್ರ ತೆಗೆಯಿಸಿಕೊಳ್ಳುವ ಭಾಗ್ಯ ಪಡೆದರು. ಹುಝೂರ್ ಪ್ರೀತಿಯಿಂದ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಲೇಖನಿ ನೀಡಿದರು ಮತ್ತು ಸಣ್ಣ ವಯಸ್ಸಿನ ಬಾಲಕ ಬಾಲಕಿಯರಿಗೆ ಚಾಕ್ಲೇಟ್ ನೀಡಿದರು.

ಭೇಟಿಗಳ ಈ ಕಾರ್ಯಕ್ರಮವು 2 ಗಂಟೆ 10 ನಿಮಿಷದವರೆಗೆ ನಡೆಯಿತು. ಅನಂತರ ಹುಝೂರ್ ಆಗಮಿಸಿ ಝುಹರ್ ಅಸರ್ ನಮಾಝುಗಳನ್ನು ಜಮಾ ಮಾಡಿ ನಿರ್ವಹಿಸಿಕೊಟ್ಟರು. ನಮಾಝ್ ನಿರ್ವಹಣೆಯ ನಂತರ ತಮ್ಮ ವಸತಿನಿಲಯಕ್ಕೆ ತೆರಳಿದರು.

**ವಿದ್ಯಾರ್ಥಿನಿಲಯಗಳಲ್ಲಿ ಮತ್ತು ವಿಶ್ವವಿದ್ಯಾನಿಲಯಗಳಲ್ಲಿ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳ ಹುಝೂರರೊಡನೆ ಭೇಟಿ**

ಇಂದು ವಿದ್ಯಾನಿಲಯಗಳ ಮತ್ತು ವಿಶ್ವವಿದ್ಯಾನಿಲಯಗಳ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಹುಝೂರರೊಡನೆ ಪ್ರತ್ಯೇಕವಾಗಿ ಭೇಟಿ ಮಾಡುವ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಮೊದಲ ಕಾರ್ಯಕ್ರಮ ವಿದ್ಯಾರ್ಥಿಗಳದ್ದಾಗಿತ್ತು. ಅದರ ವ್ಯವಸ್ಥೆ ಮಸೀದಿಯ ಪುರುಷರ ಸಭಾಂಗಣದಲ್ಲಿ ಮಾಡಲಾಗಿತ್ತು.

ಕಾರ್ಯಕ್ರಮದನ್ವಯ 6 ಗಂಟೆಗೆ ಹುಝೂರ್ ಸಭಾಂಗಣಕ್ಕೆ ಆಗಮಿಸಿದರು ಮತ್ತು ವಿದ್ಯಾರ್ಥಿಗಳ ಕಾರ್ಯಕ್ರಮ ಆರಂಭವಾಯಿತು. ಅದು ಪವಿತ್ರ ಖುರ್‌ಆನ್‌ನ ಪಠಣದೊಂದಿಗೆ ಪ್ರಾರಂಭಿಸಲಾಯಿತು. ಅದನ್ನು ಅಝೀಝುಂ ಅರ್‌ಸಲಾನ್ ಬಾಜ್ವ ನೆರವೇರಿಸಿದರು ಅದರ ಉರ್ದು ಅನುವಾದ ಅಝೀಝುಂ ನವೀದ್ ಅಹ್ಮದ್ ಪ್ರಸ್ತುತಪಡಿಸಿದರು.

ಅನಂತರ ಕಾರ್ಯಕ್ರಮದನ್ವಯ ನೆಷ್ನಲ್ ಸೆಕ್ರೆಟರಿ ಸಾಹಿಬ್ ತಾಲೀಮ್ (ಶಿಕ್ಷಣ) ತಮ್ಮ ಕಾರ್ಯಕ್ರಮದ ವರದಿ ಪ್ರಸ್ತುತಪಡಿಸುತ್ತಾ ಹೇಳಿದರು ಅಹ್ಮದಿಯಾ ಮುಸ್ಲಿಮ್ ಜಮಾಅತ್ ವಿದ್ಯಾರ್ಥಿಗಳ ಸಂಘಟನೆಯಲ್ಲಿ ಕ್ರಮಬದ್ಧ ರೀತಿಯಲ್ಲಿ ವಿದ್ಯಾರ್ಥಿಗಳ DATA ಮತ್ತು ದಸ್ತಾವೇಜುಗಳು ಸಂಗ್ರಹಿಸುತ್ತಿದ್ದಾರೆ. ಇಲ್ಲಿಯವರೆಗೆ ನಾವು 70 ಶೇಕಡ ವಿದ್ಯಾರ್ಥಿಗಳ ದಸ್ತಾವೇಜುಗಳನ್ನು ರೆಕಾರ್ಡ್ ಮಾಡಿರುತ್ತೇವೆ. ವಿದ್ಯಾರ್ಥಿಗಳ ಒಟ್ಟು ಸಂಖ್ಯೆ 369 ಆಗಿದೆ.

* ನಮ್ಮ ದಾಖಲೆಯ ಪ್ರಕಾರ 67% Bachlor ಮಾಡುತ್ತಿದ್ದಾರೆ. 19% Master ಮಾಡುತ್ತಿದ್ದಾರೆ. 10% State Examination ಮಾಡುತ್ತಿದ್ದಾರೆ. 2.4% P.hd ಮಾಡುತ್ತಿದ್ದಾರೆ. ಮತ್ತು 1.1% Diploma ಮಾಡುತ್ತಿದ್ದಾರೆ.

* ಈ 369 ರಲ್ಲಿ ಕೆಳಗೆ ನಮುದಿತ ವಿವಿಧ ಕ್ಷೇತ್ರಗಳಲ್ಲಿ ವಿದ್ಯಾರ್ಥಿಗಳು ಓದುತ್ತಿದ್ದಾರೆ. 37% Engineering ಓದುತ್ತಿದ್ದಾರೆ. 18% informatics ಓದುತ್ತಿದ್ದಾರೆ, 17% economic science ಓದುತ್ತಿದ್ದಾರೆ. 9% natural science ಓದುತ್ತಿದ್ದಾರೆ. 7% human cultural science ಓದುತ್ತಿದ್ದಾರೆ. 5% ಮೆಡಿಸನ್ ಓದುತ್ತಿದ್ದಾರೆ. 5% ಲಾ ಓದುತ್ತಿದ್ದಾರೆ ಮತ್ತು 2% Lecturership ಓದುತ್ತಿದ್ದಾರೆ.

* ಅಹ್ಮದಿಯಾ ಮುಸ್ಲಿಮ್ ವಿದ್ಯಾರ್ಥಿಗಳ ಸಂಘ ಜರ್ಮನಿಯ ವಿವಿಧ 26 ವಿಶ್ವವಿದ್ಯಾನಿಲಯಗಳೊಂದಿಗೆ ವಿಧಿಬದ್ಧವಾದ ಸಂಪರ್ಕ ಇಟ್ಟುಕೊಂಡಿದ್ದೇವೆ. ಅದರನ್ವಯ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತೇವೆ. ಉದಾಹರಣೆಗೆ ಈ ಸಮಯ ಜರ್ಮನಿಯ 12 ವಿಶ್ವವಿದ್ಯಾನಿಲಯಗಳಲ್ಲಿ ಜಮಾಅತ್ ಸಹಿತ ನಮಾಝ್ ಮಾಡುವ ವ್ಯವಸ್ಥೆ ಮಾಡಿಕೊಂಡಿದ್ದೇವೆ. ಮೂರರಲ್ಲಿ ಜುಮಅ ನಮಾಝ್ ಮಾಡುವ ವ್ಯವಸ್ಥೆಯಿದೆ.

* ಅದೇ ರೀತಿ ವಿಶ್ವವಿದ್ಯಾನಿಲಯಗಳಲ್ಲಿ ತಬ್ಲಿಗ್ (ಪ್ರಚಾರ) ಕಾರ್ಯಕ್ರಮಗಳು ಹಮ್ಮಿಕೊಳ್ಳುತ್ತೇವೆ. ಅಹ್ಮದಿ ವಿದ್ಯಾರ್ಥಿಗಳಿಂದ ವಿವಿಧ ವಿಷಯಗಳ ಮೇಲೆ ಚರ್ಚೆ ಏರ್ಪಡಿಸಲಾಗುತ್ತದೆ ಮತ್ತು ಅಧಿವೇಶನಗಳು ನಡೆಯುತ್ತಿವೆ.

* ಇಲ್ಲಿಯವರೆಗೆ Marburg, Hemburg, Frank fort ವಿಶ್ವವಿದ್ಯಾನಿಲಯಗಳಲ್ಲಿ ಮೂರು ಕಾರ್ಯಕ್ರಮಗಳಾಗಿವೆ ಮತ್ತು Hemburg, Heidelburg ವಿಶ್ವವಿದ್ಯಾನಿಲಯಗಳಲ್ಲಿ ಎರಡು ಕಾರ್ಯಕ್ರಮಗಳು ಮುಂದಿನ ತಿಂಗಳಿನಲ್ಲಿ ಆಯೋಜಿಸಲಾಗುವುದು.

* ಅನಂತರ ಕಾರ್ಯಕ್ರಮದನ್ವಯ ಇಬ್ಬರು ವಿದ್ಯಾರ್ಥಿಗಳು ತಮ್ಮ ಸಂಶೋಧನಾ ಪತ್ರಿಕೆಗಳನ್ನು ಓದಿ ಹೇಳಿದರು.

ಮೊದಲು ಮುಕರ್ರಮ್ ನಾದಿರ್ ಅಹ್ಮದ್ ಸಂಧು ಸಾಹಿಬ್ ಅವರು ಮೆಡಿಕಲ್ ವಿದ್ಯಾರ್ಥಿಯರಾಗಿದ್ದಾರೆ. ಅವರು ಹೃದಯಿ ಸಂಬಂಧಿ ರೋಗಗಳ ಮೇಲೆ ತನ್ನ ಸಂಶೋಧನಾ ವರದಿ ಪ್ರಸ್ತುತಪಡಿಸಿದರು.

ಅವರು ಹೇಳಿದರು. ನಾನು ಹೃದಯ ಸಂಬಂಧಿ ರೋಗಗಳ ಮೇಲೆ Research ಮಾಡುತ್ತೇನೆ.

ಹೃದಯ ರೋಗಗಳ ಸಂಬಂಧವಾಗಿ ಹೇಳಿದರು. ಎರಡು ಇಂತಹ ಜೀವಸತ್ವಗಳಿವೆ. (Protin) ಅವು ಹೃಧಯ ರೋಗದ ಪ್ರಾಥಮಿಕ ಹಂತದಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಅದರ ಹೆಸರುಗಳು MTF ಮತ್ತು SDF-1a ಆಗಿವೆ.

ಇವೆರಡೂ ರಕ್ತದ ವಿವಿಧ ಕಣಗಳಲ್ಲಿ interaction ನನ್ನು modeslate ಮಾಡುತ್ತಾರೆ. ರಕ್ತದಲ್ಲಿ Red blood cells ಇರುತ್ತವೆ. ಅವು ಶರೀರಕ್ಕೆ ಆಮ್ಲಜಕ ಒದಗಿಸುತ್ತದೆ. ಅದರಲ್ಲಿ ಕೊರತೆ ಉಂಟಾದರೆ ಇನಿಮಿಯಾ ಬರುತ್ತದೆ. ಅದರಲ್ಲಿ ಬಹುಸಣ್ಣ ಗಾತ್ರದ Platelets ಇರುತ್ತವೆ. ಇದು ರಕ್ತ ಹೆಪ್ಪುಗೊಳಿಸುತ್ತದೆ. ಗಾಯವಾದಾಗಲೆಲ್ಲ ಇದು ರಕ್ತವನ್ನು ಗಾಢಗೊಳಿಸಿ ಹೆಪ್ಪುಗೊಳಿಸುತ್ತದೆ. ಅದರಿಂದ ರಕ್ತಚಲನೆ ನಿಲ್ಲುತ್ತದೆ. ಅದಲ್ಲೆ monocytes ಇರುತ್ತವೆ. ಶರೀರದಲ್ಲಿ ಬ್ಯಾಕ್ಟೀರಿಯಾಗಳು ಸೇರಿಕೊಂಡರೆ ಅಥವಾ Cells ಕೆಟ್ಟು ಹೋದರೆ ಇದು ತನ್ನ ಕಾರ್ಯ ಪ್ರಾರಂಭಿಸುತ್ತದೆ ಮತ್ತು ಅವುಗಳನ್ನೆಲ್ಲಾ ಅಂತ್ಯಗೊಳಿಸಿ ರಕ್ತವನ್ನು ಸ್ವಚ್ಛಗೊಳಿಸುತ್ತದೆ ಇವೆಲ್ಲ cells ಗಳು interaction ನ್ನು ಖಾಯಂಗೊಳಿಸಲು ವಿವಿಧ ಜೀವಸತ್ವಗಳು (Protein) ಇರುತ್ತವೆ. ಅದರಲ್ಲಿ MIF ಮತ್ತು SDF ಒಳಗೊಂಡಿವೆ.

ಪಾಶ್ಚಿಮಾತ್ಯ ದೇಶಗಳಲ್ಲಿ ಅತ್ಯಧಿಕ ಮರಣಗಳು ಹೃದಯ ರೋಗಗಳಿಂದ ಆಗುತ್ತಿವೆ. ಅವರ ದೇಹದ ನರಗಳಲ್ಲಿ Fat ಸಂಗ್ರಹವಾದ ಕಾರಣ ಅವು ಕೆಡುತ್ತದೆ ಮತ್ತು ನಿಧಾನವಾಗಿ ರಕ್ತ ಚಲನೆ ಪೂರ್ಣವಾಗಿ ನಿಂತುಬಿಡುತ್ತದೆ. ಇದು ಹೃದಯ ಸಂಬಂಧಿ ರಕ್ತನಾಳವಾಗಿದ್ದಲ್ಲಿ Heart Attack ಆಗುವ ಸಂಭವವಿರುತ್ತದೆ. ಮಿದುಳಿಗೆ ಸಂಬಂಧನಾಳವಾಗಿದ್ದರೆ ಲಕ್ವ ಹೊಡೆಯುವ ಸಂಭವವಿರುತ್ತದೆ. ಈಗ ಅದರ ವಿಚಾರಣೆ ಹಂತಹಂತವಾಗಿ (Step by step) ಮಾಡಿ ನೋಡೋಣ. ಯಾವುದೇ ರಕ್ತನಾಳದ ಗೋಡೆಯ ಕೆಳಭಾಗ ಮುರಿದುಹೋದರೆ ಚಲಿಸುತ್ತ platelete ಅಲ್ಲಿ ಜಮಾ ಆಗುತ್ತವೆ. ರಕ್ತನಾಳಗಳು ಕೆಡುವ ವಿವಿಧ ಕಾರಣಗಳಲ್ಲಿ ಒಂದು ಕಾರಣ ಅದರಲ್ಲಿ Fat ವೃದ್ಧಿಸುವುದು

*(ಪುಟ ಸಂಖೆ 09 ರಲ್ಲಿ ಮುಂದುವರಿಸಲಾಗಿದೆ)*

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**
**NATIONAL TOLL FREE**
**1800–103–2131**

**ವಿಶೇಶ ಸೂಚನೆ**

**"ಬದರ್" ವಾರಪತ್ರಿಕೆಯ ಚಂದಾದಾರರಲ್ಲಿ ತಮ್ಮ ಬಾಕಿ ಇರುವ ವಾರ್ಷಿಕ ಶುಲ್ಕವನ್ನು ಶೀಘ್ರವೇ ಪಾವತಿಸಲು ವಿನಂತಿ.**
**ಮೊಬೈಲ್ ಸಂಖ್ಯೆ: 9866358609 (ವ್ಯವಸ್ಥಾಪಕರು)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.